ಮಂಗಳೂರು
ಶುಕ್ರವಾರ, 24 ಏಪ್ರಿಲ್ 2026
ಸಂಪುಟ 48, ಸಂಚಿಕೆ 36 ಪುಟಗಳು 14+6
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮೋದಿ ವಿರುದ್ಧ ಖರ್ಗೆ ಹೇಳಿಕೆಗೆ ಬಿಜೆಪಿ ಖಂಡನೆ
• ಪುಟ 9

ಬಿಸಿಲ ಝಳಕ್ಕೆ ಬೆದರಿದ ಕರಾವಳಿ ಜನ | 09

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ | 09

ಎಸ್‌ಎಸ್‌ಎಲ್‌ಸಿ ಶೇ.94 ಪಾಸ್

• **ಬೆಂಗಳೂರು:** 2025-2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಶೇ.94.1ರ ದಾಖಲೆ ಫಲಿತಾಂಶ ಪ್ರಕಟವಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದು, ದಕ್ಷಿಣ ಕನ್ನಡ ಪ್ರಥಮ ಸ್ಥಾನ ಪಡೆದರೆ, ಕಲಬುರಗಿ ಕೊನೆ ಸ್ಥಾನದಲ್ಲಿದೆ. ಈ ಬಾರಿ ಒಟ್ಟು 7 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದಿದ್ದಾರೆ. • ವಿವರ ಪುಟ 9

ಬಂಗಾಳ 92%, ತ.ನಾಡು 85% ಮತದಾನ

• **ಕೋಲ್ಕತ್ತಾ/ಚೆನ್ನೈ:** ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳು ಸ್ವಾತಂತ್ರ್ಯ ನಂತರದ ತಮ್ಮ ಅತ್ಯಧಿಕ ಮತದಾನ ಪ್ರಮಾಣ ದಾಖಲಿಸಿವೆ. ಪಶ್ಚಿಮ ಬಂಗಾಳ ವಿಧಾನಸಭೆಯ ಮೊದಲ ಹಂತದಲ್ಲಿ ಶೇ.92 ಮತ್ತು ತಮಿಳುನಾಡಿನಲ್ಲಿ ನಡೆದ ಏಕ ಹಂತದ ಚುನಾವಣೆಯಲ್ಲಿ ಶೇ.85 ದಾಖಲೆಯ ಮತದಾನವಾಗಿದೆ.
• ವಿವರ ಪುಟ 9

ಇರಾನ್ ಸಣ್ಣ ದೋಣಿಗಳ ಧ್ವಂಸಕ್ಕೆ ಟ್ರಂಪ್ ಹುಕುಂ

• **ದುಬೈ:** ಹಾರ್ಮುಜ್ ಜಲಸಂಧಿಯ ಆಸುಪಾಸಿನ ಪ್ರದೇಶಗಳಲ್ಲಿ ಹಡಗುಗಳಿಗೆ ಹಾನಿ ಮಾಡಬಲ್ಲ ಸ್ಫೋಟಕಗಳನ್ನು ಕಡಲಿನಾಳದಲ್ಲಿ ಹುದುಗಿಸಿ ಇಡಬಲ್ಲ ಸಣ್ಣ ಇರಾನ್ ದೋಣಿಗಳು ಎದುರಾದರೆ ಅವುಗಳನ್ನು ಧ್ವಂಸಗೊಳಿಸಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಶೂಟ್ ಆ್ಯಂಡ್ ಕಿಲ್ ಆದೇಶ ನೀಡಿದ್ದಾರೆ.
• ವಿವರ ಪುಟ 9

SHAKTHI PU COLLEGE
Shakthinagar , Mangalore
ADMISSIONS OPEN FOR PU COLLEGE
AY 2026-27
Enroll now and provide them with the tools they need to succeed in a supportive learning environment.
NEET • JEE • KCET Integrated Coaching
Well-equipped library for excellent learning
Regular Tests, Revision & Doubt-Clearing Sessions
Industrial Visits & Practical Exposure
ENROLL NOW
CONTACT US 9686000046, 9108043552 shakthi.edu.in



ALVA'S Education Foundation®
ALVA'S HIGH SCHOOL
PUTHIGE, MOODUBIDIRE, D.K. - 574227
SSLC RESULTS 2026
139 STUDENTS SCORED ABOVE 95% IN THE FINAL BOARD EXAM
Above 600 Marks 75 Students
Above 90% 300 Students
Above 85% 432 Students
4th State Rank 622 SADHVI PV
5th State Rank 621 PRITHVIRAJ REDDY
6th State Rank 620 ADARSH ANAND
7th State Rank 619 LAKSHMI S
7th State Rank 619 PAVANA KUMAR
ADMISSIONS OPEN 2026-27
ALVA'S English Medium School (State Syllabus NCERT) 1st to 10th Std
ALVA'S Central School (Affiliated to CBSE, New Delhi) GRADE 1 to 12
ALVA'S ICSE School (Affiliated to CISCE, New Delhi) GRADE 1 to 10
STRUCTURED NEET-IIT FOUNDATION COACHING FOR CLASSES 6 - 10 ACROSS CBSE, ICSE & STATE BOARDS
77602 72525, 70265 29757
ALVA'S PU COLLEGE ADMISSIONS OPEN 2026-27
SCIENCE: PCMB | PCMC | PCMS | PCME | NEET | JEE | CET | NATA | NDA
COMMERCE: EBAC | EBAS | EBAH | BASBM | BAEBM | CA | CS | NDA | CLAT | CIVIL SERVICE
ARTS: HEPS | CLAT | NDA | CIVIL SERVICE
STUDENTS CAN AVAIL MERIT BASED SCHOLARSHIPS BASED ON THIER ON BOARDS' SCORES
NEET LONG TERM 2026-27
63663 77823 / 63663 77825 / 63663 77827

BALAVIKAS RESIDENTIAL SCHOOL
SINCE 1989
VIDYANAGAR PERAJE, MANI, BANTWAL TQ, D.K - 574 253
1st Rank in Bantwal Taluk
6th Rank in State
SSLC RESULT 2025-26
POORVI A BHARADWAJ 620 - 99.2%
SANJANA S BHAT 614 - 98.24%
AMSHIKA S K 613 - 98.08%
PRAGATHI R SALIAN 612 - 97.92%
LIKHITH KUMAR L 611 - 97.76%
HANSEEKA S D 608 - 97.28%
STHUTHI 606 - 96.96%
ABHIJNA S SHETTY 604 - 96.64%
SAANVI RAI 603 - 96.48%
M ADITHYA SHETTY 602 - 96.32%
SAMANVI S SHETTY 602 - 96.32%
NIDHISHA 598 - 95.68%
KRITHIKA N 597 - 95.52%
PRANAVYA 597 - 95.52%
SINCHAN 596 - 95.36%
AYISHA RIFA 596 - 95.36%
SAMRDDHI RAI 595 - 95.2%
OLISHA NORONHA 594 - 95.04%
AYISHA FIZAA 590 - 94.4%
VINDHYA A KONDE 590 - 94.4%
BHUVAN H S 588 - 94.08%
MUHAMMAD HAFID 588 - 94.08%
ADHITHRI RAO 584 - 93.44%
AYSHA DAANIA 582 - 93.12%
SAMRIDDHI S 577 - 92.32%
VAISHNAVI G 577 - 92.32%
DIVIJ RAI K 576 - 92.16%
BHOOVIKA 575 - 92%
VAIBHAVI G 574 - 91.84%
DEVIKA K 569 - 91.04%
RISHIK D POOJARY 568 - 90.88%
KOUSHIK V 565 - 90.4%
ADITHI P S 563 - 90.8%
KARTHIK G K 563 - 90.8%
PREETHAM GOWDA 563 - 90.8%
RITURAJ POOJARY 563 - 90.8%
SHARVI U BANGERA 560 - 89.6%
MUHAMMAD RAFI 559 - 89.44%
PREM 556 - 88.96%
DISHA K POOJARY 556 - 88.96%
SUKANYA D KAMATH 555 - 88.8%
KSHITHIJ S SHETTY 552 -= 88.32%
M SAANVI SHETTY 551 - 88.16%
PRIYANKA S SHETTY 548 - 87.68%
NIHAL JAIN 540 - 86.4%
ISHAL MARTIS 540 - 86.4%
SRINIDHI P K 536 - 85.76%
LAVISH VIHAN S 533 - 85.8%
Hearty Congratulations
To All Our Students, Staff & Parents
100% Result
Celebrating Excellence
Distinction 48+ First Class 31=79
Total Appeared
ADMISSION OPEN HOSTEL FACILITIES AVAILABLE FOR BOYS
ENQUIRE NOW Ph: 08255 - 200687 Mob: +919902226466 VIDYANAGAR PERAJE, MANI, BANTWAL TQ, D.K - 574 253

ಮಂಗಳೂರು
ಶುಕ್ರವಾರ, 24 ಏಪ್ರಿಲ್ 2026
ಸಂಪುಟ 48, ಸಂಚಿಕೆ 36 ಪುಟಗಳು 14+6
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬದರಿನಾಥ ದೇಗುಲ ಭಕ್ತರ ಪ್ರವೇಶಕ್ಕೆ ಮುಕ್ತ |೧೧

ಇರಾನ್ ಕ್ಷಿಪಣಿ ಪ್ರದರ್ಶನ |೧೧

ಕೇಂದ್ರ ಸರ್ಕಾರ ನಮ್ಮ ಜತೆಗೆ ಇತ್ತು |೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಷ್ಯ

ದಿನದ ಮಾತು

ಅಹಂಕಾರ ಬಂದವನು ಮಾಡಿದ್ದೆಲ್ಲವೂ ವ್ಯರ್ಥ.
▲ಕಬೀರ್‌ದಾಸ್

ಮತಗಟ್ಟೆಯ ಬಾಗಿಲು ಹೇಳುವ ಮಂಡೇಲಾ ಎಂಬ ಕಹಿಸತ್ಯ
ಉಘೇ ವೀರ ಭೂಮಿಗೆ
◆ಸಂತೋಷ್ ತಮ್ಮಯ್ಯ
◆ಪುಟ ೬

ಕಿರುಸುದ್ದಿ

ಕಾಡಾನೆ ದಾಳಿ: ಇಬ್ಬರು ಅರಣ್ಯ ಸಿಬ್ಬಂದಿ ಗಂಭೀರ

◆**ಚಿಕ್ಕಮಗಳೂರು:** ಕಾಡಾನೆ ದಾಳಿಯಿಂದ ಇಬ್ಬರು ಅರಣ್ಯ ಸಿಬ್ಬಂದಿ ಗಂಭೀರ ಗಾಯಗೊಂಡಿರುವ ಘಟನೆ ಮೂಡಿಗೆರೆ ತಾಲೂಕಿನ ಗೌತಹಳ್ಳಿ ಗ್ರಾಮದಲ್ಲಿ ನಡೆದಿದೆ. ಹಾಸ್ಟೆಲ್ ಕಾಡು ಎಂಬ ಪ್ರದೇಶದಲ್ಲಿ ಗುರುವಾರ ಮುಂಜಾನೆ ಎಂದಿನಂತೆ ಆನೆ ಕಾರ್ಯಪಡೆ ಸಿಬ್ಬಂದಿ ಈ ಭಾಗದಲ್ಲಿ ಕಾಡಾನೆಗಳ ಚಲನವಲನದ ಬಗ್ಗೆ ಪರಿಶೀಲಿಸಿ, ಸಾರ್ವಜನಿಕರಿಗೆ ಮಾಹಿತಿ ಕೊಡುವ ಕಾರ್ಯಾಚರಣೆಯಲ್ಲಿ ನಿರತರಾಗಿದ್ದಾಗ ಒಂಟಿ ಸಲಗವೊಂದು ಏಕಾಏಕಿ ಅರಣ್ಯ ಸಿಬ್ಬಂದಿ ಮೇಲೆ ಎರಗಿ ಬಂದಿದೆ. ➡ಪುಟ ೭

ಜಿಹಾದ್ ಪ್ರಕರಣ ಭೇದಿಸಲು ಎನ್‌ಐಎಗೆ ವಹಿಸಿ

◆**ಬೆಂಗಳೂರು:** ಹುಬ್ಬಳ್ಳಿ ಲವ್ ಜಿಹಾದ್, ಜಿಮ್ ಸ್ಯಾಂಡಲ್, ಕಾರ್ಪೋರೇಟ್ ಜಿಹಾದ್, ಕಾಣೆಯಾದ ಮಳೆಯರ ಪ್ರಕರಣಗಳ ನಡುವಿನ ನಂಟನ್ನು ಭೇದಿಸಲು ಎನ್‌ಐಎ., ಇಡಿ. ಮತ್ತು ರಾಜ್ಯ ಎಸ್‌ಐಟಿ ತನಿಖೆ ನಡೆಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ಒತ್ತಾಯಿಸಿದರು.
◆ಪುಟ ೫

ಬಸ್ ಕಂಡಕ್ಟರ್ ಮಗ ಪ್ರೀತಮ್ ಜೆ. ಪೂಜಾರಿ 625 ಅಂಕ ಪಡೆದು ರಾಜ್ಯಕ್ಕೆ ಟಾಪರ್!

◆**ಕುಂದಾಪುರ:** ಶಂಕರನಾರಾಯಣ ಮದರ್ ಥೆರೆಸಾ ಮೆಮೋರಿಯಲ್ ಶಾಲೆಯ ವಿದ್ಯಾರ್ಥಿ ಪ್ರೀತಮ್ ಜೆ. ಪೂಜಾರಿ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನಿಯಾಗಿದ್ದಾನೆ.

ಪ್ರೀತಮ್ ಬಿದ್ಕಲ್‌ಕಟ್ಟೆ ನಿವಾಸಿ ಗಣಪತಿ ಪೂಜಾರಿ–ನಾಗರತ್ನಾ ದಂಪತಿಯ ಇಬ್ಬರ ಮಕ್ಕಳ ಪೈಕಿ ಹಿರಿಯ ಪುತ್ರ. ತಂದೆ ಗಣಪತಿ ಶ್ರೀ ಲಕ್ಷ್ಮೀ ಎಕ್ಸ್‌ಪ್ರೆಸ್ ಬಸ್‌ನಲ್ಲಿ ಕಂಡಕ್ಟರ್. ತಾಯಿ ನಾಗರತ್ನಾ ಗೃಹಿಣಿ. ಎಲ್.ಕೆ.ಜಿ.ಯಿಂದಲೂ ಈತ ಮದರ್ ಥೆರೆಸಾ ಸಂಸ್ಥೆಯಲ್ಲಿ ಕಲಿತಿದ್ದ. ➡ಪುಟ ೫

ರಾಜ್ಯದಲ್ಲಿ ಇಂಧನ ಪೂರೈಕೆ ಸ್ಥಿರ: ಐಒಸಿ

◆ಪುಟ ೫

ಬಿಕಾಜಿ ಫುಡ್ಸ್ ಸಂಸ್ಥಾಪಕ ರತನ್ ಅಗರ್ವಾಲ್ ನಿಧನ

◆ಪುಟ ೧೧

ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ, ಕಲ್ಬುರ್ಗಿಗೆ ಕೊನೆಯ ಸ್ಥಾನ

ಎಲ್ಲೆಲ್ಲೂ ಫಸ್ಟ್‌ಕ್ಲಾಸ್

ಎಸ್‌ಐಆರ್ ಬಳಿಕ ದಾಖಲೆ ಮತದಾನ

ಎಸ್‌ಎಸ್‌ಎಲ್‌ಸಿ ಶೇ.94 ಪಾಸ್

◆**ಬೆಂಗಳೂರು:** 2025–2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಶೇ.94.1ರ ದಾಖಲೆ ಫಲಿತಾಂಶ ಪ್ರಕಟವಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದು, ದಕ್ಷಿಣ ಕನ್ನಡ ಪ್ರಥಮ ಸ್ಥಾನ ಪಡೆದರೆ, ಕಲಬುರಗಿ ಕೊನೆಯ ಸ್ಥಾನದಲ್ಲಿದೆ. ಈ ಬಾರಿ ಒಟ್ಟು ಏಳು ವಿದ್ಯಾರ್ಥಿಗಳು 625ಕ್ಕೆ 625 ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಪಡೆದುಕೊಂಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಎಲ್ಲರನ್ನೂ ಉತ್ತೀರ್ಣಗೊಳಿಸಿದ್ದನ್ನು ಹೊರತುಪಡಿಸಿದರೆ, 2023ನೇ ಸಾಲಿನ ಫಲಿತಾಂಶ ಶೇ.83.89 ದಾಖಲಾಗಿದ್ದು ಈವರೆಗಿನ ದಾಖಲೆಯಾಗಿತ್ತು. ಪ್ರಸಕ್ತ ಸಾಲಿನಲ್ಲಿ ಶೇ.94.1ರಷ್ಟು ಫಲಿತಾಂಶವು ಹಿಂದಿನ ಎಲ್ಲಾ ದಾಖಲೆಯನ್ನು ಮುರಿದಿದೆ.

ಗುರುವಾರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಕಚೇರಿಯಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿ ನಡೆಸಿ ಫಲಿತಾಂಶದ ವಿವರ ನೀಡಿದರು. ಮಾ.18ರಿಂದ ಏ.2ರವರೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ಒಟ್ಟಾರೆ 8,66,046 ವಿದ್ಯಾರ್ಥಿಗಳು ನೋಂದಣಿಯಾದರೆ 8,56,516 ವಿದ್ಯಾರ್ಥಿಗಳು ಹಾಜರಾಗಿದ್ದರು. ➡ಪುಟ ೭

ಮೂರನೇ ಪರೀಕ್ಷೆ ಇರಲ್ಲ

ಕಳೆದ ಬಾರಿ ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆ ನಡೆಸಲಾಗಿದ್ದು, ಆದರೆ ಈ ಬಾರಿ ಪರೀಕ್ಷೆ 3 ಇರುವುದಿಲ್ಲ. ಪರೀಕ್ಷೆ–2 ಮೇ 18 ರಿಂದ 28ರವರೆಗೆ ನಡೆಯಲಿದೆ. ಪರೀಕ್ಷೆ–2ರಲ್ಲಿ ಅನುತ್ತೀರ್ಣಗೊಂಡವರಿಗೆ ಹಾಗೂ ತೃತೀಯ ಭಾಷೆ ಬರೆಯುವವರಿಗೆ ಯಾವುದೇ ಪರೀಕ್ಷಾ ಶುಲ್ಕ ಇರುವುದಿಲ್ಲ. ಆದರೆ ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಒಂದು ವಿಷಯಕ್ಕೆ 448 ರೂ., ಎರಡು ವಿಷಯಕ್ಕೆ 559 ರೂ., ಮೂರು ಹಾಗೂ ಅದಕ್ಕಿಂತ ಹೆಚ್ಚಿನ ವಿಷಯಕ್ಕೆ 752 ರೂ. ಶುಲ್ಕ ಪಾವತಿಸಬೇಕಾಗುತ್ತದೆ ಎಂದರು.

625ಕ್ಕೆ 625 ಅಂಕ ಪಡೆದವರು

ಬೃಂದಾ ಎಂ. ತಾಪ್ಸೆ | ಪ್ರೀತಮ್ ಪೂಜಾರಿ | ಸೌಜನ್ಯಾ ಕಂದಕೂರ್

ಪ್ರಾರ್ಥನಾ ಬಿರಾದಾರ | ಭರತ್ ಜೆ. | ಸುಖದೇವ

ಧನುಷ್ ಸುಧೀರ್

ಈ ಬಾರಿ ಒಟ್ಟು ಏಳು ಅಭ್ಯರ್ಥಿಗಳು 625ಕ್ಕೆ 625 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿನಿಯರಾದ ಬೆಳಗಾವಿಯ ಕಟಗೇರಿ ಸರ್ಕಾರಿ ಪ್ರೌಢಶಾಲೆಯ ಪ್ರಾರ್ಥನಾ ನಾಗಪ್ಪ ಬಿರಾದಾರ ಪಾಟೀಲ್, ಚಿಕ್ಕಮಗಳೂರಿನ ಕೋಟೆ ಸೈಂಟ್ ಮೇರಿಸ್ ಪ್ರೌಢಶಾಲೆಯ ಬೃಂದಾ ಎಂ. ತಾಪ್ಸೆ, ವಿಜಯಪುರದ ನಾಗರಬೆಟ್ಟ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸೌಜನ್ಯಾ ಬಸವರಾಜ ಕಂದಕೂರ್, ವಿದ್ಯಾರ್ಥಿಗಳಾದ ಬೆಂಗಳೂರು ಉತ್ತರದ ಸದಾಶಿವನಗರ ಪೂರ್ಣ ಪ್ರಜ್ಞಾ ಪ್ರೌಢಶಾಲೆಯ ಧನುಷ್ ಸುಧೀರ್ ಮೈಸೂರು, ದಾವಣಗೆರೆಯ ಕಬ್ಬಾಳ ಶ್ರೀ ವಿದ್ಯಾಲಕ್ಷ್ಮಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಭರತ್ ಜಿ., ಉಡುಪಿಯ ಮದರ್ ತೆರೇಸಾ ಸ್ಮಾರಕ ಶಂಕರನಾರಾಯಣ ಪ್ರೌಢಶಾಲೆಯ ಪ್ರೀತಮ್ ಜೆ. ಪೂಜಾರಿ, ರಾಯಚೂರಿನ ಮಾನ್ವಿ ಬಿವಿಆರ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸುಖದೇವ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದವರಾಗಿದ್ದಾರೆ.

ನಪಾಸಾದ ವಿದ್ಯಾರ್ಥಿಗಳಿಗೂ ಶಾಲೆಗೆ ಬರಲು ಅವಕಾಶ

◆ಪುಟ ೫

ಜಿಲ್ಲಾವಾರು ಫಲಿತಾಂಶ

◆ಪುಟ ೭

ಬಂಗಾಳ 92%, ತ.ನಾಡು 85% ಮತ

ಸ್ವಾತಂತ್ರ್ಯ ನಂತರದ ಅತ್ಯಧಿಕ ಮತದಾನ

◆**ಕೋಲ್ಕತ್ತಾ/ಚೆನ್ನೈ:** ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳು ಸ್ವಾತಂತ್ರ್ಯ ನಂತರದ ತಮ್ಮ ಅತ್ಯಧಿಕ ಮತದಾನ ಪ್ರಮಾಣ ದಾಖಲಿಸಿವೆ. ಪಶ್ಚಿಮ ಬಂಗಾಳ ವಿಧಾನಸಭೆಯ ಮೊದಲ ಹಂತದಲ್ಲಿ ಶೇ.92 ಮತ್ತು ತಮಿಳುನಾಡಿನಲ್ಲಿ ನಡೆದ ಏಕ ಹಂತದ ಚುನಾವಣೆಯಲ್ಲಿ ಶೇ.85 ದಾಖಲೆಯ ಮತದಾನವಾಗಿದೆ. ಬಿಜೆಪಿಯು ಬಂಗಾಳದಲ್ಲಿ

ಮಮತಾ ಬ್ಯಾನರ್ಜಿ ಆವರನ್ನು ಅಧಿಕಾರದಿಂದ ಕೆಳಗಿಳಿಸಲು ಹಾಗೂ ದಕ್ಷಿಣ ಭಾರತದಲ್ಲಿ ತನ್ನ ಪ್ರಭಾವ ವಿಸ್ತರಿಸಲು ಪ್ರಯತ್ನಿಸುತ್ತಿದೆ.

ಮೊದಲ ಹಂತದಲ್ಲಿ ಪಶ್ಚಿಮ ಬಂಗಾಳದ 152 ಕ್ಷೇತ್ರಗಳಲ್ಲಿ ಮತದಾನ ನಡೆಯಿತು. ತಮಿಳುನಾಡಿನ 234 ಸದಸ್ಯರ ವಿಧಾನಸಭೆಗೆ ಒಂದೇ ಹಂತದಲ್ಲಿ ಮತದಾನ ನಡೆದಿದೆ. ಈ ಚುನಾವಣೆಯು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ವಿಚಾರದಲ್ಲಿ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳಲ್ಲಿನ ಭಿನ್ನಾಭಿಪ್ರಾಯಗಳ ನಡುವೆ ನಡೆದಿದೆ.

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ನಾಲ್ಕನೇ ಅವಧಿಗೆ ಅಧಿಕಾರದಲ್ಲಿರಲು ಪ್ರಯತ್ನಿಸುತ್ತಿದ್ದು, ಬಿಜೆಪಿ ಮೊದಲ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಲು ಯತ್ನಿಸುತ್ತಿದೆ. ➡ಪುಟ ೭

ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಸ್ವಾತಂತ್ರ್ಯ ನಂತರದ ಅತ್ಯಧಿಕ ಮತದಾನ ದಾಖಲಾಗಿದೆ. ಇದು ಭಾರತೀಯ ಪ್ರಜಾಪ್ರಭುತ್ವದ ಮಹತ್ವದ ಕ್ಷಣ.
■ **ಜ್ಞಾನೇಶ್ ಕುಮಾರ್,** ಮುಖ್ಯ ಚುನಾವಣಾ ಆಯುಕ್ತ

- ಪ.ಬಂಗಾಳದಲ್ಲಿ ಹಲವಾರು ಕ್ಷೇತ್ರಗಳಲ್ಲಿ ಹಿಂಸಾಚಾರ, ಮತದಾರರಿಗೆ ಬೆದರಿಕೆ, ಬಿಜೆಪಿ ಅಭ್ಯರ್ಥಿಗಳ ಮೇಲೆ ದಾಳಿ
- ಹಿಂಸಾಚಾರ ಘಟನೆಗಳ ಬಗ್ಗೆ ವಿವರವಾದ ವರದಿ ಸಲ್ಲಿಸಲು ಚುನಾವಣಾ ಆಯೋಗ ಸೂಚನೆ
- ಮುರ್ಷಿದಾಬಾದ್‌ನಲ್ಲಿ ಎಜೆಯುಪಿ ಮತ್ತು ಟಿಎಂಸಿ ಬೆಂಬಲಿಗರ ನಡುವೆ ಘರ್ಷಣೆ, ಲಾಠಿಚಾರ್ಜ್, ವಾಹನಗಳಿಗೆ ಹಾನಿ
- ತಮಿಳುನಾಡಿನ ಕೆಲವು ಮತಗಟ್ಟೆಗಳಲ್ಲಿ ಸಣ್ಣ ಮಟ್ಟಿನ ಘರ್ಷಣೆ, ಕೆಲವೆಡೆ ಮತಯಂತ್ರಗಳಿಗೆ ಹಾನಿ
- ಮತ ಚಲಾಯಿಸುವ ವಿಡಿಯೋ ಹಂಚಿಕೊಂಡವನ ಬಂಧನ
- ಚೆನ್ನೈ, ಕಾಂಚೀಪುರಂ, ನಮಕ್ಕಲ್, ಕೃಷ್ಣಗಿರಿ ಸೇರಿದಂತೆ ಹಲವೆಡೆ ಮದುವೆ ಉಡುಪಿನಲ್ಲೇ ಮತ ಚಲಾಯಿಸಿ, ಗಮನ ಸೆಳೆದ ನವಜೋಡಿಗಳು

ಬಿಜೆಪಿ ಅಭ್ಯರ್ಥಿಗಳ ಮೇಲೆ ಟಿಎಂಸಿ ಹಲ್ಲೆ

ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಹಲವೆಡೆ ಘರ್ಷಣೆಗಳು ನಡೆದಿವೆ. ಬಿಜೆಪಿ ಅಭ್ಯರ್ಥಿಗಳಾದ ಸುವೇಂದು ಸರ್ಕಾರ್, ಅಗ್ನಿಮಿತ್ರಾ ಪೌಲ್ ಮೇಲೆ ಟಿಎಂಸಿ ಗೂಂಡಾಗಳು ಹಲ್ಲೆ ನಡೆಸಿದ್ದಾರೆ.

ಟಿಎಂಸಿ ಗೂಂಡಾಗಳ ಅಟ್ಟಹಾಸ

◆ಪುಟ ೧೧

ಬಾಂಬ್ ಹುದುಗಿಸಬಲ್ಲ ದೋಣಿಗಳು ಗುರಿ

ಇರಾನ್ ಸಣ್ಣ ದೋಣಿಗಳ ಧ್ವಂಸಕ್ಕೆ ಟ್ರಂಪ್ ಹುಕುಂ

◆**ದುಬೈ:** ಹಾರ್ಮುಜ್ ಜಲಸಂಧಿಯ ಆಸುಪಾಸಿನ ಪ್ರದೇಶಗಳಲ್ಲಿ ಹಡಗುಗಳಿಗೆ ಹಾನಿ ಮಾಡಬಲ್ಲ ಸ್ಫೋಟಕಗಳನ್ನು ಕಡಲಿನಾಳದಲ್ಲಿ ಹುದುಗಿಸಿ ಇಡಬಲ್ಲ ಸಣ್ಣ ಇರಾನ್ ದೋಣಿಗಳು ಎದುರಾದರೆ ಅವುಗಳನ್ನು ಧ್ವಂಸಗೊಳಿಸಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಶೂಟ್ ಆ್ಯಂಡ್ ಕಿಲ್ ಆದೇಶ ನೀಡಿದ್ದಾರೆ.

ಜಲಸಂಧಿ ಮುಚ್ಚಿರುವ ಸಂದರ್ಭ ಇರಾನ್ ತೈಲವನ್ನು ಕಳ್ಳಸಾಗಣೆ ಮಾಡುತ್ತಿದ್ದ ತೈಲ ಹಡಗೊಂದನ್ನು ಅಮೆರಿಕ

ಸೇನೆ ವಶಪಡಿಸಿದ್ದಾಗಿ ಅಧ್ಯಕ್ಷ ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡಿದ್ದಾರೆ. ಜಾಗತಿಕ ತೈಲ ಮತ್ತು ಅನಿಲ ಪೂರೈಕೆಯ ಶೇ.20ರಷ್ಟು ಪಾಲು ಹಾರ್ಮುಜ್ ಆನ್ನು ದಾಟಿ ಹೋಗುತ್ತವೆ.

ಬಾಂಬ್ ನಿಷ್ಕ್ರಿಯ ಕಾರ್ಯ ಶೀಘ್ರ: ಹಾರ್ಮುಜ್ ಆಸುಪಾಸಿನ ಸಮುದ್ರದಾಳದಲ್ಲಿ ಬಾಂಬ್‌ಗಳನ್ನು ಹುದುಗಿಸಿಡಲು ಬರುವ ಇರಾನ್‌ನ ಸಣ್ಣ ದೋಣಿಗಳನ್ನು ಗುಂಡಿನ ದಾಳಿ ನಡೆಸಿ ಧ್ವಂಸಗೊಳಿಸಲು ಅಮೆರಿಕ ನೌಕಾಪಡೆಗೆ ನಾನು ಆದೇಶ ನೀಡಿದ್ದೇನೆ ಎಂದು ಅಧ್ಯಕ್ಷ ಟ್ರಂಪ್ ಟ್ರುಥ್ ಸೋಶಿಯಲ್ಸ್‌ನಲ್ಲಿ ಬರೆದಿದ್ದಾರೆ. ಯಾವುದೇ ಹಿಂಜರಿಕೆಯಿಲ್ಲ. ಹೆಚ್ಚುವರಿಯಾಗಿ, ನಮ್ಮ ಬಾಂಬ್ ನಿರೋಧಕ ದೋಣಿಗಳು ಜಲಸಂಧಿಯತ್ತ ಪ್ರಯಾಣಿಸುತ್ತಿವೆ. ನಮ್ಮ ಚಟುವಟಿಕೆ ಮೂರು ಪಟ್ಟು ವೇಗದಲ್ಲಿ ನಡೆಸಲು ನಾನು ಆದೇಶವನ್ನು ನೀಡಿದ್ದೇನೆ. ಶೀಘ್ರದಲ್ಲಿ ಹಾರ್ಮುಜ್ ಆಸುಪಾಸಿನ ಕಡಲಿನಾಳದಲ್ಲಿ ಬಾಂಬ್ ನಿಷ್ಕ್ರಿಯಗೊಳಿಸಲು ಕೆಲಸ ಆರಂಭವಾಗಲಿದೆ ಎಂದು ಟ್ರಂಪ್ ಮಾಹಿತಿ ನೀಡಿದ್ದಾರೆ.

ಇರಾನ್ ನಾಯಕತ್ವದಲ್ಲಿ ಬಿರುಕು?

ಇರಾನ್ ಆಡಳಿತದಲ್ಲಿನ ಮಿತವಾದಿಗಳು ಮತ್ತು ತೀವ್ರವಾದಿಗಳ ನಡುವೆ ದೊಡ್ಡ ಬಿರುಕು ಮೂಡಿದೆ ಎಂಬ ಹೊಸ ಬಾಂಬ್ ಅನ್ನು ಅಧ್ಯಕ್ಷ ಟ್ರಂಪ್ ಸಿಡಿಸಿದ್ದಾರೆ. ತಮ್ಮ ನಾಯಕ ಯಾರೆಂದು ನಿರ್ಧರಿಸುವಷ್ಟು ಸಂಕಷ್ಟದ ಪರಿಸ್ಥಿತಿಯನ್ನು ಇರಾನ್ ಅನುಭವಿಸುತ್ತಿದೆ. ಅವರ ನಾಯಕ ಯಾರೆಂದು ಅವರಿಗೆ ಗೊತ್ತಿಲ್ಲ ಎಂದು ಟ್ರಂಪ್ ಕುಹಕವಾಡಿದ್ದಾರೆ.

ಅಮೆರಿಕ ವಶಕ್ಕೆ ತೈಲ ನೌಕೆಗಳು

◆ಪುಟ ೭

ಯಡಿಯೂರಪ್ಪರ 5 ದಶಕಗಳ ರಾಜಕೀಯ ಪಯಣದ ಸಂಭ್ರಮ

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

◆**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಐದು ದಶಕಗಳ ರಾಜಕೀಯ ಪಯಣದ ಸಂಭ್ರಮಾಚರಣೆಯ ಅಭಿಮಾನೋತ್ಸವ ಕಾರ್ಯಕ್ರಮ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿದೆ ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕಾರ್ಯಕ್ರಮವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉದ್ಘಾಟಿಸಿ ಯಡಿಯೂರಪ್ಪರನ್ನು ಸನ್ಮಾನಿಸಲಿದ್ದಾರೆ ಎಂದರು. ಅಭಿಮಾನೋತ್ಸವದ ಹಿಂದಿನ ದಿನ ಅಂದರೆ ಮೇ 8ರಂದು ಸಂಜೆ 6 ಗಂಟೆಗೆ ಯಡಿಯೂರಪ್ಪ ಅವರ ಪುರಪ್ರವೇಶ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ➡ಪುಟ ೭

- ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಕೇಂದ್ರ ಗೃಹ ಸಚಿವ ಶಾ
- ಸಮಾರಂಭದಲ್ಲಿ 10 ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ

ಮೋದಿ ವಿರುದ್ಧ ಖರ್ಗೆ ಹೇಳಿಕೆಗೆ ಬಿಜೆಪಿ ಖಂಡನೆ

◆**ಬೆಂಗಳೂರು:** ಇಡೀ ವಿಶ್ವವೇ ನರೇಂದ್ರ ಮೋದಿ ಅವರ ನಾಯಕತ್ವವನ್ನು ಒಪ್ಪಿಕೊಳ್ಳುವ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮೋದಿ ಅವರನ್ನು ಭಯೋತ್ಪಾದಕರೆಂದು ಹೇಳಿದ್ದು ಬಿಜೆಪಿ ಮಾತ್ರವಲ್ಲದೇ ಇಡೀ ದೇಶ ಇದನ್ನು ಬಲವಾಗಿ ಖಂಡಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಉಗ್ರವಾದಿ ಎಂದು ಹೇಳಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಖಂಡಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಗುರುವಾರ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ವಿಶ್ವದ 25ಕ್ಕೂ ಹೆಚ್ಚು ರಾಷ್ಟ್ರಗಳು ಮೋದಿ ಅವರಿಗೆ ತಮ್ಮ ದೇಶದ ಅತ್ಯುನ್ನತ ಗೌರವ ನೀಡಿವೆ. ಖರ್ಗೆ ಮತ್ತು ಕಾಂಗ್ರೆಸ್ಸಿಗೆ ಪ್ರಧಾನಿಯವರ ಜನಪ್ರಿಯತೆ ಸಹಿಸಿಕೊಳ್ಳಲು ಆಗುತ್ತಿಲ್ಲ. ➡ಪುಟ ೭

ಐದು ದಿನ ಬಿಸಿಗಾಳಿ ಜತೆಗೆ ಉ

ಕರಾವಳಿ ಜಿಲ್ಲೆಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಸದಾ ಮುಂದು ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಈ ಬಾರಿಯ ಎಸ್ಸೆಸೆಲ್ಸಿ ಪರೀಕ್ಷೆಯ ಫಲಿತಾಂಶವೇ ಇದಕ್ಕೆ ಸಾಕ್ಷಿ. ದ.ಕ ಜಿಲ್ಲೆಯಲ್ಲಿ ಪರೀಕ್ಷೆಗೆ ಒಟ್ಟು 27, 207 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 26,771 ಮಂದಿ ಉತ್ತೀರ್ಣರಾಗಿದ್ದು, 436 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಶೇಕಡಾವಾರು ಪ್ರಮಾಣದಲ್ಲಿಯೂ ಜಿಲ್ಲೆಯ ಫಲಿತಾಂಶ ಹೆಚ್ಚಳವಾಗಿದೆ.

ಕರಾವಳಿಯ ಕೀರ್ತಿ ಹೆಚ್ಚಿಸಿದ ಶೈಕ್ಷಣಿಕ ಸಾಧನೆ

ಆಳ್ವಾಸ್ | 93 ವಿದ್ಯಾರ್ಥಿಗಳು 95%ಕ್ಕಿಂತ ಅಧಿಕ ಅಂಕ

ಮೂಡುಬಿದಿರೆ: ಆಳ್ವಾಸ್ ಶಾಲೆಯ 75 ವಿದ್ಯಾರ್ಥಿಗಳು 625ರಲ್ಲಿ 600ಕ್ಕೂ ಹೆಚ್ಚು ಅಂಕ ಪಡೆಯುವ ಮೂಲಕ ಸಾಧನೆ ಮೆರೆದಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದ್ದಾರೆ

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಸಾದ್ವಿ ಪಿ.ವಿ. (622), ಪೃಥ್ವಿರಾಜ್ ರೆಡ್ಡಿ (621), ಆದರ್ಶ (620), ಲಕ್ಷ್ಮಿ (619), ಪವನ್ ಕುಮಾರ್ (619), ಶಾಂಭವಿ (618), ಅನ್ವಿತಾ ಬಿ. (617), ಶಂಕರ ಗೌಡ (617), ಶ್ರೇಯಾ (616), ಸುಷ್ಮಿತಾ (616), ದಿಲೀಪ್ (615), ಕೇಶವ (615), ಪ್ರಿಯಾಂಕ (615), ಸ್ವಾತಿ (615), ವೀರೇಶ್ (615) ಅಂಕಗಳನ್ನು ಪಡೆಯುವುದರ ಮೂಲಕ ವಿಶಿಷ್ಟ ಸಾಧನೆ ಮೆರೆದಿದ್ದಾರೆ ಎಂದರು.

ಶೇಕಡಾ 95ರ ಮೇಲೆ 139 ವಿದ್ಯಾರ್ಥಿಗಳು, ಶೇಕಡಾ 90ರ ಮೇಲೆ 300 ವಿದ್ಯಾರ್ಥಿಗಳು ಹಾಗೂ ಶೇಕಡಾ 85ರ ಮೇಲೆ 432 ವಿದ್ಯಾರ್ಥಿಗಳು ಅಂಕ ಪಡೆದಿದ್ದಾರೆ. ನಾಲ್ಕು ವಿಷಯಗಳಲ್ಲಿ 5 ವಿದ್ಯಾರ್ಥಿಗಳು, ಮೂರು ವಿಷಯಗಳಲ್ಲಿ 13, ಎರಡು ವಿಷಯಗಳಲ್ಲಿ 37, ಹಾಗೂ 1 ವಿಷಯದಲ್ಲಿ 85 ವಿದ್ಯಾರ್ಥಿಗಳು ಶೇ.100 ಅಂಕಗಳನ್ನು ಗಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಪ್ರಶಾಂತ್ ಬಿ., ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ವಿಜಯಾ ಟಿ. ಕುಂದರ್ ಹಾಗೂ ಸಹಾಯಕ ಆಡಳಿತಾಧಿಕಾರಿ ಪ್ರೀತಂ ಮೂರ್ತಿ, ಆಡಳಿತಾಧಿಕಾರಿ ರಾಜೇಶ್ ಕುಮಾರ್ ಶೆಟ್ಟಿ ಇದ್ದರು

ಆಳ್ವಾಸ್‌ನ ಒಟ್ಟು ಪ್ರೌಢಶಾಲಾ ವಿದ್ಯಾರ್ಥಿಗಳು ಅಂತಿಮ ಪರೀಕ್ಷೆಯಲ್ಲಿ 95%ಕ್ಕಿಂತ 139 ವಿದ್ಯಾರ್ಥಿಗಳು ಅಂಕವನ್ನು ಗಳಿಸಿದ್ದಾರೆ ಎಂಬುದು ಪ್ರಾಮುಖ್ಯವಾದ ಅಂಶವಾಗಿದೆ. ಒಟ್ಟಾರೆ ಫಲಿತಾಂಶ ಉತ್ತಮವಾಗಿದ್ದು, ವಿದ್ಯಾರ್ಥಿಗಳ ಪರಿಶ್ರಮ, ಶಾಲಾ ಬೋಧಕವರ್ಗದ ಮಾರ್ಗದರ್ಶನದಿಂದ ಇದು ಸಾಧ್ಯವಾಗಿದೆ. ಈ ಸಾಧನೆ ತೃಪ್ತಿ ತಂದಿದೆ ಎಂದು ಡಾ.ಎಂ.ಮೋಹನ ಆಳ್ವ ತಿಳಿಸಿದ್ದಾರೆ.

ಕಾವೂರು ಬಿಜಿಎಸ್ ಪ್ರೌಢ ಶಾಲೆ: ಸತತ 17ನೇ ಬಾರಿಯೂ ಶೇ.100

ಮಂಗಳೂರು: ಕಾವೂರಿನ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಬಿಜಿಎಸ್ ಪ್ರೌಢಶಾಲೆ (ರಾಜ್ಯ ಪಠ್ಯಕ್ರಮ) 32 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ ಮತ್ತು 20 ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ನಮ್ರದ್ದ ಶೆಟ್ಟಿ 583 (93.28), ಶಿಕಾ ಬಿ. ಶೆಟ್ಟಿ 577 (92.32%), ವಂಶಿ ಆಳ್ವ 575 (92%), ಅದ್ವಿತಾ 568 (91%), ಹರಿ ಕಾರ್ತಿಕ್ 559 (89.44%), ಭೂಷಣ್ ರೈ 559 (89.44%), ಚೇತನ್ ಆರಾಧ್ಯ 557 (89.12%), ವಿಜಯ್ ಕುಮಾರ್ 546 (87.36%), ಮಯಾಂಕ್ ಜೆ. ವಿ. 547 (88%), ಅದಿತಿ 543 (87%), ಎಮ್. ಡಿ. ಇಮ್ರಾನ್ ಅನ್ಸಾರಿ 539 (86.24%), ವಿರುಪಾಕ್ಷಯ್ಯ 524 ಅವರು ಅಧಿಕ ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಮಂಗಳೂರಿನ ಬಿಜಿಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಸರ್ವೋದಯ ಪ್ರೌಢಶಾಲೆ ಪೆರಿಯಡ್ಕ 97.5%

ಮಂಗಳೂರು: 2025–26 ನೇ ಸಾಲಿನ ಎಸ್ಸೆಸೆಲ್ಸಿ ಪರೀಕ್ಷೆ – 1 ರ ಫಲಿತಾಂಶದಲ್ಲಿ ಉಪ್ಪಿನಂಗಡಿ ಬಳಿಯ ಪೆರಿಯಡ್ಕದ ಸರ್ವೋದಯ ಪ್ರೌಢ ಶಾಲೆ 97.5 % ಫಲಿತಾಂಶ ಪಡೆದಿರುತ್ತದೆ. 40 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 39 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಚಂಚಲ 592 (94.72%), ಹೇಮಂತ್ ಕುಮಾರ್ ಎಂ. 582 (93.12%), ಕಾವ್ಯಶ್ರೀ 568 (90.88%,), ಹೇಮಂತ್ ಕುಮಾರ್ ಕೆ. 536 (85.76%) ಪೂಜಾ ಎನ್. 534 (85.44), ಗಗನ್ 532 (85.12%) ಒಟ್ಟು 6 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. 26 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 5 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ, 2 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಡಾ. ಶ್ರೀ ಧರ್ಮಪಾಲನಾಥ ಸ್ವಾಮೀಜಿ ತಿಳಿಸಿದ್ದಾರೆ.

ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆ | ಶೇ. 97 ಫಲಿತಾಂಶ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಕನ್ನಡ ಮಾಧ್ಯಮಕ್ಕೆ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಶೇ. 97 ಫಲಿತಾಂಶ ಬಂದಿದೆ ಎಂದು ಪ್ರಕಟಣೆ ತಿಳಿಸಿದೆ. ಹಾಜರಾಗಿದ್ದ 272 ವಿದ್ಯಾರ್ಥಿಗಳಲ್ಲಿ 263 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಪ್ರಗತಿ 625 ರಲ್ಲಿ 597 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಸಂಸ್ಕೃತದಲ್ಲಿ 125 ರಲ್ಲಿ 125 ಅಂಕವನ್ನು 28 ವಿದ್ಯಾರ್ಥಿಗಳು ಹಾಗೂ 100 ಕ್ಕೆ 100 ಅಂಕವನ್ನು ತೃತೀಯ ಕನ್ನಡದಲ್ಲಿ– 6, ಹಿಂದಿಯಲ್ಲಿ – 7, ವಿದ್ಯಾರ್ಥಿಗಳು ಪಡೆದಿದ್ದಾರೆ. ವಿಶಿಷ್ಟ ಶ್ರೇಣಿಯಲ್ಲಿ 61 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 148 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಸವಣೂರು ವಿದ್ಯಾರಶ್ಮಿ | ಶೇ.100 ಸಾಧನೆ

ಸವಣೂರು: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಸವಣೂರು ವಿದ್ಯಾರಶ್ಮಿ ವಿದ್ಯಾಲಯದ ಎಲ್ಲಾ 26 ವಿದ್ಯಾರ್ಥಿಗಳ ತೇರ್ಗಡೆಯಾಗಿ ಶೇ.100 ಉತ್ತೀರ್ಣತೆ ದಾಖಲಾಗಿದೆ. 16 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 10 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ವಿಶಿಷ್ಟ ಶ್ರೇಣಿಯ ಸಾಧಕರು

ಅಯಿಷತ್ ಇಹ್‌ಶಾನ–602, ಶಝ ಫಾತಿಮ ಪಿ.–600, ಫಾತಿಮತ್ ಹನ–597, ನಿರೀಕ್ಷಾ–590, ಕೆ. ಮಹಮ್ಮದ್ ಇಶಾಂ–586, ಅಶೀರ್ ಇಬ್ರಾಹಿಂ–581, ಸಂಜಯ್ ವೈ.ಎಂ.–581, ಫಾತಿಮತ್ ಸಫಾನ–578, ಅಯಿಷ ಅನ್ಸ–568, ರಿಹಾ ಫಾತಿಮ–557, ನಜ ಎ.–556, ಧೃತಿಕ್ ಎಸ್.ಯು.–555, ಲಿಖಿತ್ ಕೆ.–546, ಆಯಿಷತ್ ತಹಶಿಯ–541, ಪ್ರಣಾಮ್ ಶೆಟ್ಟಿ–536, ಸುಜನ್–533.

ಸಾಧಕ ವಿದ್ಯಾರ್ಥಿಗಳನ್ನು, ಬೋಧಕ ವರ್ಗ ಹಾಗೂ ಸಿಬ್ಬಂದಿಯನ್ನು ಸಂಚಾಲಕರಾದ ಸವಣೂರು ಸೀತಾರಾಮ ರೈ ಕೆ., ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ ಅಭಿನಂದಿಸಿದ್ದಾರೆ ಎಂದು ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ ತಿಳಿಸಿದ್ದಾರೆ.

ಎಕ್ಸಲೆಂಟ್ ಮೂಡುಬಿದಿರೆ | ಅಗ್ರ 10 ರ‍್ಯಾಂಕ್‌ಗಳಲ್ಲಿ 9 ವಿದ್ಯಾರ್ಥಿಗಳು

ಮೂಡುಬಿದಿರೆ: ಅಗ್ರ 10 ರ‍್ಯಾಂಕ್‌ಗಳಲ್ಲಿ ಎಕ್ಸಲೆಂಟ್ ಶಾಲೆಯ 9 ವಿದ್ಯಾರ್ಥಿಗಳು ರ‍್ಯಾಂಕ್‌ಗಳನ್ನು ಪಡೆದು ಸತತ 6ನೇ ಬಾರಿ ಶೇ. 100 ಫಲಿತಾಂಶವನ್ನು ಪಡೆದು ತನ್ನ ಶೈಕ್ಷಣಿಕ ಉತ್ಕೃಷ್ಟತೆಯನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ.

ಸಚಿನ್ ಡಿ. ನಾಯ್ಕ್ 622 (4ನೇ ರ‍್ಯಾಂಕ್), ನಕ್ಷತ್ರ ವಿ. 620 (6 ನೇ ರ‍್ಯಾಂಕ್), ಗಗನ್ ಪಾಟೀಲ್ 618 (8 ನೇ ರ‍್ಯಾಂಕ್), ದೇವಾನಂದ ಹನುಮಂತಗೌಡ ಬಿರಾದಾರ್ 618 (8 ನೇ ರ‍್ಯಾಂಕ್), ಅನ್‌ಮೋಲ್ ಆರ್. ಪಾಟೀಲ್ 618 (8 ನೇ ರ‍್ಯಾಂಕ್), ಪ್ರತೀಕ್ ಸಂಗ್ರೀಷಿ 617 (9 ನೇ ರ‍್ಯಾಂಕ್), ಸಿ. ಹರಿಪ್ರೀತ್ ವಿ. ಪೈ 616 (10 ನೇ ರ‍್ಯಾಂಕ್), ಆರ್ಯನ್ ಕುಮಾರ್ ಹಳ್ಳಿ 616 (10 ನೇ ರ‍್ಯಾಂಕ್), ಆಕಾಂಕ್ಷ ಎಮ್. ಜೈನ್ 616 (10 ನೇ ರ‍್ಯಾಂಕ್) ಅಂಕಗಳನ್ನು ಗಳಿಸುವುದರ ಮೂಲಕ ಸಂಸ್ಥೆಯ ಸಂಸ್ಕಾರಭರಿತ ಗುಣಮಟ್ಟದ ಶಿಕ್ಷಣಕ್ಕೆ ಸಾಕ್ಷಿಯಾಗಿದೆ.

ಈ ಸಾಧನೆಯಲ್ಲಿ 23 ವಿದ್ಯಾರ್ಥಿಗಳು 610ಕ್ಕಿಂತ ಹೆಚ್ಚು, 45 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ಮಿಂಚಿದ್ದಾರೆ. 53 ವಿದ್ಯಾರ್ಥಿಗಳು 95% ಕ್ಕಿಂತ ಹೆಚ್ಚು, 112 ವಿದ್ಯಾರ್ಥಿಗಳು 90% ಕ್ಕಿಂತ ಹೆಚ್ಚು ಹಾಗೂ 151 ವಿದ್ಯಾರ್ಥಿಗಳು 85% ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯನ್ನು ಪಡೆದು ಸಾಧನೆಯನ್ನು ಮೆರೆದಿದ್ದಾರೆ. ವಿಷಯವಾರು ಸಾಧನೆಯಲ್ಲಿಯೂ ವಿದ್ಯಾರ್ಥಿಗಳು ಮೈಲಿಗಲ್ಲು ಸ್ಥಾಪಿಸಿದ್ದು, ಸಂಸ್ಕೃತದಲ್ಲಿ 45 ವಿದ್ಯಾರ್ಥಿಗಳು ಕನ್ನಡದಲ್ಲಿ 44, ಹಿಂದಿಯಲ್ಲಿ 31, ಗಣಿತದಲ್ಲಿ 11, ಸಮಾಜ ವಿಜ್ಞಾನದಲ್ಲಿ 8 ಮತ್ತು ವಿಜ್ಞಾನ ವಿಷಯದಲ್ಲಿ 2 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳು ಮತ್ತು ಪ್ರಥಮ ಭಾಷೆ ಇಂಗ್ಲೀಷ್‌ನಲ್ಲಿ 13 ವಿದ್ಯಾರ್ಥಿಗಳು 125 ಅಂಕಗಳಿಗೆ 124 ಅಂಕಗಳನ್ನು ಪಡೆದು ಮಿಂಚಿದ್ದಾರೆ. ಒಟ್ಟಾರೆಯಾಗಿ 141 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಪಡೆಯುವುದರ ಮೂಲಕ ಸಂಸ್ಥೆಗೆ ಕೀರ್ತಿತಂದಿದ್ದಾರೆ.

ವಿದ್ಯಾರ್ಥಿಗಳ ಈ ಅಭೂತಪೂವ ಯಶಸ್ಸಿಗೆ ಸಂತಸ ವ್ಯಕ್ತಪಡಿಸಿರುವ ಎಕ್ಸಲೆಂಟ್ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್‌ನ ಅಧ್ಯಕ್ಷ ಯುವರಾಜ್ ಜೈನ್, ನಮ್ಮ ವಿದ್ಯಾರ್ಥಿಗಳ ಶಿಸ್ತುಬದ್ಧ ಅಭ್ಯಾಸ, ಪರಿಶ್ರಮ, ಬೋಧಕ ವರ್ಗದವರ ಮಾರ್ಗದರ್ಶನದಿಂದ ಈ ಯಶಸ್ಸು ಲಭಿಸಿದೆ. ಈ ಯಶಸ್ಸಿಗೆ ಶ್ರಮಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ, ಅವರ ಪೋಷಕರಿಗೆ ಹಾಗೂ ಬೋಧಕ ವರ್ಗಕ್ಕೆ ಅಭಿನಂದನೆಗಳನ್ನು ತಿಳಿಸಿದರು.

ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯದ ಹಲವು ವಿದ್ಯಾರ್ಥಿಗಳು ಎಕ್ಸಲೆಂಟ್ ವಿದ್ಯಾ ಸಂಸ್ಥೆಗೆ ಸೇರಿದ ನಂತರ ಅತ್ಯುತ್ತಮ ಫಲಿತಾಂಶ ಪಡೆದಿರುವುದು ಸಂಸ್ಥೆಯ ಉತ್ಕೃಷ್ಟ ಗುಣಮಟ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿಗಳಾದ ರಕ್ಷಿತಾ ಜೈನ್ ಸಂತಸ ವ್ಯಕ್ತಪಡಿಸಿದರು. ಮುಖ್ಯೋಪಾಧ್ಯಾಯ ಶಿವ ಪ್ರಸಾದ್ ಭಟ್ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳ ಈ ಐತಿಹಾಸಿಕ ಸಾಧನೆಗೆ ಹರ್ಷ ವ್ಯಕ್ತಪಡಿಸಿದರು.

826 ತುಳು ಭಾಷಾ ವಿದ್ಯಾರ್ಥಿಗಳು ತೇರ್ಗಡೆ

ಮಂಗಳೂರು: ಈ ಬಾರಿಯ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ 826 ವಿದ್ಯಾರ್ಥಿಗಳು ತುಳು ಭಾಷಾ ವಿಷಯದಲ್ಲಿ ತೇರ್ಗಡೆಯಾಗಿದ್ದಾರೆ. ದ.ಕ. ಹಾಗೂ ಉಡುಪಿಯ ಪ್ರೌಢಶಾಲೆಯಲ್ಲಿ ತೃತೀಯ ಭಾಷೆಯಾಗಿ ತುಳು ಭಾಷೆ ಆಯ್ದುಕೊಂಡು 826 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 826 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ತುಳು ಪಠ್ಯ ಆಯ್ದುಕೊಂಡ ವಿದ್ಯಾರ್ಥಿಗಳಿಗೆ ಹಾಗೂ ತುಳು ಭಾಷಾ ಶಿಕ್ಷಕರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಅಭಿನಂದನೆ ಸಲ್ಲಿಸಿದ್ದಾರೆ.



ಕಟೀಲು ಕನ್ನಡ ಮಾಧ್ಯಮ | 99 ಶೇ. ಫಲಿತಾಂಶ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವಳ ಕನ್ನಡ ಮಾಧ್ಯಮ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 99 ಫಲಿತಾಂಶ ದಾಖಲಿಸಿದೆ. 98 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 97 ಮಂದಿ ಉತ್ತೀರ್ಣರಾಗಿದ್ದಾರೆ. 22 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 55ಮಂದಿ ಪ್ರಥಮ, 11 ದ್ವಿತೀಯ ಹಾಗೂ 9 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶ್ರೇಯಶ್ಯಾಮರಾಯ ಆಚಾರ್ಯ (604), ಬಿ. ಎಂ. ಕೀರ್ತನ್ ಆಚಾರ್ಯ (601), ಗ್ರೇಸನ್ ಸಿಕ್ವೇರಾ (595) ಶಾಲೆಯಲ್ಲಿ ಮೊದಲ ಮೂರು ಸ್ಥಾನದಲ್ಲಿ ಉತ್ತೀರ್ಣರಾಗಿದ್ದಾರೆ.

ಕಟೀಲು ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ 100 ಶೇ. ಫಲಿತಾಂಶ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವಳ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ ಪ್ರಥಮ ಬ್ಯಾಚ್ ಶೇಕಡಾ 100 ಫಲಿತಾಂಶ ದಾಖಲಿಸಿದೆ. 35 ವಿದ್ಯಾರ್ಥಿಗಳಲ್ಲಿ 14 ಮಂದಿ ಅತ್ಯುನ್ನತ ಶ್ರೇಣಿ, 20 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, ಓರ್ವ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಹಾರ್ವಿ ಕುಲಾಲ್ (602), ಸಾವನಿ ಎಸ್. ರಾವ್ (586), ಸಿಂಚನ ಟಿ. ಕುಲಾಲ್ (583) ಶಾಲೆಯ ಮೊದಲ ಮೂರು ಸ್ಥಾನಗಳಲ್ಲಿ ಉತ್ತೀರ್ಣರಾದವರು.

ತಂದೆ ನಿಧನದ ನಡುವೆಯೂ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿ ಶಾಲೆಗೆ ಟಾಪರ್

ಕೊಣಾಜೆ: ತಂದೆಯ ನಿಧನದ ದಿನದಂದೇ ದುಃಖದಿಂದ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆದಿದ್ದ ಕೊಣಾಜೆ ಪದವು ಪ್ರೌಢಶಾಲೆಯ ವಿದ್ಯಾರ್ಥಿನಿ ಫಾತಿಮಾ ಶಿಝಾ 589 ಅಂಕ ಪಡೆಯುವ ಮೂಲಕ ಶಾಲೆಗೆ ಟಾಪರ್ ಆಗಿದ್ದಾಳೆ.

ಕೊಣಾಜೆ ಗ್ರಾಮದ ಕೋಡಿಜಾಲ್ ಕರ್ಮಾರ್ ನಿವಾಸಿ ಫಾತಿಮಾ ಶಿಝಾಳ ತಂದೆ ಸೂಫಿ ಕುಂಞ್ ಕೋಡಿಜಾಲ್ ಅವರು ಅನಾರೋಗ್ಯದಿಂದ ಮಾ.31 ರಂದು ಮಂಗಳವಾರ ನಿಧನರಾಗಿದ್ದರು. ನಿಧನರಾದರೂ ತೀರಾ ಅನಾರೋಗ್ಯದಲ್ಲಿದ್ದರೆಂದು ಮನೆಯವರು ಸಂತೈಸಿ ಮಗಳನ್ನು ಪರೀಕ್ಷೆಗೆ ಕಳುಹಿಸಿದ್ದರು. ಆದರೂ ದುಃಖದಿಂದಲೇ ಪರೀಕ್ಷೆ ಎದುರಿಸಿದ್ದ ಫಾತಿಮಾ ಇದೀಗ ಕೊಣಾಜೆ ಪದವು ಶಾಲೆಗೆ ಟಾಪರ್ ಆಗಿ ಮೂಡಿಬಂದಿದ್ದಾಳೆ.

ಪದ್ಮಭೂಷಣ, ಕರ್ನಾಟಕ ರತ್ನ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ
ನಟಸಾರ್ವಭೌಮ
ಡಾ. ರಾಜ್‌ಕುಮಾರ್
97ನೇ ಜನ್ಮದಿನಾಚರಣೆ
ಶುಕ್ರವಾರ ಏಪ್ರಿಲ್ 24, 2026 ಬೆಳಿಗ್ಗೆ 10.30 ಗಂಟೆಗೆ
ಡಾ.ರಾಜ್‌ಕುಮಾರ್ ಪುಣ್ಯಭೂಮಿ, ಶ್ರೀ ಕಂಠೀರವ ಸ್ಟುಡಿಯೋ ಆವರಣ, ಬೆಂಗಳೂರು
ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಘನ ಉಪಸ್ಥಿತಿ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ

♦ **ಬೆಳ್ತಂಗಡಿ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ, ಶೇ. 100 ರಷ್ಟು ಫಲಿತಾಂಶ ದಾಖಲಿಸಿ ಸಾಧನೆ ಮಾಡಿದೆ. ಜಿ.ಮಾಧುರ್ಯ ಹಾಗೂ ಪೂರ್ವಿ ಭಟ್ 620 ಅಂಕಗಳನ್ನು ಪಡೆದು ರಾಜ್ಯಕ್ಕೆ ಆರನೇ ಸ್ಥಾನವನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಒಟ್ಟು ಏಳು ಮಕ್ಕಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆದು, 35 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದು, 19 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಮೂಲಕ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಶಾಲಾ ಗುಣಮಟ್ಟದ ಶೇಕಡಾವಾರು 94.58 ಪಡೆದು ಶಾಲೆಗೆ ಗರಿಮೆಯನ್ನು ತಂದಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳು ಸಹ ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲೂ ಸಹ ಭಾಗವಹಿಸಿ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವುದು ಬಹಳ ಸಂತಸದ ವಿಷಯ ಎಂದು ಶಾಲಾ ಮುಖ್ಯ ಅಧ್ಯಾಪಕ ಪರಿಮಳ ಎಂ. ವಿ. ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಶಿಕ್ಷಕ ವೃಂದದವರು ವಿದ್ಯಾರ್ಥಿ ಗಳ ಸಾಧನೆಗೆ ಸಂತಸ ವ್ಯಕ್ತ ಪಡಿಸಿದ್ದಾರೆ. ಶಾಲಾ ಆಡಳಿತ ಮಂಡಳಿಯ ನಿರಂತರ ಪ್ರೋತ್ಸಾಹವೇ ಈ ಯಶಸ್ಸಿಗೆ ಕಾರಣವಾಗಿದೆ ಎಂಬುದು ಗಮನಾರ್ಹ ಅಂಶವಾಗಿದೆ.

ಜ್ಞಾನಸುಧಾ ಶೇ.100ಫಲಿತಾಂಶ : ಇಬ್ಬರು ರಾಜ್ಯಕ್ಕೆ ದ್ವಿತೀಯ

♦ **ಕಾರ್ಕಳ:** ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮಹಾಲಕ್ಷ್ಮೀ ಭಾರ್ಗವ್ ಮತ್ತು ಮಹಾಲಕ್ಷ್ಮಿ ಪೈ ಬಿ. 624 ಅಂಕಗಳೊಂದಿಗೆ ರಾಜ್ಯಕ್ಕೆ ದ್ವಿತೀಯ ಹಾಗೂ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿರುತ್ತಾರೆ.

♦ ವೈಷ್ಣವಿಕೆಟ್ಟಿಗಾರ್ 623 ಅಂಕಗಳೊಂದಿಗೆ ಶಾಲೆಗೆ ದ್ವಿತೀಯ ಸ್ಥಾನ ಹಾಗೂ ಆರುಷಿ ಪೂಜಾರಿ 622 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ರಾಜ್ಯದ ಮೊದಲ ಹತ್ತು ಸ್ಥಾನಗಳಲ್ಲಿ ಸಂಸ್ಥೆಯ 11 ವಿದ್ಯಾರ್ಥಿಗಳು ಗುರುತಿಸಿಕೊಂಡಿದ್ದಾರೆ.

116 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಶೇ.100ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ 116 ವಿದ್ಯಾರ್ಥಿಗಳಲ್ಲಿ 13 ವಿದ್ಯಾರ್ಥಿಗಳು 613 (98%)ಕ್ಕಿಂತ ಅಧಿಕ ಅಂಕಗಳನ್ನು, 30 ವಿದ್ಯಾರ್ಥಿಗಳು 600 (96%) ಕ್ಕೂ ಹೆಚ್ಚು ಅಂಕಗಳನ್ನು, 37 ವಿದ್ಯಾರ್ಥಿಗಳು 595 (95%) ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ್ದಾರೆ.

79 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. 95 ಉತ್ತರ ಪತ್ರಿಕೆಗಳು 100ಕ್ಕೆ 100 ಅಂಕಗಳನ್ನು ಪಡೆದಿವೆ. ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರು, ಟ್ರಸ್ಟಿಗಳು, ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

ತಂದೆಯಿಲ್ಲದ ನೋವಿನಲ್ಲೂ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಜ್ಞಾನಸುಧಾದ ಮಹಾಲಕ್ಷ್ಮಿಯರು

♦ **ಕಾರ್ಕಳ:** ಉಡುಪಿಜಿಲ್ಲೆಯಕಾರ್ಕಳಜ್ಞಾನಸುಧಾದ ಮಹಾಲಕ್ಷ್ಮಿಯರು 624 ಅಂಕದೊಂದಿಗೆ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿರುವ ಇವರು ತಂದೆಯನ್ನು ಕಳೆದುಕೊಂಡ ನೋವಿನಲ್ಲಿದ್ದರೂ ಎಸ್ಸೆಸೆಲ್ಸಿ ಪರೀಕ್ಷೆ ಸಾಧನೆ ಮೆರೆದಿದ್ದಾರೆ.

ಮಹಾಲಕ್ಷ್ಮೀ ಭಾಗವ ಕಾರ್ಕಳ ತಾಲೂಕು ಹಿರ್ಗಾನ ಗ್ರಾಮದ ಜಗದೀಶ್ ಭಾಗವ ಹಾಗೂ ವನಿತಾ ದಂಪತಿ ಪುತ್ರಿ. ಈಕೆಯ ತಂದೆ 2025ರ ಮೇ ತಿಂಗಳಲ್ಲಿ ಹೃದಯಾಘಾತಕ್ಕೀಡಾಗಿ ನಿಧನ ಹೊಂದಿದ್ದರು. ಮಹಾಲಕ್ಷ್ಮೀ ಪೈ. ಬಿ. ಕಾರ್ಕಳ ತಾಲೂಕು ಬೈಲೂರು ಗುಡ್ಡೆಯಂಗಡಿ ಮಂಜುನಾಥ ಪೈ ಹಾಗೂ ಮೇಘ ಪೈ ದಂಪತಿ ಪುತ್ರಿ. 2023ರ ಡಿಸೆಂಬರ್ ತಿಂಗಳ ಒಂದು ದಿನ ಮಂಜುನಾಥ ಅವರು ಹಾಲಿನ ಡೈರಿಗೆ ತನ್ನ ಸೈಕಲ್‌ನಲ್ಲಿ ಸಾಗುತ್ತಿದ್ದ ಸಂದರ್ಭ ಬೈಕೊಂದು ಸೈಕಲ್‌ಗೆ ಹೊಡೆದಿತ್ತು. ಪರಿಣಾಮ ಸೈಕಲ್‌ನಿಂದ ಎಸೆಯಲ್ಪಟ್ಟ ಮಂಜುನಾಥ ಅವರಿಗೆ ತೀವ್ರ ಸ್ವರೂಪದ ಗಾಯವಾಗಿ ಬಳಿಕ ಸಾವಿಗೀಡಾಗಿದ್ದರು. ಹಾಗಾಗಿ ತಾಯಿ ಆರೈಕೆಯಲ್ಲೇ ಬೆಳೆದ ಮಹಾಲಕ್ಷ್ಮೀಯರು ತಂದೆ ಇಲ್ಲದ ನೋವಿನಲ್ಲೂ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ತಮ್ಮ ಪರಿಶ್ರಮದೊಂದಿಗೆ ಅತ್ಯುತ್ತಮ ಸಾಧನೆ ತೋರಿದ್ದಾರೆ.

ವಿದ್ಯಾರ್ಥಿನಿಯರ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಡಾ. ಸುಧಾಕರ್ ಶೆಟ್ಟಿ, ಶಿಕ್ಷಕ ವೃಂದದವರು, ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಮಹಾಲಕ್ಷ್ಮೀಯರು ಮುಂದೆ ವಿಜ್ಞಾನ ವಿಭಾಗ ಆಯ್ಕೆ ಮಾಡಿಕೊಂಡಿದ್ದು ಜ್ಞಾನಸುಧಾ ಶಿಕ್ಷಣ ಸಂಸ್ಥೆಯಲ್ಲಿ ಅವರಿಬ್ಬರೂ ಉಚಿತ ಶಿಕ್ಷಣ ಪಡೆಯಲಿದ್ದಾರೆ.

ಮೂಡುಬಿದಿರೆ ರೋಟರಿ ಆಂಗ್ಲ ಮಾಧ್ಯಮ ಶಾಲೆಗೆ ಶೇ. 100% ಫಲಿತಾಂಶ

♦ **ಮೂಡುಬಿದಿರೆ:** ರೋಟರಿ ಎಜುಕೇಶನ್ ಸೊಸೈಟಿಯ ಆಡಳಿತಕ್ಕೊಳಪಟ್ಟ ರೋಟರಿ ಆಂಗ್ಲ ಮಾಧ್ಯಮ ಶಾಲೆಯು ಶೇ. 100 ಫಲಿತಾಂಶವನ್ನು ದಾಖಲಿಸಿದೆ. ಪರೀಕ್ಷೆಗೆ ಹಾಜರಾದ ಎಲ್ಲಾ 135 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 68 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 65 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ ತಲಾ ಓರ್ವ ವಿದ್ಯಾರ್ಥಿ ದ್ವಿತೀಯ ಮತ್ತು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಆರ್ತಿಕ್ಷಾ ರಾವ್ 619 (99.04%) ಅಂಕಗಳನ್ನು ಪಡೆದು ಶಾಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಹಾಗೂ ರಾಜ್ಯಕ್ಕೆ 7ನೇ ರ‍್ಯಾಂಕ್ ಅನ್ನು ಪಡೆದಿದ್ದಾರೆ. ಉಳಿದಂತೆ ಸಮನ್ವಿ ಎಸ್. 612 (97.92%), ಪ್ರೇಕ್ಷಾ ಎಚ್. ಪೂಜಾರಿ 609 (97.44%) ಅಂಕಗಳನ್ನು ಪಡೆಯುವುದರೊಂದಿಗೆ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಒಟ್ಟು 15 ಮಂದಿ ವಿದ್ಯಾರ್ಥಿಗಳು 600 ಅಂಕಗಳಿಂದ ಮೇಲ್ಪಟ್ಟ ಅಂಕಗಳನ್ನು ಪಡೆದಿರುವುದು ಸಂಸ್ಥೆಗೆ ಕೀರ್ತಿ ತಂದಿದೆ. ಈ ಪೈಕಿ ಒಟ್ಟು 24 ವಿದ್ಯಾರ್ಥಿಗಳು ವಿಷಯವಾರು ಪೂರ್ಣ ಅಂಕಗಳನ್ನು ಪಡೆದಿದ್ದಾರೆ. ಉತ್ತಮ ಫಲಿತಾಂಶವನ್ನು ತರುವಲ್ಲಿ ಶ್ರಮಿಸಿದ ವಿದ್ಯಾರ್ಥಿ ಗಳನ್ನು, ಮುಖ್ಯೋಪಾಧ್ಯಾಯಿನಿ ಯವರನ್ನು ಮತ್ತು ಅಧ್ಯಾಪಕ ವೃಂದದವರನ್ನು ಶಾಲಾ ಆಡಳಿತ ಮಂಡಳಿಯ ಪರವಾಗಿ ಅಧ್ಯಕ್ಷ ನಾರಾಯಣ ಪಿ.ಎಮ್., ಕಾರ್ಯದರ್ಶಿ ಅನಂತಕೃಷ್ಣ ರಾವ್ ಹಾಗೂ ಸಂಚಾಲಕ ಪ್ರವೀಣ್‌ಚಂದ್ರ ಜೈನ್ ಅವರು ಅಭಿನಂದಿಸಿದ್ದಾರೆ.

ಸರೋಜಿನಿ ಮಧುಸೂದನ್ ಕುಶೆ ಶಾಲೆ: 98.18% ಫಲಿತಾಂಶ ದಾಖಲು

♦ **ಮಂಗಳೂರು:** ನಗರದ ಅತ್ತಾವರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಸರೋಜಿನಿ ಮಧುಸೂದನ್ ಕುಶೆ ಶಾಲೆಯ ವಿದ್ಯಾರ್ಥಿಗಳು 98.18% ಫಲಿತಾಂಶವನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳಾದ ತುಷಾರ್ ಪಿ. ಶೆಟ್ಟಿ 615 (98.40%), ಪ್ರಿಯಾಂಕ ಕಲಕಪ್ಪ ಆಡಿನ್ 603 (96.48%), ಅತ್ಯಧಿಕ ಅಂಕಗಳಿಸಿ ಸಾಧನೆಗೈದಿದ್ದಾರೆ. 20 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 30 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, ಹಾಗೂ 4 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶೈಕ್ಷಣಿಕ ಸಾಧನೆಯಲ್ಲಿ ಶಾಲೆಯು 'ಎ' ಶ್ರೇಣಿಯನ್ನು ಪಡೆದಿದೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯಿನಿ, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಆದಮಾರು ಪೂರ್ಣಪ್ರಜ್ಞ ಪ್ರೌಢಶಾಲೆ: ಶೇ. 100 ಫಲಿತಾಂಶ

♦ **ಪಡುಬಿದ್ರಿ :** ಆದಮಾರು ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಪ್ರೌಢಶಾಲೆ ಶೇ. 100 ಫಲಿತಾಂಶ ದಾಖಲಿಸಿದ್ದು ಪರೀಕ್ಷೆಗೆ ಹಾಜರಾದ 80 ವಿದ್ಯಾರ್ಥಿಗಳಲ್ಲಿ 80 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 33 ಡಿಸ್ಟಿಂಕ್ಷನ್, 40 ಪ್ರಥಮ ದರ್ಜೆಯಲ್ಲಿ, 13 ದ್ವಿತೀಯ ದರ್ಜೆಯಲ್ಲಿ ಮತ್ತು 2 ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕೆ. ಧೃತಿ ಕಾಮತ್ 616 ಅಂಕ ದೊಂದಿಗೆ ರಾಜ್ಯಕ್ಕೆ 10ನೇ ರ‍್ಯಾಂಕ್, ಪ್ರೇರಣಾ ಡಿ. ಶೆಟ್ಟಿ 609, ಕೌಶಿಕ್ ಪ್ರಭಾಕರ್ ಮೂಲ್ಯ 603 , ಸೋನಾಲಿ ಎಸ್. ಪೂಜಾರಿ 603, ಅನ್ವಿತಾ ಕೆ. ವೈ. 597, ಅಚಿಂತ್ಯ ಜಿ. ನಾವಡ 587 ಅತ್ಯುತ್ತಮ ಅಂಕಗಳನ್ನು ಪಡೆದಿದ್ದಾರೆ. ಸಂಸ್ಥೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಗೌರವ ಕಾರ್ಯದರ್ಶಿ ಶ್ರೀಧರ್ ಕೆ. ರಾವ್, ಗೌರವ ಕೋಶಾಧಿಕಾರಿ ಗಣೇಶ ಹೆಬ್ಬಾರ್, ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯಕ್, ಮುಖ್ಯೋಪಾಧ್ಯಾಯರಾದ ಕಾಂತಿ ಭಟ್ ಅಭಿನಂದಿಸಿದ್ದಾರೆ.

ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣ

ಪುತ್ತೂರು: ಕಳೆದ ಶೈಕ್ಷಣಿಕ ವರ್ಷದಲ್ಲಿ ತೆಂಕಿಲ ವಿವೇಕಾನಂದ ಆಂಗ್ಲಮಾಧ್ಯಮಶಾಲೆಯ 23 ಮಂದಿ ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದಾರೆ. 233 ವಿದ್ಯಾರ್ಥಿಗಳಲ್ಲಿ 112 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಅಪೇಕ್ಷೆ ಎನ್. 621, ಪ್ರೀತಿ ಪ್ರಭು 620 ಹಾಗೂ ಸಾನ್ವಿ ಎಸ್. ಪ್ರಭು 618, ಸಾನ್ವಿ ವೈಲಯ ಕೆ. 613, ನಿರೀಕ್ಷಿತ್ ಹೆಗ್ಡೆ 613, ಅನನ್ಯ ಪಿ. ವಿ. 612, ತುಷಾರ್ ಡಿ. ಕೊಳ್ಳ 610, ಸಾನ್ವಿ ಚನಿಲಾ 610, ಆದ್ಯ ಕೆ. 610, ಸುಪ್ರಜಾ ರಾವ್ 609, ದಿಶಾಂತ್ ಕೆ. 608, ಗೌತಮ ಕೃಷ್ಣ – 607, ಸಾನ್ವಿಕಾ ಎಸ್. 606, ಆರಾಧನ ನಾಯ್ಕ್ ಬಿ. 605, ಯಕ್ಷಿತ್ ಎಸ್. ಶೆಟ್ಟಿ 604, ಧನ್ವಿ ಎ. 604, ಯಥಿನ್ ಬಿ. ಎಸ್. 603, ನಿಲಿಷ್ಕಾ ಕೆ. 603, ಬಿ. ದೀಕ್ಷಾ 602, ಪ್ರತಾ ದಯಾನಂದ ಟಿ. 601,

ಈ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625 ಕ್ಕೆ 624 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ದ್ವಿತೀಯ ರ‍್ಯಾಂಕ್ ಗಳಿಸಿದ್ದೇನೆ. ಈ ಸಾಧನೆಯನ್ನು ನಾನು ನನ್ನ ತಂದೆ – ತಾಯಿ ಹಾಗೂ ಶಿಕ್ಷಕರಿಗೆ ಸಮರ್ಪಿಸುತ್ತೇನೆ. ನನಗೆ ವಿಜ್ಞಾನ ಕ್ಷೇತ್ರದಲ್ಲಿ

ವಿಶೇಷ ಆಸಕ್ತಿ ಇರುವುದರಿಂದ ಶೈಕ್ಷಣಿಕ ನಂತರ ವೈಜ್ಞಾನಿಕ ಸಂಶೋಧನಾ ಕ್ಷೇತ್ರ ಆಯ್ಕೆ ಮಾಡಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದ್ದೇನೆ. ಈ ದಿಸೆಯಲ್ಲಿ ತಂದೆ – ತಾಯಿ ಯರ, ಹಿರಿಯರ ಆಶೀರ್ವಾದ ಹಾಗೂ ಗುರುಗಳ ಮಾರ್ಗದರ್ಶನವೇ ನನಗೆ ಸ್ಫೂರ್ತಿ ನೀಡಿ ಈ ಒಂದು ಗೌರವವನ್ನು ಪಡೆಯಲು ಸಾಧ್ಯವಾಯಿತು. ಇವರೆಲ್ಲರ ಕೃಪೆ ನಿರಂತರ ನನ್ನ ಮೇಲೆ ಇರಲಿ. ನನಗೆ ವಿದ್ಯೆ ನೀಡಿದ ವಿದ್ಯಾ ಸಂಸ್ಥೆಗಳು ನಿರಂತರ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರಲಿ ಎಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತೇನೆ

■ **ಚೈತನ್ಯಶ್ರೀ ಆರ್. ಉಡುಪ,** ರಾಜ್ಯಕ್ಕೆ ದ್ವಿತೀಯ ರ‍್ಯಾಂಕ್ ಪಡೆದ ಕೋಟೇಶ್ವರ ಕೋಟ ವಿವೇಕ ಆಂಗ್ಲ ಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿನಿ

ಹೆಬ್ರಿ ಅಮೃತ ಭಾರತಿ ವಿದ್ಯಾಲಯ: ಶೇ 100 ಸಾಧನೆ

♦ **ಹೆಬ್ರಿ:** ಪಿ. ಆರ್. ಎಸ್. ಅಮೃತ ಭಾರತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆ ಶೇ. 100 ಫಲಿತಾಂಶ ದಾಖಿಲು ಮಾಡಿದೆ. 625ರಲ್ಲಿ 612 ಅಂಕವನ್ನು ಪಡೆದು ಲಾವಣ್ಯ ಹೆಚ್. ವಿ. ಸಂಸ್ಥೆಗೆ ಪ್ರಥಮ ಸ್ಥಾನಿಯಾಗಿದ್ದಾರೆ. 610 ಅಂಕ ಪಡೆದು ಸೃಜನ್ ಭಟ್ ದ್ವಿತೀಯ ಸ್ಥಾನ, 606 ಅಂಕ ಪಡೆದು ಪ್ರಣಮ್ಯ ಕೆ. ತೃತೀಯ ಸ್ಥಾನ, 605 ಅಂಕ ಪಡೆದು ಶ್ರಾವ್ಯ ಹೆಗ್ಡೆ ಚತುರ್ಥ ಸ್ಥಾನವನ್ನು ಪಡೆದಿದ್ದಾರೆ.

ಸಂಸ್ಕೃತ ಪ್ರಥಮ ಭಾಷೆಯಲ್ಲಿ 10, ಕನ್ನಡ ಪ್ರಥಮ ಭಾಷೆಯಲ್ಲಿ 01, ದ್ವಿತೀಯ ಭಾಷೆ ಇಂಗ್ಲೀಷ್ ನಲ್ಲಿ 02, ತೃತೀಯ ಭಾಷೆ ಹಿಂದಿಯಲ್ಲಿ 01, ತೃತೀಯ ಭಾಷೆ ಕನ್ನಡದಲ್ಲಿ 06 ವಿದ್ಯಾರ್ಥಿಗಳು ಪೂರ್ಣಾಂಕ ಪಡೆದಿದ್ದಾರೆ. 38 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್,56 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಫಲಿತಾಂಶದ ಸಾಧನೆಗಾಗಿ ಅಮೃತ ಭಾರತಿ ಟ್ರಸ್ಟಿನ ಅಧ್ಯಕ್ಷ ಸಿಎ ಎಂ. ರವಿರಾವ್, ಕಾರ್ಯದರ್ಶಿ ಹೆಚ್. ಗುರುದಾಸ್ ಶೆಣೈ, ಅಮೃತಭಾರತಿ ವಿದ್ಯಾಲಯದ ಅಧ್ಯಕ್ಷ ಶೈಲೇಶ್ ಕಿಣಿ, ಸರ್ವ ಪದಾಧಿಕಾರಿಗಳು, ವ್ಯವಸ್ಥಾಪಕಿ ಅಪರ್ಣಾ ಆಚಾರ್, ಶಿಕ್ಷಕರು ಮತ್ತು ಬೋಧಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಕೈಸ್ಟ್‌ಕಿಂಗ್‌ನ ಕೆ. ಶ್ರೀಶಾ ಪ್ರಭುಗೆ ರಾಜ್ಯಕ್ಕೆ ಒಂಭತ್ತನೇ ರ‍್ಯಾಂಕ್



♦ **ಕಾರ್ಕಳ:** ಈ ಬಾರಿಯ ಹತ್ತನೇ ತರಗತಿ ಫಲಿತಾಂಶದಲ್ಲಿ ಕಾರ್ಕಳದ ಕೈಸ್ಟ್‌ಕಿಂಗ್ ಆಂಗ್ಲಮಾಧ್ಯಮ ಪ್ರೌಢಶಾಲೆ ಮತ್ತೊಮ್ಮೆ 100 % ಫಲಿತಾಂಶದೊಂದಿಗೆ ಸತತ 17ನೇ ಬಾರಿಗೆ ನೂರು ಶೇ. ಫಲಿತಾಂಶ ದಾಖಿಲಿಸುವ ಮೂಲಕ ಅಮೋಘ ಫಲಿತಾಂಶವನ್ನು ಪಡೆದುಕೊಂಡಿದೆ.

ಸಂಸ್ಥೆಯ ವಿದ್ಯಾರ್ಥಿ ಕೆ. ಶ್ರೀಶಾ ಪ್ರಭು 625 ಕ್ಕೆ 617 ಅಂಕಗಳನ್ನು ಪಡೆದು ರಾಜ್ಯಕ್ಕೆ ಒಂಬತ್ತನೇ ರ‍್ಯಾಂಕ್ ಪಡೆದುಕೊಂಡಿದ್ದಾನೆ. 18 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದುಕೊಂಡಿದ್ದಾರೆ. ಒಟ್ಟು 159 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇದರಲ್ಲಿ 95 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯನ್ನು ಪಡೆದುಕೊಂಡಿದ್ದಾರೆ. ಉಳಿದಂತೆ 62 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ ಎರಡು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇದರೊಂದಿಗೆ ಪರೀಕ್ಷೆ ಬರೆದ ಸಂಸ್ಥೆಯ 98.74% ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದಂತಾಗಿದೆ.

ಒಟ್ಟು 58 ವಿದ್ಯಾರ್ಥಿಗಳು ಎ+ ಅಂದರೆ 90 ಶೇಕಡಾಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದುಕೊಂಡಿದ್ದಾರೆ. 600ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ. ಕೆ. ಶ್ರೀಶಾ ಪ್ರಭು 617, ಅನುಶ್ರೀ ಪ್ರಭು 611, ಆಯಿಷಾ ರೂಬಾ 608, ಧನ್ವಿ ಗಣೇಶ್ ಶೆಟ್ಟಿ 608, ಟಿಸ್ಸಾ ಅಲ್ಫೋನ್ಸಾ ಆಗಸ್ಟೀನ್ 607, ಆದ್ಯಾ ಸುಧೀರ್ ಜೈನ್ 605, ಗೌತಮಿ ಪ್ರಭಾಕರ್ ಶೆಟ್ಟಿ 605. ಲೆನಿಶಾ ಡಿಸೋಜ 604, ನೋರ್ವಿನ್ ಮೆಂಡೋನ್ಸಾ 604, ಸಾನ್ವಿ ಸತೀಶ್ ಶೆಟ್ಟಿ 604, ಸ್ಲಾನಿಯಾ ನಿಸೆಲ್ ನೊರೋನ್ಹಾ 604, ಆರುಷ್ ಎಸ್. ಶೆಟ್ಟಿ 603, ಫಾತಿಮಾ ಶಿಫಾನಾ 603, ಕವನ ಕೆ. ಮೂಲ್ಯ 603, ಸಾನ್ವಿ ಮಾರ್ಟಿನ್ 602, ಅನಿಷಾ ಡಿಸೋಜ 601, ಲೆನಿಶಾ ಲಿಯಾನ್ನಾ ಮೆಂಡೋನ್ಸಾ 601 ಹಾಗೂ

ಶಹನುಮ್ ಫಾತಿಮಾ 601 ಅಂಕಗಳನ್ನು ಪಡೆದಿದ್ದಾರೆ. ಕನ್ನಡದಲ್ಲಿ 25, ಹಿಂದಿಯಲ್ಲಿ 21, ಗಣಿತದಲ್ಲಿ 1 ಹಾಗೂ ಸಮಾಜ ವಿಜ್ಞಾನದಲ್ಲ

ನಪಾಸಾದ ವಿದ್ಯಾರ್ಥಿಗಳಿಗೂ ಶಾಲೆಗೆ ಬರಲು ಅವಕಾಶ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಹಾಗೂ ಪರೀಕ್ಷೆ-2ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಬಯಸಿದರೆ ಶಾಲೆಗೆ ಪುನರ್ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 18 ರಿಂದ 25ರವರೆಗೆ ಪರೀಕ್ಷೆ -2 ನಡೆಯಲಿದ್ದು, ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಮಂಡಳಿಯ ಜಾಲತಾಣದ ಶಾಲಾ ಲಾಗಿನ್ ಮೂಲಕ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಏ.24 ರಿಂದ ಏ.30 ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಶುಲ್ಕದ ಚಲನ್ ಮುದ್ರಿಸಿಕೊಳ್ಳಲು ಮೇ 2 ರವರೆಗೆ ಅವಕಾಶವಿದ್ದು, ಮೇ 2ರಿಂದ 4ರವರೆಗೆ ಬ್ಯಾಂಕ್‌ಗೆ ಹಣ ಜಮೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪರೀಕ್ಷೆ -2ರ ವೇಳಾಪಟ್ಟಿಯನ್ನು ನೋಂದಾಯಿತ ವಿದ್ಯಾರ್ಥಿಗಳಿಗೆ ಮೆಸೆಜ್ ಮೂಲಕ ಕಳಿಸಲಾಗುತ್ತದೆ ಎಂದರು.

ಶಾಲಾವಿಧವಾರು ಫಲಿತಾಂಶ: ಸರ್ಕಾರಿ ಶಾಲೆಯ 3,06,341 ಹಾಜರಾದ ವಿದ್ಯಾರ್ಥಿಗಳಲ್ಲಿ 2,87,878 (ಶೇ.93.97) ಉತ್ತೀರ್ಣರಾಗಿದ್ದು, ಅನುದಾನಿತದಲ್ಲಿ 1,90,032 ವಿದ್ಯಾರ್ಥಿಗಳಲ್ಲಿ 1,75,670, ಅನುದಾನರಹಿತದಲ್ಲಿ 2,73,836 ವಿದ್ಯಾರ್ಥಿಗಳಲ್ಲಿ 2,61,246 ಸೇರಿದಂತೆ ಒಟ್ಟು 7,70,209 ವಿದ್ಯಾರ್ಥಿಗಳಲ್ಲಿ 7,24,794 (ಶೇ.94.1) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಮೆಗಾ ಪಿಟಿಎಂ, ಮನೆಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರುಪಡಿಸುವಂತಹ ಕ್ರಮಗಳು ಫಲಿತಾಂಶ ಸುಧಾರಣೆಗೆ ಪ್ರಮುಖ ಕಾರಣಗಳಾಗಿವೆ. ಫಲಿತಾಂಶ ಮ್ಯಾಜಿಕ್ ಅಲ್ಲ, ಸಮಗ್ರ ತಂಡದ ಪ್ರಯತ್ನ. ಶೇ.1ರಷ್ಟು ಏರಿಕೆಗೆ ಹಲವಾರು ಕ್ರಮಗಳು ಸೇರಿವೆ. ಮುಂದಿನ ವರ್ಷಗಳಲ್ಲಿ ಗುಣಮಟ್ಟವನ್ನು ಕಾಪಾಡುವುದು ಇನ್ನಷ್ಟು ಸವಾಲಾಗಲಿದೆ.
■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಕುಂಬಾಭಿಷೇಕ ಮಹೋತ್ಸವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹದಗೂರು ಶ್ರೀ ಬೀರೇಶ್ವರ ಸ್ವಾಮಿ (ತೊರಸಾಲಪ್ಪ) ಸೇವಾ ಸಮಿತಿ ಆಯೋಜಿಸಿದ್ದ ಬೀರೇಶ್ವರ ಸ್ವಾಮಿ ದೇವಸ್ಥಾನದ ಕುಂಬಾಭಿಷೇಕ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಚಿವ ಬೈರತಿ ಸುರೇಶ್, ಮಾಜಿ ಸಚಿವ ಎಚ್.ಎಂ.ರೇವಣ್ಣ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಇಂದು ಒಳಮೀಸಲಾತಿ ನಿರ್ಧಾರ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶಕ್ಕಾಗಿ ಶುಕ್ರವಾರ ವಿಶೇಷ ಸಚಿವ ಸಂಪುಟ ಸಭೆ ನಿಗದಿಯಾಗಿದೆ. ಒಳ ಮೀಸಲಾತಿ ವಿಚಾರವಾಗಿ ಈ ಸಂಪುಟ ಸಭೆ ಸಾಕಷ್ಟು ಮಹತ್ವ ಪಡೆದುಕೊಂಡಿದೆ. ಅಲ್ಲದೇ ಮಹತ್ವದ ತೀರ್ಮಾನ ಆಗುವ ಸಾಧ್ಯತೆ ಇದೆ.

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ಸಮಿತಿ ನೀಡಿರುವ ಒಳಮೀಸಲಾತಿ ವರದಿ ಅನುಷ್ಠಾನ ಮಾಡುವ ಸಂಬಂಧ ಸರ್ಕಾರ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದೆ. ಒಳಮೀಸಲಾತಿ ಕಲ್ಪಿಸುವ ವಿಚಾರವಾಗಿ ಎಡಗೈ ಮತ್ತು ಬಲಗೈ ನಡುವಿನ ಭಿನ್ನಾಭಿಪ್ರಾಯ ವ್ಯಾಪಕವಾಗಿದೆ. ರಾಜ್ಯ ಸರ್ಕಾರಕ್ಕೆ ಇದು ತಲೆನೋವಾಗಿದೆ. ಎಸ್‌ಸಿ ಸಮುದಾಯದಲ್ಲಿರುವ 101ಕ್ಕೂ ಹೆಚ್ಚು ಉಪ-ಜಾತಿಗಳಲ್ಲಿ, ಅತಿ ಹೆಚ್ಚು ಹಿಂದುಳಿದಿರುವ ಸಮುದಾಯಗಳಿಗೆ ಮೀಸಲಾತಿಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವುದು ಒಳಮೀಸಲಾತಿಯ ಮುಖ್ಯವಾದ ಉದ್ದೇಶ. ಆದರೆ, ಮೀಸಲಾತಿಯಲ್ಲಿ ನ್ಯಾಯಯುತ ಪಾಲು ಸಿಗುತ್ತಿಲ್ಲವೆಂದು ಆರೋಪಿಸಿ, ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಲು ಎಡಗೈ ಸಮುದಾಯಗಳು, ಮಾದಿಗ ಮತ್ತು ಇತರ ಉಪ-ಜಾತಿಗಳು ಒತ್ತಾಯಿಸುತ್ತಿವೆ. ಈ ನಿಟ್ಟಿನಲ್ಲಿ ಹೋರಾಟ, ಚಳವಳಿಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಈ ಹಿಂದೆ ಸಚಿವ ಸಂಪುಟ ಸಭೆಯನ್ನು ಕರೆಯಲಾಗಿತ್ತು. ಆದರೆ, ದಾವಣಗೆರೆ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಸಭೆ ಮುಂದೂಡಲಾಗಿತ್ತು.

ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15 ರಿಂದ 17ಕ್ಕೆ ಏರಿಕೆ ಮಾಡಲಾಗಿದೆ. ಅಲ್ಲದೇ ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಏರಿಕೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ. 50 ರಿಂದ 56ಕ್ಕೆ ಏರಿಕೆಯಾಗಿದೆ. ಹೆಚ್ಚಳ ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ಒಳಮೀಸಲಾತಿ ಕಲ್ಪಿಸಲು ಮನೂದೆ ರೂಪಿಸಿದ್ದು, ಅದಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಏ.16 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿಯ ಬಗ್ಗೆ ಚರ್ಚೆಯಾಗಿದೆ. ಹಾಗಾಗಿ, ವಿಶೇಷ ಸಂಪುಟ ಸಭೆಯನ್ನು ಕರೆಯುವಂತೆ ಬೇಡಿಕೆ ವ್ಯಕ್ತವಾಗಿತ್ತು ಎಂದರು.

ಕಿರುಸುದ್ದಿ

ಬಸ್ ಕಂಡಕ್ಟರ್ ಮಗ ಪ್ರೀತಮ್ ಜಿ. ಪೂಜಾರಿ 625 ಅಂಕ ಪಡೆದು ರಾಜ್ಯಕ್ಕೆ ಟಾಪರ್!

ಪುಟ 9 ➡ ಈ ಬಗ್ಗೆ ಪ್ರತಿಕ್ರಿಯಿಸಿದ ಸಾಧಕ ವಿದ್ಯಾರ್ಥಿ ಪ್ರೀತಮ್ ಜಿ. ಪೂಜಾರಿ, ಅಂದಿನ ಪಾಠವನ್ನು ಅಂದೇ ಕಣ್ಣು ಹಾಯಿಸುತ್ತಿದ್ದೆ. ಪಠ್ಯವನ್ನು ಓದಿ ಮುಗಿಸಲು ತಿಂಗಳ ಗುರಿಯನ್ನು ಇಟ್ಟುಕೊಂಡಿದ್ದೆ. ಪೋಷಕರು ಹಾಗೂ ವಿದ್ಯಾಸಂಸ್ಥೆಯವರ ಪ್ರೋತ್ಸಾಹ, ಮಾರ್ಗದರ್ಶನ ಸಾಧನೆಗೆ ಪ್ರೇರಣೆ. ಮುಂದೆ ವಿಜ್ಞಾನ ವಿಭಾಗದಲ್ಲಿ ಪಿಸಿಎಂಸಿಎಸ್ ಓದಿ ಜೆಇ ಪರೀಕ್ಷೆ ಬರೆಯುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಶಂಕರನಾರಾಯಣ ಮದರ್ ಥೆರೆಸಾ ಮೆಮೋರಿಯಲ್ ಶಾಲೆಯ ಸಂಸ್ಥಾಪಕರಾದ ಶಮಿತಾ ರಾವ್ ಬಲ್ಲಾಳ, ರೇನಿಟಾ ಲೋಬೋ ಮಾತನಾಡಿ, 28 ವರ್ಷಗಳ ಹಿಂದೆ ಹಳ್ಳಿಯಲ್ಲಿ ಕಟ್ಟಿದ ವಿದ್ಯಾಸಂಸ್ಥೆ ಇದೀಗ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳುವ ಮೂಲಕ ಸಾರ್ಥಕತೆ ಲಭಿಸಿದೆ. ಶಾಲೆಯ ವಿದ್ಯಾರ್ಥಿ ಪ್ರೀತಮ್ ಪೂಜಾರಿ ಸಾಧನೆಯು ಸಂತಸ ತಂದಿದೆ. ಆತ ವಿದ್ಯಾಭ್ಯಾಸ ಹಾಗೂ ಇತರ ಚಟುವಟಿಕೆಯಲ್ಲಿ ಸದಾ ಚುರುಕಾಗಿದ್ದ. 625 ಅಂಕ ಪಡೆಯುವ ನಿರೀಕ್ಷೆಯೂ ನಮಗೆಯಿತ್ತು. ಆತನ ಪರಿಶ್ರಮದ ಜೊತೆಗೆ ಗುರುಹಿರಿಯರ ಜೊತೆ ವಿನಮ್ರತೆ ಹೊಂದಿದ್ದ. ಈ ಬಾರಿ ರಾಜ್ಯಮಟ್ಟದ ಕ್ವಿಜ್‌ನಲ್ಲಿ ಎರಡನೇ ಸ್ಥಾನಿಯಾಗಿದ್ದ ಎಂದರು.

ವಿದ್ಯಾರ್ಥಿನಿ ಮೂಗಿಗೆ ಗಮ್ ಟೇಪ್ ಅಂಟಿಸಿದ ಸಿಬ್ಬಂದಿ

ಚಿಕ್ಕಮಗಳೂರು: ಸಿಇಟಿ ಪರೀಕ್ಷೆ ಬರೆಯಲು ಮೂಗುತಿ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರ ಮೂಗಿಗೆ ಪರೀಕ್ಷಾ ಕೇಂದ್ರದ ಸಿಬ್ಬಂದಿಗಳು ಗಮ್ ಟೇಪ್ ಅಂಟಿಸಿದ ಪ್ರಕರಣ ನಗರದ ಎಂಇಎಸ್ ಕಾಲೇಜಿನಲ್ಲಿ ಗುರುವಾರ ನಡೆದಿದೆ. ರಾಜ್ಯಾದ್ಯಂತ ಸಿಇಟಿ ಪರೀಕ್ಷೆಗಳು ಆರಂಭವಾಗಿದ್ದು, ಪರೀಕ್ಷಾ ಅಕ್ರಮ ತಡೆಯಲು ಲೋಹದ ಆಭರಣಗಳಿಗೆ ಕಟ್ಟುನಿಟ್ಟಿನ ನಿಷೇಧವಿದ್ದ ಕಾರಣ ತಪಾಸಣೆ ವೇಳೆ ಮೂಗುತಿ ಬಿಚ್ಚಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದ ಸಿಬ್ಬಂದಿಯೇ ವಿದ್ಯಾರ್ಥಿನಿಯರ ಮೂಗಿನ ಮೇಲೆ ಗಮ್ ಟೇಪ್ ಅಂಟಿಸಿ ಪರೀಕ್ಷಾ ಕೊಠಡಿಯೊಳಗೆ ಕಳುಹಿಸಿದ ಘಟನೆ ನಡೆಯಿತು. ನಿಯಮಗಳ ಕಟ್ಟುನಿಟ್ಟಿನ ಪಾಲನೆ ಹೆಸರಿನಲ್ಲಿ ಏಕಾಏಕಿ ಮೂಗಿಗೆ ಟೇಪ್ ಅಂಟಿಸಿರುವುದು ಪೋಷಕರು ಮತ್ತು ಅಭ್ಯರ್ಥಿಗಳ ಆಸಮಾಧಾನಕ್ಕೆ ಕಾರಣವಾಯಿತು. ಪರೀಕ್ಷೆಯ ಒತ್ತಡದ ನಡುವೆ ಈ ವಿಚಿತ್ರ ಸನ್ನಿವೇಶವು ವಿದ್ಯಾರ್ಥಿನಿಯರಲ್ಲಿ ಕೆಲಕಾಲ ಗೊಂದಲವನ್ನು ಸೃಷ್ಟಿಸಿತ್ತು. ಪರೀಕ್ಷೆ ಸುಗಮವಾಗಿ ನಡೆಯಬೇಕು ಎಂಬ ಉದ್ದೇಶದಿಂದ ಸಿಬ್ಬಂದಿಗಳು ಈ ಕ್ರಮಕ್ಕೆ ಮುಂದಾದರೂ, ಇದು ಟೀಕೆಗೆ ಗುರಿಯಾಗಿದೆ.

ಖರ್ಗೆ ಕ್ಷಮೆಯಾಚಿಸಲಿ: ಬೆಲ್ಲದ

ಹುಬ್ಬಳ್ಳಿ: ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನ ಮಂತ್ರಿ ಮೋದಿ ಅವರ ಕುರಿತು ನೀಡಿರುವ ಅತ್ಯಂತ ಕೆಳಮಟ್ಟದ ಮತ್ತು ಅವಹೇಳನಕಾರಿ ಹೇಳಿಕೆ ಖಂಡನೀಯ. ಕೂಡಲೇ ಕ್ಷಮೆಯಾಚಿಸಬೇಕು ಎಂದು ಶಾಸಕ ಅರವಿಂದ ಬೆಲ್ಲದ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯ ರಾಜಕಾರಣಿಗಳಾಗಿದ್ದು, ಜವಾಬ್ದಾರಿಯುತ ಸ್ಥಾನದಲ್ಲಿದ್ದಾರೆ. ಆದರೆ ಪ್ರಧಾನಿ ಮೋದಿ ಅವರ ಬಗ್ಗೆ ಬಳಸಿರುವ ಶಬ್ದ ಅವರ ರಾಜಕೀಯ ದಿವಾಳಿತನ ಪ್ರದರ್ಶಿಸುತ್ತದೆ. ಇದು ಕೇವಲ ಪ್ರಧಾನಿಯವರಿಗೆ ಮಾಡಿದ ಅವಮಾನವಲ್ಲ, ದೇಶದ ಜನರಿಗೆ ಮಾಡಿದ ಅವಮಾನವಾಗಿದೆ. ಖರ್ಗೆ ಹೇಳಿಕೆ ಕಾಂಗ್ರೆಸ್ ನಾಯಕರ ನಿರಾಕೆಯನ್ನು ತೋರುತ್ತದೆ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬ ಭಯದಿಂದ ಇಂತಹ ಭಾಷೆ ಬಳಸುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟ | ಕಳೆದ ಸಾಲಿಗಿಂತ ಈ ಬಾರಿ ಶೇಕಡಾವಾರು ಫಲಿತಾಂಶದಲ್ಲಿ ಹೆಚ್ಚಳ

ಏಳು ವಿದ್ಯಾರ್ಥಿಗಳು ರಾಜ್ಯಕ್ಕೆ ಪ್ರಥಮ

ಬೆಳಗಾವಿ/ ಚಿಕ್ಕಮಗಳೂರು/ ಚನ್ನಗಿರಿ: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದ್ದು, ರಾಜ್ಯದಲ್ಲಿ 7 ಜನ ವಿದ್ಯಾರ್ಥಿಗಳಿಗೆ 625ಕ್ಕೆ 625 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ ಟಾಪರ್‌ಗಳಾಗಿದ್ದಾರೆ. ಕಳೆದ ಸಾಲಿಗಿಂತ ಈ ಬಾರಿ ಫಲಿತಾಂಶದಲ್ಲಿ ಏರಿಕೆಯಾಗಿದೆ. ಅತ್ಯಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಶುಭಾಶಯಗಳ ಭರಪೂರವೇ ಹರಿದುಬರುತ್ತಿದೆ. ಪೋಷಕರು ತಮ್ಮ ತಮ್ಮ ಮಕ್ಕಳಿಗೆ ಸಿಹಿ ತಿನ್ನಿಸಿ ಶುಭಾಶಯ ಕೋರಿದ್ದಾರೆ. ವಿದ್ಯಾರ್ಥಿಗಳು ಸಹ ಮುಂದೆ ಉತ್ತಮ ಸಾಧನೆ ಮಾಡುವ ಅಭಿಲಾಷೆಯನ್ನು ಹೊಂದಿರುವುದು ಗಮನಾರ್ಹ ಸಂಗತಿ.

ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಗುರುವಾರ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಗೊಳಿಸಿದರು.

ಮಾನ್ವಿ ಶಾಲೆಯ ವಿದ್ಯಾರ್ಥಿ ಸುಖದೇವ್‌ಗೆ 625 ಅಂಕ

ರಾಯಚೂರು: ಜಿಲ್ಲೆಯ ಮಾನವಿಯ ಬಿವಿಆರ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಸುಖದೇವ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿರುವ ಏಳು ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದಾನೆ. ಎಸ್ಸೆಸ್ಸೆಲ್ಸಿಯಲ್ಲಿ ಈ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದು ಜಿಲ್ಲಾಡಳಿತ, ಶಾಲಾ ಆಡಳಿತ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆನುದಾನ ರಹಿತ ಶಾಲಾ ವಿದ್ಯಾರ್ಥಿ ಆಗಿರುವ ಸುಖದೇವನ ತಂದೆ ಪರಶುರಾಮ ಮಾನವಿಯ ಖಾಸಗಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿದ್ದಾರೆ. ತಾಯಿ ಚಂದ್ರಕಲಾ ಜಿಲ್ಲೆಯ ಪೋತನಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಕನ್ನಡ ಶಿಕ್ಷಕಿಯಾಗಿದ್ದಾರೆ. ಸುಖದೇವ್‌ನಿಗೆ ಶಾಲಾ ಶಿಕ್ಷಕರು ಹೇಳುವ ಪಾಠ ಹಾಗೂ ಅವರ ಮಾರ್ಗದರ್ಶನ, ಮನೆಯಲ್ಲಿ ತಂದೆ ತಾಯಿಯ ಮಾರ್ಗದರ್ಶನ. ಯಾವುದೇ ಖಾಸಗಿಯವಾಗಿ ಮನೆ ಪಾಠವನ್ನು ಪಡೆದುಕೊಂಡಿಲ್ಲ.ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ., ಬಿ.ವಿ.ಆರ್. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ವಿ.ರೆಡ್ಡಿ, ಕಾರ್ಯದರ್ಶಿ ಪದ್ಮವತಿ, ಮುಖ್ಯಗುರು ಸರ್‌ಮಾತ್ ಖಾನ್ ಆವರು ವಿದ್ಯಾರ್ಥಿಗೆ ಅಭಿನಂದನೆಯನ್ನು ತಿಳಿಸಿದ್ದಾರೆ.

ಸುಖದೇವ್ 620 ಬರುವ ನಿರೀಕ್ಷೆ ಇತ್ತು. 625 ಅಂಕ ಪಡೆದಿದ್ದು ಬಹಳ ಸಂತೋಷವಾಗಿದೆ. ದಿನಕ್ಕೆ 3-4 ಗಂಟೆ ಓದುತ್ತಿದ್ದ, ಶಾಲಾ ಶಿಕ್ಷಕರ ಪ್ರೋತ್ಸಾಹ, ಅವನ ಶ್ರಮವೂ ಇದೆ.
■ ಚಂದ್ರಕಲಾ, ಸುಖದೇವ್ ತಾಯಿ

ಆಂಬ್ಯುಲೆನ್ಸ್‌ನಲ್ಲಿ ಬಂದು ಪರೀಕ್ಷೆ ಬರೆದಿದ್ದ ಕುಸಿಮಾ ಪ್ರಥಮ ದರ್ಜೆಯಲ್ಲಿ ತೇರ್ಗಡೆ

ಕೋಲಾರ: ಆಂಬುಲೆನ್ಸ್ ಮೂಲಕ ಬಂದು ಸ್ಟ್ರಚರ್‌ನಲ್ಲಿಯೆ ಮಲಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿ ಕುಸಿಮಾ ಫಸ್ಟ್ ಕ್ಲಾಸ್ ನಲ್ಲಿ ಪಾಸ್ ಆಗಿದ್ದಾಳೆ. ಅಪಘಾತವಾಗಿ ಗಾಯಗೊಂಡ ವಿದ್ಯಾರ್ಥಿನಿ ಛಲ ಬಿಡದೆ ಸ್ಟ್ರಚರ್‌ನಲ್ಲಿ ಬಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದಳು. ಶಿಕ್ಷಣ ಇಲಾಖೆ ಹಾಗು ತಾಯಿಯ ನೆರವಿನೊಂದಿಗೆ ಪರೀಕ್ಷಾ ಕೇಂದ್ರಕ್ಕೆ ಆಂಬುಲೆನ್ಸ್‌ನಲ್ಲಿ ಬಂದು ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿ ಕುಸಿಮಾ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆಗಿದ್ದಾಳೆ. ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನ ಚಿನ್ನನಾಗಹಳ್ಳಿಯ ನಿವಾಸಿಯಾಗಿರುವ ಕುಸುಮಾ ಸದ್ಯ ಬೆಂಗಳೂರಿನ ವೈಟ್ ಫೀಲ್ಡ್ ಬಳಿ

ಇರುವ ಹಾಸ್ಪರ್ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಕಳೆದ ಒಂದು ವಾರದಿಂದ ಆಸ್ಪತ್ರೆಯಲ್ಲಿ ಸರ್ಜರಿ ಮಾಡಿಸಿಕೊಳ್ಳುತ್ತಿರುವ ಕುಸುಮಾ 625 ಕ್ಕೆ 374 ಅಂಕ ಪಡೆದು ಅದೆಷ್ಟೋ ಜನರಿಗೆ ಮಾದರಿಯಾಗಿದ್ದಾಳೆ. ಕನ್ನಡದಲ್ಲಿ 62, ಇಂಗ್ಲೀಷ್‌ನಲ್ಲಿ 72, ಹಿಂದಿ-63, ಗಣಿತ-67, ವಿಜ್ಞಾನ-54, ಸಮಾಜ-56 ಅಂಕ ಪಡೆದಿದ್ದಾಳೆ.

ಶಿಕ್ಷಣ ಇಲಾಖೆ ಎಡವಟ್ಟಿನಿಂದ ಅಂಧ ವಿದ್ಯಾರ್ಥಿನಿಗೆ ಅನ್ಯಾಯ

ಶಿರಸಿ: ಇಂದು ಪ್ರಕಟವಾದ ಫಲಿತಾಂಶದಲ್ಲಿ ಪರೀಕ್ಷಾ ಮಂಡಳಿಯ ಗಂಭೀರ ಲೋಪವೊಂದು ಬೆಳಕಿಗೆ ಬಂದಿದೆ. ಎಲ್ಲ ವಿಷಯಗಳ ಪರೀಕ್ಷೆಯನ್ನು ಬರೆದಿದ್ದರೂ, ಸೋಷಿಯಲ್ ಸೈನ್ಸ್ ವಿಷಯದಲ್ಲಿ 'ಆಬ್ಸೆಂಟ್' ಎಂದು ನಮೂದಿಸುವ ಮೂಲಕ ಪ್ರತಿಭಾವಂತ ಅಂಧ ವಿದ್ಯಾರ್ಥಿನಿಯೊಬ್ಬರನ್ನು ಅನುತ್ತೀರ್ಣಗೊಳಿಸಿರುವ ಘಟನೆ ನಡೆದಿದೆ. ನಗರದ ಇಂದಿರಾ ನಗರದ ಯುನಿಯನ್ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿನಿ ಲೀನಾ ಖಾನಮ್ ಈ ಅನ್ಯಾಯಕ್ಕೆ ಒಳಗಾದವರು. ಲೀನಾ ಅವರು ಕನ್ನಡದಲ್ಲಿ 100, ಇಂಗ್ಲಿಷ್‌ನಲ್ಲಿ 92, ಎಕನಾಮಿಕ್ಸ್ ನಲ್ಲಿ 98 ಹಾಗೂ ಪೊಲಿಟಿಕಲ್ ಸೈನ್ಸ್‌ನಲ್ಲಿ 92 ಅಂಕಗಳನ್ನು ಗಳಿಸುವ ಮೂಲಕ ಒಟ್ಟು 526 ಅಂಕ (ಶೇ. 84.16) ಪಡೆದಿದ್ದಾರೆ. ಆದರೆ, ಸಮಾಜ ವಿಜ್ಞಾನ ಪರೀಕ್ಷೆಗೆ ಹಾಜರಾಗಿದ್ದರೂ ಮಂಡಳಿಯು ಆಕೆಯನ್ನು ಗೈರು ಎಂದು ಪರಿಗಣಿಸಿ ಫಲಿತಾಂಶದಲ್ಲಿ 'ಫೇಲ್' ಎಂದು ತೋರಿಸಿದೆ. ಕುಟುಂಬಸ್ಥರು ಮಂಡಳಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉಡುಪಿ ಜಿಲ್ಲೆ: ಈ ಬಾರಿಯೂ ಬಾಲಕಿಯರೇ ಮೇಲುಗೈ!

ಉಡುಪಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಉಡುಪಿ ಜಿಲ್ಲೆಯು ಶೇ. 98.18 ರಷ್ಟು

ಸಂಪಾದಕೀಯ

ಟ್ರಂಪ್ ದಾಷ್ಟ್ರ್ಯ: ಅಕ್ಷಮ್ಯ ಅವಹೇಳನ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಟ್ರುಥ್ ಸೋಶಿಯಲ್ ವೇದಿಕೆಯಲ್ಲಿ ಭಾರತ ಮತ್ತು ಚೀನಾವನ್ನು ನರಕ ಕೂಪ ಎಂದು ಜರಿದ ಒಬ್ಬ ಲೇಖಕನ ಹೇಳಿಕೆಯನ್ನು ಹಂಚಿಕೊಂಡಿರುವ ಘಟನೆ ತೀರಾ ಆಘಾತಕಾರಿ ಹಾಗೂ ಆಕ್ಷಮ್ಯ.

ಐದು ಸಾವಿರ ವರ್ಷಗಳ ನಾಗರಿಕ ಪರಂಪರೆಯನ್ನು ಮೈವೆತ್ತಿ ನಿಂತಿರುವ ಭಾರತವನ್ನು ನರಕ ಎಂದು ಕರೆಯುವ ಅಹಂಕಾರ ಯಾವ ನಾಚಿಕೆಗೇಡಿತನದ ಪರಮಾವಧಿ? ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ, ನೂರ ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿದ ಈ ದೇಶ ತನ್ನ ಘನತೆ ಮತ್ತು ಆತ್ಮಾಭಿಮಾನಗಳಿಗೆ ಸಂಬಂಧಿಸಿ ಯಾರ ಅಪಮಾನವನ್ನೂ ಸಹಿಸಿಕೊಳ್ಳುವ ಅಗತ್ಯ ಇಲ್ಲ ಅದು ಅಮೆರಿಕದ ಅಧ್ಯಕ್ಷ ಆಗಿರಲಿ, ಇನ್ಯಾರೇ ಆಗಿರಲಿ.

ಇಂದು ಭಾರತ ವಿಶ್ವದ ಐದನೇ ಅತಿದೊಡ್ಡ ಆರ್ಥಿಕ ಶಕ್ತಿ. ಬಾಹ್ಯಾಕಾಶ ಕ್ಷೇತ್ರದಲ್ಲಿ, ಡಿಜಿಟಲ್ ತಂತ್ರಜ್ಞಾನದಲ್ಲಿ, ರಕ್ಷಣಾ ಸಾಮರ್ಥ್ಯದಲ್ಲಿ ಭಾರತ ವಿಶ್ವ ಮಟ್ಟದಲ್ಲಿ ತನ್ನ ಪ್ರತಿಷ್ಠೆಯನ್ನು ಗಳಿಸಿಕೊಂಡಿದೆ. ಚಂದ್ರಯಾನ, ಮಂಗಳಯಾನ, ಯುಪಿಐ ಕ್ರಾಂತಿ ಇವು ನರಕ ಕೂಪದ ಸಾಧನೆಗಳೇ? ಅಮೆರಿಕದ ಮಾಹಿತಿ ತಂತ್ರಜ್ಞಾನ ಉದ್ಯಮ ಇಂದು ನಡೆಯುತ್ತಿರುವುದೇ ಭಾರತೀಯ ಮೂಲದ ಪ್ರತಿಭಾವಂತರ ಬೆವರಿನ ಬಲದಿಂದ. ಟ್ರಂಪ್ ಬಳಸುವ ಸಾಫ್ಟ್‌ವೇರ್ ಬರೆದದ್ದು ಕೂಡ ಬಹುತೇಕ ಭಾರತೀಯ ಮೂಲದ ಎಂಜಿನಿಯರ್‌ಗಳು ಎಂಬ ವಾಸ್ತವ ಅವರಿಗೆ ಗೊತ್ತಿಲ್ಲದ್ದೇನಲ್ಲ.

ವಿವಾದ ತೀವ್ರಗೊಂಡ ನಂತರ ಟ್ರಂಪ್ ಭಾರತ ನಮ್ಮ ಅತ್ಯಂತ ಪರಮಾಪ್ತ ದೇಶ ಎಂದು ನೀಡಿದ ಸ್ಪಷ್ಟನೆ ನಿಜಕ್ಕೂ ಆಣಕದಂತಿದೆ. ಕಲ್ಲು ಹೊಡೆದು ಹಣ್ಣು ಕೊಡುವ ತರ್ಕ ಇದು. ಮೊದಲು ಅವಮಾನಿಸಿ, ಆನಂತರ ಸ್ನೇಹ ಎನ್ನುವ ಟ್ರಂಪ್ ಶೈಲಿ ಅಂತಾರಾಷ್ಟ್ರೀಯ ನೀತಿ ನಿಯಮಗಳ ಅಪಹಾಸ್ಯ. ಅಮೆರಿಕದ ಅಧ್ಯಕ್ಷ ಎಂಬ ಮಹಾನ್ ಸ್ಥಾನ ವಹಿಸಿಕೊಂಡ ವ್ಯಕ್ತಿ ಹೀಗೆ ಅಸ್ಥಿರ ಮನಸ್ಥಿತಿ ಪ್ರದರ್ಶಿಸುವುದು ಆ ಸ್ಥಾನಕ್ಕೇ ಮಾನಹಾನಿ.

ಭಾರತ ಸರ್ಕಾರ ಈ ಹೇಳಿಕೆಯನ್ನು ಕೇವಲ ಸ್ಪಷ್ಟನೆ ಸ್ವೀಕರಿಸುವ ಮೂಲಕ ಮುಗಿಸಬಾರದು. ಅಧಿಕೃತ ರಾಜತಾಂತ್ರಿಕ ಮಾರ್ಗಗಳಲ್ಲಿ ತೀಕ್ಷ್ಣ ಪ್ರತಿಭಟನೆ ದಾಖಲಾಗಲೇಬೇಕು. ಮಿತ್ರ ದೇಶಗಳ ನಡುವೆ ಗೌರವ ಇರಬೇಕಾದರೆ, ಮಾತಿನ ಮರ್ಯಾದೆಯೂ ಇರಬೇಕು. ಭಾರತ ಸ್ನೇಹಕ್ಕೆ ಬೆಲೆ ಕೊಡುವ ದೇಶ, ಆದರೆ ಆ ಸ್ನೇಹ ನಮ್ಮ ಸ್ವಾಭಿಮಾನವನ್ನು ಅಡವಿಟ್ಟ ನಂತರ ಸಿಗುವ ಕೃಪೆ ಆಗಬಾರದು.

ಟ್ರಂಪ್ ಅಥವಾ ಯಾರೇ ಆಗಲಿ ಭಾರತ ನರಕ ಕೂಪ ಅಲ್ಲ, ನರಕ ಕೂಪವಾಗಲೂ ಅಲ್ಲ. ಇದು ಐಶ್ವರ್ಯ, ತ್ಯಾಗ, ವೈವಿಧ್ಯ ಮತ್ತು ವೈಭವಗಳ ನಾಡು. ಈ ನಾಡಿನ ಮಣ್ಣಿನ ಗಂಧ ಅರಿಯದ ಯಾರ ಮಾತಿಗೂ ನಾವು ತಲೆ ಬಾಗುವ ಅಗತ್ಯ ಇಲ್ಲ. ಅಂತಹ ಉಡಾಫೆ ಮಾತುಗಳಿಗೆ ಸಜ್ಜಾದ ಉತ್ತರ ನೀಡಬಲ್ಲ ಆತ್ಮವಿಶ್ವಾಸ ನಮಗಿದೆ, ಆದಕ್ಕೆ ತಕ್ಕ ದೃಢ ರಾಜತಾಂತ್ರಿಕ ದನಿಯನ್ನು ನಮ್ಮ ಸರ್ಕಾರ ತಕ್ಷಣ ಎತ್ತಬೇಕು.

ಸಾಗರವು ಸಂಪತ್ತಿನ ಆಗರ

ಸಾಗರ ಕಲೆ ರತ್ನಾನಿ ಕಲೆ ಜೀವಾಶ್ಚ ಶುಕ್ತಯಃ।
ಲಬ್ಧೇಃ ಸಂಪದಪಾರಾಸ್ತಿ ಸಾ ಹಿ ಜ್ಞಾತುಂ ನ ಶಕ್ಯತೇ ॥

ಸಾಗರದಲ್ಲಿ ರತ್ನಗಳೆಷ್ಟೋ, ಜೀವಿಗಳೆಷ್ಟೋ, ಮುತ್ತಿನ ಚಿಪ್ಪುಗಳೆಷ್ಟೋ! ಸಮುದ್ರದ ಸಂಪತ್ತು ಅಪಾರ. ಅದು ಯಾರಿಂದಲೂ ತಿಳಿಯಲಾಗುವುದಿಲ್ಲ– ಎಂಬುದು ಶ್ಲೋಕಾರ್ಥ.

ಸಮುದ್ರವನ್ನು 'ರತ್ನಾಕರ' ಎಂದು ಕರೆದಿದ್ದಾರೆ. ಇದಕ್ಕೆ ಕಾರಣವಿಲ್ಲದಿಲ್ಲ. ರತ್ನಗಳ ಆಗರ, ಬಗೆಬಗೆಯ ಸಂಪತ್ತುಗಳ ಆಗರ. ವಿವಿಧ ಜೀವ ಜಂತುಗಳಿಗೆ ಆಶ್ರಯ.... ಈ ಎಲ್ಲ ವಿಶೇಷತೆಗಳಿಂದಾಗಿ ರತ್ನಾಕರ ಎಂಬುದು ಆನ್ವರ್ಥ ನಾಮವೇ ಆಗಿದೆ.

ಸಾಗರದ ಉದ್ದಗಲವನ್ನು ಅರಿತವರಾರು? ಇಳಿದು ಆಳ ವನ್ನು ಕಂಡು ಕೊಂಡವರಾರು? ಸಮುದ್ರ ದಾಳದಲ್ಲಿ ಏನೆಲ್ಲ ಇವೆ ಎಂಬುದನ್ನು ಪತ್ತೆ ಹಚ್ಚಿದವರಾರು? ಆದರೂ ಇದು ವರೆಗೆ ನಾವು ಕಂಡುಕೊಂಡ ಪ್ರಕಾರ ಸಂಪತ್ತಿನ ಮೂಲ ಸಾಗರ ಎಂಬುದರಲ್ಲಿ ಸಂಶಯವಿಲ್ಲ. ಸಾಗರದ ಆಳದಲ್ಲಿ ಇರುವ ರತ್ನಗಳೆಷ್ಟೋ! ಅಮೂಲ್ಯವಾದ ಬಗೆಬಗೆಯ ಹವಳಗಳೂ ಕಡಲಿನ ಬಸುರಿನಲ್ಲಿಯೇ ಇವೆ. ಇಷ್ಟೇ ಇವೆ, ಇಷ್ಟೊಂದು ಪ್ರಕಾರಗಳಿವೆ ಎಂದು ಗುರುತಿಸಿ ಹೇಳುವುದಕ್ಕೂ ಸಾಧ್ಯವಿಲ್ಲ. ಸಾಗರದ ಗರ್ಭ ಸೇರಿ ಸಂಪೂರ್ಣ ಶೋಧಿಸಿದವರಿಲ್ಲ. ಶೋಧಿಸಲೂ ಸಾಧ್ಯವಿಲ್ಲ. ಭೂಮಿಯು ರತ್ನಗರ್ಭಿಯಾಗಿ ಅಪಾರ ಸಂಪತ್ತನ್ನು ತನ್ನೊಡಲಾಳದಲ್ಲಿ ಇರಿಸಿಕೊಂಡಿರುವಾಗ ಭೂಮಿಗಿಂತಲೂ ಮೂರು ಪಾಲು ವಿಸ್ತೃತವಾಗಿರುವ ರತ್ನಾಕರನಲ್ಲಿ ಇನ್ನೆಷ್ಟಿರಬಹುದು. ನಮ್ಮ ಕಲ್ಪನೆಗೂ ನಿಲುಕದಷ್ಟು ಇಲ್ಲಿದೆ.

ಎಷ್ಟೊಂದು ಜೀವರಾಶಿಗಳು ಸಮುದ್ರದಲ್ಲಿರಬಹುದು. ಎಷ್ಟೊಂದು ಪ್ರಮಾಣ ದಲ್ಲಿರಬಹುದು. ಸಮುದ್ರದಲ್ಲಿ ಸಾಗಿ ಮೀನು ಹಿಡಿಯುವ ಕಾಯಕ ಇಂದು ನಿನ್ನೆಯದಲ್ಲ ಆನಾದಿ ಕಾಲದಿಂದ ಅವ್ಯಾಹತವಾಗಿ ನಡೆದು ಬಂದಿದೆ. ಇತ್ತೀಚೆಗಂತೂ ಆಧುನಿಕ ತಂತ್ರಜ್ಞಾನವನ್ನು ಬಳಸಿ ಮೀನು ಹಿಡಿಯುತ್ತಿದ್ದೇವೆ. ಇದು ಮತ್ಸ್ಯೋದ್ಯಮವಾಗಿ ಬೆಳೆದು ನಿಂತಿದೆ. ಆದರೂ ಮೀನುಗಳು ಖಾಲಿಯಾಗಿಲ್ಲ. ಅವ್ಯಾಹತವಾಗಿ ಕೆಲಸ ಸಾಗಿದೆ. ನಮಗೆ ಗೊತ್ತಿರುವುದು ಕೆಲವು ಬಗೆಯ ಕಡಲ ಜೀವಿಗಳು. ಇನ್ನೆಷ್ಟು ಬಗೆಗಳಿವೆಯೋ ಯಾರಿಗೆ ಗೊತ್ತು? ಜಲಜೀವಿಗಳು ಆಪಾರ ಎಂಬುದಂತೂ ಸತ್ಯ. ಸಾಮಾನ್ಯ ಊಹೆಗೆ ನಿಲುಕದು. ಚಿಪ್ಪುಗಳೇನು ಕಡಿಮೆಯೇ. ಸಾಗರದ ದಡದಲ್ಲಿಯೇ ಸಾಕಷ್ಟು ಚಿಪ್ಪುಗಳಿರುವಾಗ, ನಿತ್ಯವೂ ಬಂದು ಬೀಳುವಾಗ ಕಡಲಾಳದಲ್ಲಿ ಇನ್ನೆಷ್ಟಿರಬಹುದು. ಊಹಿಸಲಸಾಧ್ಯವೇ ಸರಿ. ಇಷ್ಟೇ ಅಲ್ಲ, ಆಹಾರದ ರುಚಿಗೆ ಬೇಕಾದ ಉಪ್ಪು ಉತ್ಪನ್ನವಾಗುವುದು ಸಮುದ್ರದಿಂದಲೇ. ಒಟ್ಟಿನಲ್ಲಿ ಸಾಗರದಲ್ಲಿ ಹೇರಳವಾದ ಸಂಪತ್ತಿದೆ. ನಮಗೆ ಗೊತ್ತಿರದ ಇನ್ನೂ ಕಂಡರಿಯದ ಸಂಪತ್ತುಗಳೂ ಇವೆ. ಸಮುದ್ರದ ಮಹಿಮೆಯನ್ನು ಅರಿತವರಾರು? ಸಾಗರವು ಸಂಪತ್ತಿನ ತವರು ಎಂಬುದಂತೂ ಸತ್ಯ. ಸಾಮಾನ್ಯರಿಂದ ಆರಂಭಿಸಿ ಅಸಾಮಾನ್ಯರವರೆಗೆ ಯಾರಿಂದಲೂ ಊಹಿಸಲಸಾಧ್ಯ. ಬತ್ತದ ಸಂಪತ್ತು ಸಾಗರದಲ್ಲಿದೆ. ಸಾಗರವನ್ನು ಶೋಷಿಸಿ ಸಂಪತ್ತು ಪಡೆಯುವುದು ಅಸಾಧ್ಯ. ಸಾಗರವನ್ನು ದೋಹನ ಮಾಡಬೇಕು. ವಿಶೇಷ ಎಚ್ಚರಿಕೆಯಿಂದ ಮುಂದುವರಿಯಬೇಕು. ಆಗಲೇ ಒಂದಿಷ್ಟನ್ನು ಪಡೆಯಬಹುದು. ಕೃತಯುಗದಲ್ಲಿ ಸಮುದ್ರ ಮಥನ ಮಾಡಿ ದೇವತೆಗಳು ಅಪಾರ ಸಂಪತ್ತನ್ನು ಪಡೆದರು. ಇಂದು ಮಥನ ಸಾಧ್ಯವೇ. ವಿವೇಕದ ಕಡೆಗೋಲಿನಿಂದ ಅಂತಃಸಮುದ್ರವನ್ನು ಮಥಿಸುವ ಕ್ರಿಯೆ ನಡೆಯಬೇಕು. ಆಗ ಎಲ್ಲ ಬಗೆಯ ಸಂಪತ್ತೂ ಸಿಗುತ್ತದೆ.

ಮತಗಟ್ಟೆಯ ಬಾಗಿಲು ಹೇಳುವ ಮಂಡೇಲಾ ಎಂಬ ಕಹಿಸತ್ಯ

ಉಘೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com

ಸೂರಂಗುಡಿ ಎಂಬ ತಮಿಳುನಾಡಿನ ಸಣ್ಣ ಊರು. ಅಲ್ಲಿನ ಮತದಾರರ ಸಂಖ್ಯೆ 840. ಆದರೆ ಸಾಮಾಜಿಕವಾಗಿ ಸೂರಂಗುಡಿ ವಿಲಕ್ಷಣವಾಗಿ ವಿಭಜನೆಯಾಗಿದೆ. ಗ್ರಾಮ ಪ್ರಮುಖ ಅದೇ ಊರಿನ ಎರಡು ಜಾತಿಗಳಿಂದ ಹೆಣ್ಣುತಂದು ಮದುವೆಯಾಗಿದ್ದಾನೆ! ಸವತಿಯರ ನಡುವೆ ಮನೆಯಲ್ಲಿ ಜಗಳಗಳು ನಡೆಯುತ್ತವೆ. ಇಬ್ಬರ ಮಕ್ಕಳೂ ಬೆಳೆದಿದ್ದಾರೆ. ಜೊತೆಗೆ ದ್ವೇಷವೂ ಬೆಳೆದು ಊರಿಗೆ ವ್ಯಾಪಿಸಿದೆ. ಸೂರಂಗುಡಿಯ ವಿಲಕ್ಷಣತೆ ಇಷ್ಟಕ್ಕೇ ನಿಲ್ಲುವುದಿಲ್ಲ. ಇಡೀ ಊರು ಉತ್ತರ ಮತ್ತು ದಕ್ಷಿಣ ಎಂದು ಬಣಗಳಾಗಿದೆ. ಉತ್ತರದ ಬಣಕ್ಕೆ ಹಿರಿಯ ಪತ್ನಿಯ ಮಗ ರತ್ನಂ ನಾಯಕನಾದರೆ ದಕ್ಷಿಣದ ಬಣಕ್ಕೆ ಕಿರಿಯ ಪತ್ನಿಯ ಮಗ ಮಥಿ ನಾಯಕ. ತವರು ಬಣಕ್ಕಾಗಿ ಮನೆಯಲ್ಲಿ ನಿತ್ಯ ನಡೆಯುವ ಜಗಳದಿಂದ ಊರ ಪ್ರಮುಖ ಸಾಕಷ್ಟು ಬಸವಳಿದಿದ್ದರೂ ಇನ್ನೂ ಬಲಿಷ್ಠನಾಗಿದ್ದಾನೆ.

ಆಗಾಗ ಹೊಡೆದಾಟ ನಡೆಯುವ ಸೂರಂಗುಡಿಗಿನ್ನೂ ಅಭಿವೃದ್ಧಿ ಪ್ರವೇಶವಾಗಿಲ್ಲ. ಆದರೆ ಕ್ಷೇತ್ರದ ಶಾಸಕನ ಮಾತು ಎರಡೂ ಬಣಗಳಲ್ಲಿ ನಡೆಯುತ್ತದೆ. ಆತ ಯೋಜನೆಗಳನ್ನು ತಂದರೂ ಆದರ ಲಾಭ ಪಡೆಯಲು ಎರಡೂ ಬಣಗಳು ಹೊಡೆದಾಡಿಕೊಳ್ಳುತ್ತದೆ. ಒಮ್ಮೆಯಂತೂ ಶೌಚಾಲಯದ ಉದ್ಘಾಟನೆ ವಿಚಾರಕ್ಕೆ ಆರಂಭವಾದ ಜಗಳ ಶೌಚಾಲಯವನ್ನೇ ಒಡೆಯುವಲ್ಲಿ ಕೊನೆಯಾಯಿತು. ಹಾಗಾಗಿ ಇಡೀ ಊರಿನಲ್ಲಿ ಶೌಚಾಲಯವಿಲ್ಲ. ಹೀಗಿದ್ದಾಗಲೇ ಒಮ್ಮೆ ಪಂಚಾಯತ್ ಚುನಾವಣೆ ಬರುತ್ತದೆ. ಅಭ್ಯರ್ಥಿಯ ಆಯ್ಕೆಯ ಪ್ರಶ್ನೆ ಪ್ರಮುಖನ ಮುಂದೆ ಬರುತ್ತದೆ. ಪ್ರಮುಖ, ಇಬ್ಬರು ಮಕ್ಕಳಿಗೂ ಸ್ಪರ್ಧಿಸಬಾರದೆಂದು ಕಟ್ಟಪ್ಪಣೆ ಕೊಡುತ್ತಾನೆ. ಆದರೆ ಇಬ್ಬರೂ ತಾಯಂದಿರ ಚಿತಾವಣೆಯಿಂದ ಸ್ಪರ್ಧೆಗಿಳಿಯುತ್ತಾರೆ. ಮುಂದೆ ಸೂರಂಗುಡಿ ಹೇಗೆ ರಂಗೇರುತ್ತದೆ ಎಂಬುದು ಆಸಲಿ ಕಥೆ.

ಎರಡೂ ಬಣಗಳು ಮತದಾರರ ಪಟ್ಟಿಯನ್ನಿಟ್ಟು ಲೆಕ್ಕಾಚಾರ ಹಾಕುತ್ತವೆ. ಹೇಗೆ ಲೆಕ್ಕ ಹಾಕಿದರೂ ವೋಟುಗಳು 50:50ಯಾಗಿಯೇ ಬರುತ್ತದೆ. ಊರ ಪ್ರಮುಖನಂತೂ ತಾನು ವೋಟು ಹಾಕಲಾರೆ ಎಂದಿರುತ್ತಾನೆ. ಕೊನೆಗೂ ಹಲವು ವರ್ಷಗಳಿಂದ ರೋಗಹಿಡಿದು ಮಲಗಿದ್ದ 90 ವರ್ಷದ ಮುದುಕಿಯೊಬ್ಬಳು ಸಿಗುತ್ತಾಳೆ. ಆದರೆ ಮುದುಕಿ ತಾನು ವೋಟು ಹಾಕುವುದಿದ್ದರೆ ಎಂಜಿಆರ್‌ಗೆ ಮಾತ್ರ ಎಂದು ಹಠ ಹಿಡಿಯುತ್ತಾಳೆ. "ಎಂಜಿಆರ್ ಸತ್ತು 30 ವರ್ಷವಾಯ್ತಲ್ಲಜ್ಜಿ" ಎಂದಾಗ ಆಘಾತಕ್ಕೊಳಗಾದ ಅಜ್ಜಿ, "ಎಂಜಿಆರ್ ಸತ್ತಾಟ್ಟಾರಾ?" ಎನ್ನುತ್ತಲೇ ಪ್ರಾಣ ಬಿಡುತ್ತಾಳೆ. ಆಲ್ಲಿಗೆ ವೋಟುಗಳು ಮತ್ತೆ ಫಿಫ್ಟಿಫಿಫ್ಟಿ. ಒಂದು ವೋಟಿಗಾಗಿ ಮತ್ತೆ ಆಲೆದಾಟ, ಬಣಗಳ ಮೇಲಾಟ.

ಸೂರಂಗುಡಿಯಲ್ಲೊಬ್ಬ ಹೆಸರೇ ಇಲ್ಲದ ಕ್ಷೌರಿಕ. ಆತ ತನ್ನನ್ನು 'ಸ್ಟೈಲ್' ಎಂದು ಕರೆದುಕೊಂಡರೂ ಊರಿನವರ ಪಾಲಿಗಾತ ಸೊಟ್ಟಮೂತಿ, ಹ್ಯಾಪ. ಸೂರಗುಂಡಿಯ ಪೋಸ್ಟಾಫೀಸಿಗೆ ಹೊಸದಾಗಿ ಬಂದ ತೇನ್ಮೊಳಿ ಎಂಬ ಆಂಚೆಯಕ್ಕನಿಗೆ ಸ್ವಾಭಿಮಾನಹೀನನಾಗಿ ಬದುಕುತ್ತಿರುವ ಆತನ ಮೇಲೇನೋ ಕರುಣೆ. ಆಕೆ ಆತನಿಗೆ 'ನೆಲ್ಸನ್ ಮಂಡೇಲಾ' ಎಂದು ಹೊಸ ಹೆಸರನ್ನಿಟ್ಟು ಪೋಸ್ಟಾಫಿಸಿನ ಖಾತೆ ಮಾಡಿಸಿಕೊಡುತ್ತಾಳೆ. ವೋಟರ್ ಗುರುತಿನ ಚೀಟಿಗೂ ಅರ್ಜಿ ಹಾಕಿಸಿರುತ್ತಾಳೆ. ಶನಿಶನಿ ಎಂಬಂತೆ ಸೂರಂಗುಡಿಯ ಬಣಗಳು ಒಂದು ವೋಟಿಗಾಗಿ ಹುಡುಕುತ್ತಿದ್ದಾಗಲೇ ಮಂಡೇಲಾನಿಗೆ ಗುರುತಿನ ಚೀಟಿ ಕೈಸೇರುತ್ತದೆ. ಜಿದ್ದಾಜಿದ್ದಿನ ಕಣ. ಆದರಲ್ಲೂ ಒಂದು ವೋಟಿನ ಪ್ರಶ್ನೆ. ಕೆಲವೇ ದಿನಗಳ ಮುನ್ನ ಜಾತಿಯಿಂದ, ಹೆಸರಿನಿಂದ ಹಂಗಿಸುತ್ತಿದ್ದವರಿಗೀಗ ಮಂಡೇಲಾ ಬಿಲೆಬಾಳುವ ರತ್ನವಾದ. ಎರಡು ಬಣಗಳೂ ಆತನ ವೋಟನ್ನು ಖರೀದಿಸಲು ಪೈಪೋಟಿಗಿಳಿದರು. ಆತನ ಸ್ಥಾನ ಬದಲಾಯಿತು. ಮನೆಮನೆಗೆ ತೆರಳಿ ಕ್ಷೌರ ಮಾಡುತ್ತಿದ್ದವನಿಗೆ ಆಂಗಡಿ ಮಾಡಿಕೊಡಲಾಯಿತು. ಹೊತ್ತುಹೊತ್ತಿಗೆ ಬಾಡೂಟ ಬಂತು. ಕಪ್ಪು ಕನ್ನಡಕ ಬಂತು. ಕೊನೆಗೆ ಎರಡು ಬಣಗಳೂ ಆತನ ವೋಟನ್ನು ಹರಾಜಿಗೆ ಹಾಕಿ ಖರೀದಿಸಲು ಇಳಿದರು! ಕೊನೆಗೆ ಮಂಡೇಲಾನ ಒಂದು ವೋಟು ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗೆ ಹರಾಜಾಯಿತು.

ಇದು 2021ರಲ್ಲಿ ಬಿಡುಗಡೆಯಾದ 'ಮಂಡೇಲಾ' ಎಂಬ ತಮಿಳು ಸಿನೆಮಾದ ಕಥಾ ಹಂದರ. ಹಾಗಾದರೆ ಇದು ಕಲ್ಪಿತ ಕಥೆಯೇ ಎಂದರೆ ಹಾಗೂ ಇಲ್ಲ. ಏಕೆಂದರೆ ಇಂಥವು ಚುನಾವಣೆಗಳಲ್ಲಿ ನಡೆದಿವೆ. ಹೆಚ್ಚು ಕಡಿಮೆ ಇಂಥ ಮೇಲಾಟಗಳು ಕರ್ನಾಟಕದಲ್ಲೇ ನಡೆದಿವೆ. ತಮಿಳುನಾಡಿನ ಜನ ಕೂಡ ಸಿನೆಮಾ ನೋಡಿ ಇದರಲ್ಲಿ ಆಚ್ಚರಿಯೇನಿಲ್ಲ ಎಂದೇ ಭಾವಿಸಿದರು. ಇನ್ನೊಂದು ಆಶ್ಚರ್ಯವೆಂದರೆ ಸಿನೆಮಾದಲ್ಲಿ ಉಲ್ಲೇಖಿತ ಸೂರಂಗುಡಿ ಎಂಬ ಗ್ರಾಮ ತೂತ್ತುಕುಡಿ ಜಿಲ್ಲೆಯಲ್ಲಿದೆ. ಆ ಗ್ರಾಮದ ಜನರಿಗೂ ಸಿನೆಮಾ ನೋಡಿ ಮಾಡಬಾರದ್ದೇನೂ ಮಾಡಿಲ್ಲವೆಂದೇ ಅನಿಸಿತು. ಏಕೆಂದರೆ ಸೂರಂಗುಡಿಯಂತೆ ತಮಿಳುನಾಡಿನ ಎಲ್ಲಾ ಗ್ರಾಮಗಳಲ್ಲೂ ಇದರಪ್ಪನಂಥಾ ರಾಜಕೀಯದಾಟಗಳು, ನಾಟಕೀಯ ಘಟನೆಗಳು, ರೋಚಕ ಪ್ರಕರಣಗಳು ಪ್ರತೀ ಚುನಾವಣೆಯಲ್ಲೂ ನಡೆದಿದ್ದವು. ದೇಶದ ಉಳಿದ ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳದ್ದು ಒಂದು ತೂಕವಾದರೆ ತಮಿಳುನಾಡಿನ ಚುನಾವಣಾ ಕಣದ್ದು ಬೇರೆಯದ್ದೇ ತೂಕ. ಹೇಗೆ ಪ.ಬಂಗಾಳ ಬಂದು–ಹರತಾಳಗಳಲ್ಲಿ ಬೆಂಕಿಹಚ್ಚುವುದನ್ನು ದೇಶಕ್ಕೆ ಕಲಿಸಿತೋ ಹಾಗೆ ತಮಿಳುನಾಡು ಚುನಾವಣೆಯ ಹೊಸ ಮಾಧರಿಯೊಂದನ್ನು ದೇಶಕ್ಕೆ ಕಲಿಸಿದೆ. ಇಂದಿನ ಸ್ಟಾರ್ ಪ್ರಚಾರಕರಿಂದ ಹಿಡಿದು ಹಣ–ಹೆಂಡ ಹಂಚುವ ಪದ್ಧತಿಯನ್ನು ಮೊದಲು ಅನುಸರಿಸಿದ್ದೇ ತಮಿಳುನಾಡು.

ಆಂಧ್ರ ತಮಿಳುನಾಡಿನಲ್ಲಿ ನಿನ್ನೆ ವಿಧಾನಸಭಾ ಚುನಾವಣೆ ನಡೆದಿದೆ. ನಿಸಂಶಯವಾಗಿ ಪ್ರತೀ ಗ್ರಾಮದಲ್ಲೂ ಇಂಥ ಆಥವಾ ಇದಕ್ಕಿಂತ ರೋಚಕ ಪ್ರಕರಣಗಳು ನಡೆದಿರುತ್ತವೆ. ಏಕೆಂದರೆ ಇಡೀ ದೇಶದಲ್ಲಿ ಒಳಲೆಕ್ಕದಲ್ಲಿ ಅತಿ ಹೆಚ್ಚು ವೆಚ್ಚ ಮಾಡಿ ಚುನಾವಣೆ ನಡೆಯುವ ರಾಜ್ಯವೆಂದರೆ ತಮಿಳುನಾಡು. ಕರ್ಚಿನ ಎಲ್ಲಾ ದಾರಿಗಳನ್ನು ತಮಿಳುನಾಡು ಹುಡುಕಿ ಮತ್ತು ಪ್ರಯೋಗ ಮಾಡುತ್ತದೆ. ಪ್ರತಿ ಅಭ್ಯರ್ಥಿ ಅಲ್ಲಿ ಹಣದ ಹೊಳೆಯನ್ನೇ ಹರಿಸುತ್ತಾನೆ. ಹಣದ ಹೊಳೆ ಹರಿಸಲಾಗದವ ಅಲ್ಲಿ ಅಭ್ಯರ್ಥಿಯಾಗಲಾರ. ತಮಿಳು ಅಸ್ಮಿತೆ, ಜಾತಿ ಮುಂತಾದ ಯಾವುದೇ ಕಾರಣಗಳಿದ್ದರೂ ತಮಿಳುನಾಡಿನಲ್ಲಿ ಹಣದ ಮುಂದೆ ಅವೆನೂ ಪ್ರಮುಖವಲ್ಲ. ಈ ಚುನಾವಣಾ ಕಣವನ್ನೇ ಗಮನಿಸಿದರೆ ಅಲ್ಲಿ ಕೂಡ ಅದೇ ಕಾಣಿಸುತ್ತದೆ. ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ಘೋಷಿತ ಆದಾಯ ಬಹುಕೋಟಿ ಲೆಕ್ಕದಲ್ಲೇ ಇದೆ. ಏಕೆಂದರೆ ಗೆಲ್ಲುವ ಅಭ್ಯರ್ಥಿಗಳು ಆಲ್ಲಿ ಕಡ್ಡಾಯವಾಗಿ ಶ್ರೀಮಂತನಾಗಿಯೇ ಇರಬೇಕು. ಹಣವಿಲ್ಲದ ಅಭ್ಯರ್ಥಿಗೆ ಅಲ್ಲಿ ಬಿಜೆಪಿ, ಪಕ್ಷೇತರ ಬಣವೇ ಗತಿ. ಕೆಲವೇ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಕೆಲವು ಕಮ್ಯುನಿಸ್ಟ್ ಅಭ್ಯರ್ಥಿಗಳು ಕೂಡ ಕೋಟಿಗಟ್ಟಲೆ ಆಸ್ತಿಯನ್ನು ಘೋಷಿಸಿಕೊಂಡಿರುವುದು ಮತ್ತೊಂದು ಘೋರ ವಿಡಂಬನೆ.

ಚುನಾವಣೆ ಬಿರುಸು ಪಡೆದುಕೊಂಡ ದಿನದಿಂದ ಚುನಾವಣಾ ದಿನದವರೆಗೆ ತಮಿಳುನಾಡಿದಲ್ಲಿ 1262 ಕೋಟಿ ಬೆಲೆಯ ಮದ್ಯ, ಚಿನ್ನ ಮತ್ತು ಮಾಧಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಇದರಲ್ಲಿ 543 ಕೋಟಿ ನಗದು. ತಮಿಳುನಾಡಿನ ರಾಜಕೀಯವನ್ನು ಬಲ್ಲವರಿಗೆ ಅಭ್ಯರ್ಥಿಗಳು ಘೋಷಿಸಿಕೊಂಡ ಆಸ್ತಿಯ ಮೌಲ್ಯದಲ್ಲೇ ಸುಳ್ಳಿದೆ ಎಂಬುದು ತಿಳಿದಿದೆ. ಟಿವಿಕೆ ಅಭ್ಯರ್ಥಿ ವಿಜಯ್ ಜೋಸೆಫ್ ತನ್ನ ಆಸ್ತಿ 624 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ. ಸ್ವತಃ ಅವರ ಅಭಿಮಾನಿಗಳೇ ಇದನ್ನು ಒಪ್ಪಲಾರರು. ವಿಜಯ್ ಹಿಂದಿನ ದೊಡ್ಡ ಆರ್ಥಿಕ ಶಕ್ತಿಯಾಗಿರುವ ಮತ್ತೊಬ್ಬ ಟಿವಿಕೆ ಅಭ್ಯರ್ಥಿ ಆಧವ್ ಅರ್ಜುನ್ ಘೋಷಿತ ಆಸ್ತಿ ಕೇವಲ 197

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

ಪುಟ 9➡ಈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸುಮಾರು 10 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ. ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಲು ತಂಡಗಳನ್ನು ರಚಿಸಲಾಗಿದೆ. ನಾಡಿನ ಎಲ್ಲಾ ಮಠಾಧೀಶರು, ಮಾಜಿ ಮುಖ್ಯಮಂತ್ರಿಗಳು, ಸಚಿವರು ಮತ್ತು ಗಣ್ಯಮಾನ್ಯರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುತ್ತಿದೆ. ಯಡಿಯೂರಪ್ಪ ಅವರನ್ನು ಬಲ್ಲ ಸಾಹಿತಿಗಳು, ಒಡನಾಡಿಗಳು, ಕಲಾವಿದರು ಸೇರಿ ಸಮಾಜದ ಎಲ್ಲ ರಂಗದವರು ಭಾಗವಹಿಸುತ್ತಾರೆ. ಅಲ್ಲದೇ ಸಾರ್ವಜನಿಕರು, ರೈತಾಪಿ ವರ್ಗದವರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಏ.26ರಂದು ಭೂಮಿ ಪೂಜೆ: ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಏ.26ರಂದು ಬೆಳಗ್ಗೆ 10 ಗಂಟೆಗೆ ಭೂಮಿಪೂಜೆ ನೆರವೇರಿಸಲಾಗುವುದು. ಕಾರ್ಯಕ್ರಮದ ಸ್ಥಳಗಳಲ್ಲಿ ಪೆಂಡಾಲ್, ವೇದಿಕೆ ಮುಂತಾದ ವ್ಯವಸ್ಥೆಗಳನ್ನು ಪ್ರಾರಂಭಿಸಲು ಭೂಮಿಪೂಜೆ ನಡೆಯಲಿದೆ. ಭೂಮಿಪೂಜೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಆಹ್ವಾನಿಸಿದ್ದೇವೆ. ಅವರು, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಪ್ರತಿಪಕ್ಷ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಸೇರಿ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 50 ವರ್ಷಗಳ ಕಾಲ ರಾಜ್ಯವನ್ನು ಸುತ್ತಿದ್ದಾರೆ. ರೈತರ ಪರವಾಗಿ ಹೋರಾಡಿ, ದೀನದಲಿತರಿಗೆ ನ್ಯಾಯ ಒದಗಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಅವರ ಜೀವನ ಮತ್ತು ಸಮಾಜಸೇವೆ ಕುರಿತು ಅವರ ಅಭಿಮಾನೋತ್ಸವ ಆಚರಿಸಲು ತೀರ್ಮಾನಿಸಿದ್ದೇವೆ. ಚಿತ್ರದುರ್ಗವು ಕರ್ನಾಟಕದ ಕೇಂದ್ರ ಬಿಂದು. ಆದ್ದರಿಂದ ಆ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಜನತಾದಳದಿಂದ ಕಾಂಗ್ರೆಸ್ಸಿಗೆ ಬಂದ ಸಿದ್ದರಾಮಯ್ಯ ಅವರು ಬೇರೆಯವರ ಹೆಗಲ ಮೇಲೆ ಕುಳಿತು ಕಾರ್ಯಕ್ರಮ ಮಾಡಿಸಿಕೊಂಡಿದ್ದಾರೆ. ನಮ್ಮದು ಹಾಗಲ್ಲ; ಯಡಿಯೂರಪ್ಪ ಅವರೇ ಕಟ್ಟಿ ಬೆಳೆಸಿದ ಪಕ್ಷ ಇದು. ಇದು ಜನರ ಉತ್ಸವ ಎಂದು ಪ್ರಶ್ನೆಗೆ ಉತ್ತರಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಾರ್ಯಕ್ರಮದ ಲೋಗೋವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹರೀಶ್ ಪೂಂಜಾ, ಮಾಜಿ ಶಾಸಕ ಅನಿಲ್ ಬೆನಕೆ, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ವಿಧಾನಪರಿಷತ್ ಮಾಜಿ ಸದಸ್ಯ ಅರುಣ್ ಶಹಾಪುರ ಇದ್ದರು.

ರಾಜ್ಯದ ವಿವಿಧೆಡೆಯಿಂದ ಅಭಿಮಾನಿಗಳ ಆಗಮನ

ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಪಯಣದ ಸಂಭ್ರಮಾಚರಣೆಗಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ನಾಡಿಗೆ ಯಡಿಯೂರಪ್ಪ ಅವರ ಕೊಡುಗೆಯನ್ನು ಎಲ್ಲ ವರ್ಗದವರೂ ಪ್ರಶಂಸಿಸುತ್ತಾರೆ. ಇದಕ್ಕಾಗಿ ಅರ್ಥಪೂರ್ಣ, ಭವ್ಯ ಕಾರ್ಯಕ್ರಮ ನಡೆಸುತ್ತಿದ್ದೇವೆ. ಕಾರ್ಯಕ್ರಮಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಅಭಿಮಾನಿಗಳು, ಲಕ್ಷಾಂತರ ಸಂಖ್ಯೆಯಲ್ಲಿ ಜನರು ಬರಲಿದ್ದಾರೆ. ಒಂದು ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ ಎಂದು ಬಿ.ವೈ. ವಿಜಯೇಂದ್ರ ತಿಳಿಸಿದರು.

ಕಾಡಾನೆ ದಾಳಿ: ಇಬ್ಬರು ಅರಣ್ಯ ಸಿಬ್ಬಂದಿ ಗಂಭೀರ

ಪುಟ 9➡ಇಟಿಎಫ್ ಸಿಬ್ಬಂದಿ ರಮೇಶ್ ಅವರನ್ನು ಕಾಡಾನೆ ನೆಲಕ್ಕೆ ಕೆಡವಿ ಅವರ ತೊಡೆ ಮತ್ತು ಹೊಟ್ಟೆ ಭಾಗವನ್ನು ಮೆಟ್ಟಿ ಗಾಯಗೊಳಿಸಿದೆ. ಮತ್ತೋರ್ವ ಹೊರಗುತ್ತಿಗೆ ನೌಕರ ವಿಶ್ವ ಎನ್ನುವವರ ಮೇಲೆಯೂ ಕಾಡಾನೆ ದಾಳಿ ಮಾಡಿದೆ. ಇವರಲ್ಲಿ ರಮೇಶ್ ಅವರು ತೀವ್ರವಾಗಿ ಗಾಯಗೊಂಡಿದ್ದು ಇಬ್ಬರಿಗೂ ಚಿಕಿತ್ಸೆ ಮುಂದುವರಿಸಲಾಗಿದೆ. ದಾಳಿ ಮಾಡಿದ ಕಾಡಾನೆ ಅದೇ ಸ್ಥಳದ ಸುತ್ತಮುತ್ತ ಸಂಚರಿಸುತ್ತಿದ್ದು, ವಿಡಿಯೋ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಘಟನೆಯಿಂದ ಅರಣ್ಯ ಸಿಬ್ಬಂದಿ ಮತ್ತು ಸ್ಥಳೀಯರು ತೀವ್ರವಾಗಿ ಆತಂಕಗೊಂಡಿದ್ದಾರೆ.

ಕಲಬುರಗಿಯಲ್ಲಿ ದಾಖಲೆ ಉಷ್ಣಾಂಶ

• **ಕಲಬುರಗಿ:** ರಾಜ್ಯದಲ್ಲಿ ಬಿಸಿಗಾಳಿ ತೀವ್ರಗೊಂಡಿದ್ದು, ಹಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಗಣನೀಯವಾಗಿ ಏರಿಕೆಯಾಗಿದೆ. ವಿಶೇಷವಾಗಿ ಗುರುವಾರ ಕಲಬುರಗಿ ಜಿಲ್ಲೆಯಲ್ಲಿ 41.1 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದ್ದು, ರಾಜ್ಯದಲ್ಲೇ ಅತ್ಯಧಿಕವಾಗಿದೆ.

ಹವಾಮಾನ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ, ರಾಜ್ಯದ ಭೌಗೋಳಿಕ ಪ್ರದೇಶದ ಸುಮಾರು 75 ಶೇಕಡಾ ಭಾಗದಲ್ಲಿ 38ಲಿಲಿ ರಿಂದ 44.7ಲಿಲಿ ನಡುವೆ ಗರಿಷ್ಠ ತಾಪಮಾನ ದಾಖಲಾಗಿದೆ.ಇದು ಉಷ್ಣತೆಯ ತೀವ್ರತೆಯನ್ನು ಸೂಚಿಸಿದ್ದು,ಮೈಸೂರು, ಬೀದರ, ರಾಯಚೂರು, ವಿಜಯಪುರ, ಯಾದಗಿರಿ, ಕಲಬುರಗಿ ಹಾಗೂ ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ 40ಲಿಲಿ ರಿಂದ 44.7ಲಿಲಿ ನಡುವೆ ತಾಪಮಾನ ದಾಖಲಾಗಿದ್ದು, ಜನಜೀವನದ ಮೇಲೆ ಪರಿಣಾಮ ಬೀರಿದೆ. ಇದೇ ವೇಳೆ, ಬೆಂಗಳೂರು ನಗರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿಯೂ ಬಿಸಿಯ ತೀವ್ರತೆ ಹೆಚ್ಚಾಗಿದ್ದು, ಜನರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ಏಪ್ರಿಲ್ 22ರಂದು ಬೆಳಿಗ್ಗೆ 8:30ರಿಂದ ಏಪ್ರಿಲ್ 23ರಂದು ಬೆಳಿಗ್ಗೆ 8.30ರವರೆಗೆ ವಿವಿಧ ಜಿಲ್ಲೆಗಳ ಕನಿಷ್ಠ ಹಾಗೂ ಗರಿಷ್ಠ ತಾಪಮಾನ ವಿವರಗಳನ್ನು ಹವಾಮಾನ ಇಲಾಖೆ ಪ್ರಕಟಿಸಿದೆ.

ಸಚಿವ ಪರಮೇಶ್ವರ ವಿರುದ್ಧ ಎಫ್‌ಐಆರ್‌ಗೆ ತಡೆ

• **ಬೆಂಗಳೂರು:** ಹಾನ್ಯ ಮಾಡುವುದು ಕ್ರಿಮಿನಲ್ ಅಪರಾಧ ವಾಗುತ್ತದೆಯೇ ಎಂದು ಪ್ರಶ್ನಿಸಿರುವ ಹೈಕೋರ್ಟ್, ಗೃಹ ಸಚಿವ ಡಾ.ಜಿ.ಪರಮೇಶ್ವರ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶಿಸಿದ್ದ ಮ್ಯಾಜಿಸ್ಟ್ರೇಟ್ ಆದೇಶ ಮತ್ತು ಆನಂತರದ ಪ್ರಕ್ರಿಯೆಗೆ ಗುರುವಾರ ತಡೆ ನೀಡಿದೆ.

ತುಮಕೂರು ನಗರದಲ್ಲಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದಿದ್ದ ಕಬಡ್ಡಿ ಪಂದ್ಯಾವಳಿಯಲ್ಲಿ ಕಾನೂನುಬಾಹಿರ 500 ರೂ. ಬೆಟ್ಟಿಂಗ್ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಡಾ.ಜಿ.ಪರಮೇಶ್ವರ ಮತ್ತು ತುಮಕೂರು ಜಿಲ್ಲಾಧಿಕಾರಿ ಶುಭ ಕಲ್ಯಾಣ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿತ್ತು. ಈ ಪ್ರಕರಣ ರದ್ದತಿ ಕೋರಿ ಡಾ.ಜಿ.ಪರಮೇಶ್ವರ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾ. ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆಸಿತು.

ಪ್ರಕರಣ ದಾಖಲಿಸಲು ಆದೇಶಿಸುವುದಕ್ಕೂ ಮುನ್ನ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಬಿಎನ್‌ಎಸ್‌ಎಸ್ ಸೆಕ್ಷನ್ 175 (3) ಅಡಿ ಪೊಲೀಸರ ವಾದ ಆಲಿಸಿಲ್ಲ. ಹೀಗಾಗಿ, ಖಾನಗಿ ದೂರು ಆಧರಿಸಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಏ.21 ರಂದು ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುವಂತೆ ಮಾಡಿರುವ ಆದೇಶ ಹಾಗೂ ಆನಂತರದ ಪ್ರಕ್ರಿಯೆಗೆ ತಡೆ ನೀಡಲಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇಜಿ

◈ ನರೇಂದ್ರ ಮೋದಿ ಒಬ್ಬ ಭಯೋತ್ಪಾದಕ
– ಮಲ್ಲಿಕಾರ್ಜುನ ಖರ್ಗೆ
– ಒಂದು ದೃಷ್ಟಿಯಲ್ಲಿ ಇದು ಸರಿ, ಭಯೋತ್ಪಾದಕರ ಬೆಂಬಲಿಗರ ಪಾಲಿಗೆ ಅವರು ಭಯೋತ್ಪಾದಕ ಅಂತ ಅನಿಸುವುದು ಸಹಜ!

ದಿನ ಭವಿಷ್ಯ

ಮೇಷ
ಈ ದಿನ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಮನೆಯಲ್ಲಿ ಕಲಹವಾದೀತು.

ವೃಷಭ
ಪ್ರಮುಖ ವಿಷಯದಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಇರಲಿ.

ಮಿಥುನ
ನಿಮ್ಮ ಪಾಲಿಗೆ ವಿಶೇಷ ದಿನ.ಬಯಸಿದ ಬೆಳವಣಿಗೆ ಸಂಭವ. ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ಕಟಕ
ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಅದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಸಿಂಹ
ಹೊಸ ಪಾಠ ಕಲಿಯುವಂತಹ ಪ್ರಸಂಗ ಉಂಟಾದೀತು. ದೊಡ್ಡ ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಕನ್ಯಾ
ಕೆಲಸದಲ್ಲಿ ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಕೆಲವರು ಅದನ್ನೆ ಹಿಗ್ಗಿಸಬಹುದು. ಮಾನಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ತುಲಾ
ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಅನಿರೀಕ್ಷಿತ ಖರ್ಚು ಬಂದೀತು. ಆತ್ಮೀಯ ಬಂಧು ಭೇಟಿ.

ವೃಶ್ಚಿಕ
ಅನ್ಯರ ಮೆಚ್ಚಿಸಲು ಅನವಶ್ಯ ಪ್ರಯತ್ನ ಬೇಡ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಹಣದ ಬಿಕ್ಕಟ್ಟು ತಲೆಬೇನೆ ತಂದೀತು.

ಧನು
ಆರ್ಥಿಕ ಪ್ರಗತಿ ಉತ್ತಮ. ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ಮಕರ
ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಆದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ. ಆರ್ಥಿಕ ಪ್ರಗತಿ ಉತ್ತಮ.

ಕುಂಭ
ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ಆಡ್ಡದಾರಿ ಹಿಡಿಯದಿರಿ. ಆರೋಗ್ಯ ಸಮಸ್ಯೆ.

ಮೀನ
ವಿವೇಕದಿಂದ ಕಾರ್ಯ ಎಸಗಿ. ಇಲ್ಲವಾದರೆ ಕೆಟ್ಟ ಫಲಿತಾಂಶ ಸಂಭವ. ಅನಿರೀಕ್ಷಿತ ಧನಲಾಭ. ಆಪ್ತ ಬಂಧು ಭೇಟಿ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00
ಅದೃಷ್ಟ ಸಂಖ್ಯೆ : 0,6,4,7

ದ.ಕ.,ಉಡುಪಿ ಸಾಧನೆಗೆ ಹರ್ಷ

ಪುಟ 9➡ಸಂಘದ ಶತಮಾನೋತ್ಸವ ಕಾರ್ಯಕ್ರಮಗಳನ್ನು ದೇಶದಾದ್ಯಂತ ಆಚರಿಸುವ ಸಂದರ್ಭದಲ್ಲೂ ಅದನ್ನು ತಡೆಯಲು ವಿಫಲ ಯತ್ನ ನಡೆಸುವುದು ಅವರ ಅಸಹಿಷ್ಣುತೆಯ ಪ್ರತೀಕವಾಗಿದೆ. ಇದರೊಂದಿಗೆ, ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಸಂಘ ಹಾಗೂ ಬಿಜೆಪಿ ಕುರಿತು ನೀಡಿರುವ ಮುಸಲ್ಮಾನ ಸಮುದಾಯವನ್ನು ಎತ್ತಿಕಟ್ಟುವ ಹೇಳಿಕೆಗಳು ಸಮಾಜದಲ್ಲಿ ವಿಷಬೀಜ ಬಿತ್ತುವಂತಿವೆ ಎಂಬುದು ಸ್ಪಷ್ಟ. ಇಷ್ಟೊಂದು ವರ್ಷಗಳಿಂದ ಜನರಿಂದ ಆಯ್ಕೆಯಾಗುತ್ತಿದ್ದರೂ, ಆ ಜನರ ನಂಬಿಕೆಗೆ ತಕ್ಕಂತೆ ಕೆಲಸ ಮಾಡದೇ ಇರುವುದು ಅವರ ಆಡಳಿತದ ದುರಂತವಾಗಿದೆ. ಇದಕ್ಕಿಂತ ದೊಡ್ಡ ವೈಫಲ್ಯ ಮತ್ತೊಂದು ಇರಲು ಸಾಧ್ಯವಿಲ್ಲ. ಇನ್ನಾದರೂ ಆತ್ಮಪರಿಶೀಲನೆ ಮಾಡಿಕೊಂಡು, ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಕೆಲಸ ಮಾಡುವ ಜವಾಬ್ದಾರಿಯನ್ನು ಅರಿತುಕೊಳ್ಳಲಿ. ಜನರು ನೀಡಿದ ಅವಕಾಶಕ್ಕೆ ನ್ಯಾಯ ಒದಗಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸಲಿ ಎಂದು ಎಂದು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ವಕ್ತಾರ ಅರುಣ್ ಜಿ. ಶೇಟ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಬಿಸಿಲಿಗೆ ಬೆದರಿದ ಕರಾವಳಿ ಜನ

ಪುಟ 9➡**ಆರೋಗ್ಯದ ಕಾಳಜಿ ಆಗತ್ಯ:** ತಾಪಮಾನ ಏರಿಕೆಯಾಗುವ ಈ ಸಂದರ್ಭದಲ್ಲಿ ಆರೋಗ್ಯದ ಮೇಲೆ ವಿಶೇಷ ಕಾಳಜಿ ವಹಿಸಬೇಕು ಎನ್ನುತ್ತಾರೆ ವೈದ್ಯರು. ದಿನಕ್ಕೆ 3 ಲೀಟರ್‌ಗಿಂತ ಅಧಿಕ ನೀರು ಸೇವನೆ, ಎಳನೀರು, ಲಿಂಬೆ, ಪುನರ್‌ಪುಳಿ ಶರಬತ್ತು ಕುಡಿಯುವುದು, ಕಲ್ಲಂಗಡಿ ಸೇರಿದಂತೆ ಇತರೆ ಹಣ್ಣುಗಳ ಸೇವನೆ. ಮಾಂಸಾಹಾರದ ಬದಲಾಗಿ ತರಕಾರಿ ಬಳಕೆಯಿಂದ ದೇಹದ ಉಷ್ಣತೆಯನ್ನು ಸಹಜ ಸ್ಥಿತಿಯಲ್ಲಿ ಕಾಯ್ದುಕೊಳ್ಳಲು ಸಾಧ್ಯವಿದೆ.

ಕವಿವಿ 75ನೇ ಘಟಿಕೋತ್ಸವ | ರಾಜ್ಯಪಾಲ ಗೆಹಲೋತ್ ಅಭಿಮತ

ಯುವಪೀಳಿಗೆಯಿಂದ ಪ್ರಗತಿ

• **ಧಾರವಾಡ:** ವಿಶ್ವದಲ್ಲಿ ಭಾರತ ಉದಯೋನ್ಮುಖ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಯುವಜನರೇ ನಮ್ಮ ದೊಡ್ಡ ಶಕ್ತಿ. ದೃಢ ನಿಶ್ಚಯವೇ ಯಶಸ್ಸಿನ ಮಂತ್ರ. ಈ ನಾಡಿನ ಯುವಜನಾಂಗ ದೇಶವನ್ನು ಹೊಸ ಎತ್ತರಕ್ಕೆ ಬೆಳೆಸಲಿದ್ದಾರೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋಟ್ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವದಲ್ಲಿ ಅಧ್ಯಯನ ಮುಗಿಸಿದ ವಿವಿಧ ವಿಷಯಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದ ಅವರು, ಯುವಜನತೆ ಗುರಿಗೆ ಸಮರ್ಪಿತರಾಗಿರ ಬೇಕು ಮತ್ತು ಸಾಧಿಸಲು ಶ್ರಮಿಸಬೇಕು ಎಂದರು. ಇಂದು ತ್ವರಿತ ಬದಲಾವಣೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಜಾಗತಿಕ ಸ್ಪರ್ಧೆಯ ಯುಗ. ಕೃತಕ ಬುದ್ಧಿಮತ್ತೆ, ದತ್ತಾಂಶ ವಿಜ್ಞಾನ, ಜೈವಿಕ ತಂತ್ರಜ್ಞಾನ, ಹಸಿರು ಶಕ್ತಿ, ಸೈಬರ್ ಭದ್ರತೆ, ಡಿಜಿಟಲ್ ನಾವೀನ್ಯತೆ ಮುಂತಾದ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ನಿರಂತರ ವಾಗಿ ಹೊರಹೊಮ್ಮುತ್ತಿವೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಯುಗದಲ್ಲಿ, ನಿರಂತರ ಕಲಿಕೆಯ ಮನೋಭಾವ, ನವೀನ ಮನಸ್ಥಿತಿ ಮತ್ತು ಸಮಾಜದ ಜವಾಬ್ದಾರಿಯ ಪ್ರಜ್ಞೆ ಅತ್ಯಗತ್ಯ. ಆದ್ದರಿಂದ, ನೀವು ಕಲಿಯುವುದನ್ನು ಮುಂದುವರಿಸುವುದು, ನಿಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನವೀಕರಿಸುವುದು ಮತ್ತು ಕಾಲದ ಆಗತ್ಯಗಳನ್ನು ಪೂರೈಸಲು ನಿಮ ಕಲಿಕೆ ನಿರಂತರವಾಗಿರಬೇಕು ಎಂದು ಕಿವಿಮಾತು ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಮೇಡ್ ಇನ್ ಇಂಡಿಯಾ, ಮೇಕ್ ಇನ್ ಇಂಡಿಯಾ ಮತ್ತು ವೋಕಲ್ ಫಾರ್ ಲೋಕಲ್ ಮೂಲಕ ದೇಶವನ್ನು ಸ್ವಾವಲಂಬಿ ಮತ್ತು ಅಭಿವೃದ್ಧಿಗೊಳಿಸುವತ್ತ ಸಾಗುತ್ತಿದ್ದಾರೆ. ಯುವಕರು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಹೇಳಿದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಶಿಕ್ಷಣದ ಕೇಂದ್ರ ಮಾತ್ರವಲ್ಲದೆ ಸಾಮಾಜಿಕ ಪ್ರಜ್ಞೆ, ಸಂವೇದನೆ ಮತ್ತು ಬದಲಾವಣೆಯ ಜೀವಂತ ಸಂಕೇತವಾಗಿದೆ. ಈ ಸಂಸ್ಥೆಯು ಹಲವಾರು ವಿದ್ವಾಂಸರು, ವಿಜ್ಞಾನಿಗಳು, ಆಡಳಿತಗಾರರು, ಸಾಮಾಜಿಕ ಕಾರ್ಯಕರ್ತರು, ತತ್ವಜ್ಞಾನಿಗಳು, ರಾಜಕಾರಣಿಗಳು ಮತ್ತು ಕ್ರೀಡಾಪಟುಗಳನ್ನು ಉತ್ಪಾದಿಸಿದೆ, ಅವರು ರಾಜ್ಯ ಮತ್ತು ದೇಶಕ್ಕೆ ಗೌರವವನ್ನು ತಂದಿದ್ದಾರೆ.
■ ಥಾವರಚಂದ್ ಗೆಹಲೋಟ್, ರಾಜ್ಯಪಾಲ

ಸ್ಟಾರ್ಟ್‌ಅಪ್ ಸಂಸ್ಕೃತಿ, ನಾವೀನ್ಯತೆ, ಹೊಸ ತಂತ್ರಜ್ಞಾನಗಳು ಮತ್ತು ಸಂಶೋಧನೆಯ ಮೂಲಕ ಯುವಪೀಳಿಗೆ ದೇಶದ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡಬಹುದು. ಜೀವನದಲ್ಲಿ ಯಶಸ್ಸು, ಜ್ಞಾನ ಮತ್ತು ಪ್ರತಿಭೆ, ದೃಢನಿಶ್ಚಯ ಮತ್ತು ನಿರಂತರ ಪ್ರಯತ್ನದಿಂದ ಬರುತ್ತದೆ. ಕೆಲವೊಮ್ಮೆ ಉಂಟಾಗುವ ಹಿನ್ನಡೆ ಬದುಕಿನ ಭಾಗ ಎಂದರು.

ಪರಿಸರ ಸಂರಕ್ಷಣೆ ಇಂದಿನ ಪ್ರಮುಖ ವಿಷಯ ವಾಗಿದೆ. ಹವಾಮಾನ ಬದಲಾವಣೆ, ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸವಕಳಿ ಮುಂತಾದ ಸಮಸ್ಯೆಗಳು ಗಮನಾರ್ಹ ಸವಾಲು ಒಡ್ಡುತ್ತವೆ. ಪ್ರತಿಯೊಬ್ಬರೂ ಪರಿಸರ ಪ್ರಜ್ಞೆ ಹೊಂದಿರಬೇಕು ಮತ್ತು ಸುಸ್ಥಿರ ಅಭಿವೃದ್ಧಿಯ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳೇ, 'ಕನಸು ಕಾಣಿರಿ, ಅವುಗಳ

ಕರ್ನಾಟಕ ಬ್ಯಾಂಕ್ ಲಿ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ನಾಟಕ ಬ್ಯಾಂಕ್ ಬಿಲ್ಡಿಂಗ್,
ಕೊಡಿಯಾಲ್‌ಬೈಲ್, ಮಂಗಳೂರು-575003.

ದೂರವಾಣಿ : 0824-2422811(Gen)/2427811 (CM)
ಇ-ಮೇಲ್ : mlr.arm@ktkbank.com
Website : https://www.karnatakabank.bank.in
CIN : L85110KA1924PLC001128

ಸ್ವಾಧೀನತೆಯ ನೋಟೀಸು (ಸ್ಥಿರಾಸ್ತಿಗೆ ಸಂಬಂಧಿಸಿದಂತೆ)

ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002 ರ ಪರಿಚ್ಛೇದ 13 (12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ದಿನಾಂಕ **06.01.2026** ರಂದು **ತಗಾದೆ ನೋಟೀಸನ್ನು ಸಾಲಗಾರರು: 1) ಶ್ರೀಮತಿ ವಿನೋದಾ,** ಶ್ರೀ ಲಿಂಗಪ್ಪ ಪೂಜಾರಿಯವರ ಪತ್ನಿ, **2) ಶ್ರೀ ಲಿಂಗಪ್ಪ ಪೂಜಾರಿ,** ಶ್ರೀ ಕೊರಗಪ್ಪ ಪೂಜಾರಿಯವರ ಮಗ, **ನಂ. 1 & 2 ಇವರುಗಳ ವಿಳಾಸ:** 2-106/3, ಒಡಿರೊಟ್ಟು, ಬೆಳಾಲು ಅಂಚೆ & ಗ್ರಾಮ, ಬೆಳ್ತಂಗಡಿ, ದ.ಕ.ಜಿಲ್ಲೆ – 574 240. ಇವರಿಗೆ ಸದ್ರಿ ಸಾಲದ ಬಾಕಿ ಬಾಬ್ತು **ಪಿಎಸ್‌ಟಿಎಲ್ ಖಾತೆ ಸಂಖ್ಯೆ 4517001800058401** ರಲ್ಲಿ ಒಟ್ಟು ಮೊತ್ತ **ರೂ. 6,00,055.72 (ರೂಪಾಯಿ ಆರು ಲಕ್ಷದ ಐವತ್ತೈದು ಮತ್ತು ಪೈಸೆ ಎಪ್ಪತ್ತೆರಡು ಮಾತ್ರ)** ಮತ್ತು ದಿನಾಂಕ **20.12.2025** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳನ್ನು ಈ ನೋಟೀಸು ಪಡೆದ ದಿನಾಂಕದಿಂದ **60 ದಿನಗಳೊಳಗೆ** ಪಾವತಿಸುವಂತೇ ಸೂಚಿಸಲಾಗಿರುತ್ತದೆ.

ಸಾಲಗಾರರು / ಅಡಮಾನದಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 23.04.2026 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ** ಎಂದು ಸಾಲಗಾರರಿಗೆ / ಅಡಮಾನದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರು / ಅಡಮಾನದಾರರು ಮತ್ತು ಸಾರ್ವಜನಿಕರು ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ **ಕರ್ನಾಟಕ ಬ್ಯಾಂಕ್, ಉಜಿರೆ ಶಾಖೆಗೆ** ಸಲ್ಲತಕ್ಕ **ಪಿಎಸ್‌ಟಿಎಲ್ ಖಾತೆ ಸಂಖ್ಯೆ 4517001800058401** ರಲ್ಲಿ ಒಟ್ಟು ಮೊತ್ತ **ರೂ. 6,12,784.72 (ರೂಪಾಯಿ ಆರು ಲಕ್ಷದ ಹನ್ನೆರಡು ಸಾವಿರದ ಏಳ್ನೂರ ಎಂಭತ್ತನಾಲ್ಕು ಮತ್ತು ಪೈಸೆ ಎಪ್ಪತ್ತೆರಡು ಮಾತ್ರ)** ಮತ್ತು ದಿನಾಂಕ **20.04.2026** ರಿಂದ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳ ಪಾವತಿಗೆ ಬಾಧ್ಯಸ್ಥರಾಗಿರುತ್ತಾರೆ.

(ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8) ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರ & ಅಡಮಾನದಾರರ ಗಮನವನ್ನು ಸೆಳೆಯಲಾಗಿದೆ).

ಸ್ಥಿರಾಸ್ತಿಯ ವಿವರಗಳು

ಶ್ರೀಮತಿ ವಿನೋದಾ ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಕೃಷಿಯೇತರ ಆಸ್ತಿಯ **ಸರ್ವೆ ನಂಬ್ರ 237/1,** ಆಸ್ತಿ ಐಡಿ **ನಂಬ್ರ 151100102100120527,** ವಿಸ್ತೀರ್ಣ **9 ಸೆಂಟ್ಸ್** ಅದರೊಂದಿಗೆ ಅಲ್ಲಿರುವ ಕಟ್ಟಡ ಒಳಗೊಂಡಿದೆ. ಈ ಸ್ಥಿರಾಸ್ತಿಯು ಬೆಳಾಲು ಗ್ರಾಮ, ಬೆಳ್ತಂಗಡಿ ತಾಲೂಕು, ದ.ಕ.ಜಿಲ್ಲೆಯಲ್ಲಿದೆ. **ಗಡಿರೇಖೆಗಳು: (ದಾಖಲೆಗಳ ಪ್ರಕಾರ & ವಾಸ್ತವ): ಪೂರ್ವ:** ಸರ್ವೆ ನಂಬ್ರ 237/1 ರ ಉಳಿದ ಭಾಗ; **ಪಶ್ಚಿಮ:** ಸರ್ವೆ ನಂಬ್ರ 237/1 ರ ಉಳಿದ ಭಾಗ; **ಉತ್ತರ:** ಸರ್ವೆ ನಂಬ್ರ 237/1 ರ ಉಳಿದ ಭಾಗ; **ದಕ್ಷಿಣ:** ಸರ್ವೆ ನಂಬ್ರ 237/1 ರ ಉಳಿದ ಭಾಗ.

ದಿನಾಂಕ : **23.04.2026** ಸಹಿ/-, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಸ್ಥಳ : ಬೆಳಾಲು ಗ್ರಾಮ, ಬೆಳ್ತಂಗಡಿ ತಾಲೂಕು ಕರ್ನಾಟಕ ಬ್ಯಾಂಕ್ ಲಿ.,

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಯೋಜನಾ ವಿಭಾಗ,
ಜಯನಗರ 1 ನೇ ಕ್ರಾಸ್, ವಿನಾಯಕ ಹಾಲ್ ಎದುರುಗಡೆ ಧಾರವಾಡ-580001,
ಮೊಬೈಲ್ ನಂ : 9449599477 E-mail : kn-dha@pmgsy.nic.in

ಕ್ರ.ಸಂ:ಕಾನಿಇ೦/ಯೋವಿಧಾ/ಸ.ಇ೦/2026-27/47 ದಿನಾಂಕ : 23-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಯೋಜನಾ ವಿಭಾಗ, ಧಾರವಾಡ ಇವರು ಕಾಮಗಾರಿಯ ಐಟಂ ರೇಟ್ ದರಗಳ ಟೆಂಡರನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ದ್ವಿ ಲಕೋಟೆಯಲ್ಲಿ ಇಚ್ಛೆಯುಳ್ಳ ನೋಂದಾಯಿತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ.

ಕಾಮಗಾರಿ ವಿವರಗಳು : ಇಂಡೆಂಟ್ ನಂ. 1) KRRDA/2025-26/RD/Work Indent 535

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕಾಮಗಾರಿಗಳ, ಟೆಂಡರ್‌ಗಿಟ್ಟ ಮೊತ್ತ ರೂ. ಕೆ.ಪಿ.ಪಿ ಪೋರ್ಟಲ್‌ನಲ್ಲಿ ವೀಕ್ಷಿಸುವುದು. ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮುಂಗಡ ಠೇವಣಿ ಮೊತ್ತ ರೂ. ಕೆ.ಪಿ.ಪಿ ಪೋರ್ಟಲ್‌ನಲ್ಲಿ ವೀಕ್ಷಿಸುವುದು. **ಕ್ಯಾಲೆಂಡರ್ ಆಫ್ ಇವೆಂಟ್ಸ್** : (1) ಟೆಂಡರ್ ದಾಖಲೆಗಳನ್ನು ಡೌನಲೋಡ್ ಮಾಡಿಕೊಳ್ಳುವುದು ದಿನಾಂಕ : **24-04-2026** ಬೆಳಿಗ್ಗೆ 11.00 ಗಂಟೆಗೆ (2) ಪ್ರೀ ಬಿಡ್ ಮೀಟಿಂಗ್ ದಿನಾಂಕ : **29-04-2026** ಬೆಳಿಗ್ಗೆ 11.00 ಗಂಟೆಗೆ (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **02-05-2026** ಸಂಜೆ 5.00 ಗಂಟೆಗೆ (4) ತಾಂತ್ರಿಕ ಟೆಂಡರ್ ಬಿಡ್ ತೆರೆಯುವ ದಿನಾಂಕ : **04-05-2026** ಬೆಳಿಗ್ಗೆ 11.30 ಗಂಟೆಗೆ.

ಲೋಕೋಪಯೋಗಿ ಇಲಾಖೆ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನೀಯರ್, ಯೋಜನಾ ವಿಭಾಗ, ಧಾರವಾಡ ಇವರನ್ನು ಸಂಪರ್ಕಿಸಬಹುದು. ಮಾಹಿತಿಯನ್ನು https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಎಮ್.ಎಸ್. ದಿವಟರ್)
ಕಾರ್ಯನಿರ್ವಾಹಕ ಇಂಜಿನೀಯರರು,
ಯೋಜನಾ ವಿಭಾಗ ಧಾರವಾಡ.

ವಾಸಾಸಂ೦ಇ/ಧಾ/ಕೆಎಸ್‌ಎಂಸಿಎ/89/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/ಕೆಕೆಆರ್‌ಡಿಬಿ/2025-26/401 ದಿನಾಂಕ: **22.04.2026**

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ/ಏಕ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT35081	54.36
2)	PWD/2026-27/RD/WORK_INDENT35470	90.00
3)	PWD/2026-27/RD/WORK_INDENT35843	108.69
4)	PWD/2026-27/RD/WORK_INDENT35586	75.00
5)	PWD/2025-26/RD/WORK_INDENT35157	108.18
6)	PWD/2025-26/BR/WORK_INDENT35846	211.93

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗದಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **27.04.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಅಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **29.04.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **06.05.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **07.05.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಪಿ.ಸಂಖ್ಯೆ/77 ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

IBS Empowering Youth, Empowering India
INDIA'S NO.1 PREMIER INSTITUTE
www.ibsindia.co.in

ADMISSION OPEN 2026-27

IBPS BANK-PO/ Clerk SSC CLAT
INSURANCE DEFENCE RRB NDA CDS
- Online Mock Tests/ Excellent Study Materials
- 40+ Centres all over India
- Individual Coaching (Personalised) available for all Courses
- Crash Course for PGCET and DCET (2026) commencing shortly

IBS INSTITUTE MANGALORE
3rd Floor, PVS Centenary Building, PVS Circle, Kodialbail, Mangaluru
Call: 99452 38106

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಖಿಬಿ.3/ಟೆಂಡರ/2026-27/120

ದಿನಾಂಕ : 22-04-2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, KW-2,

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-1,KW-2, ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 11 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

WORK_INDENT : 26045, 26042, 26040, 26038, 26037, 26030, 26018, 26128, 26131, 26132, 26041

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **16.77** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **33.53** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **23-04-2026** ರಿಂದ **08-05-2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **11-02-2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ವಾಸಾಸಂ೦ಇ/ಗದಗ/ಕೆಎಸ್‌ಎಂಸಿಎ/35/2026-27 ಗದಗ

ಕರ್ನಾಟಕ ಬ್ಯಾಂಕ್ ಲಿ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ : ಮಂಗಳೂರು – 575 002. CIN :L85110KA1924PLC001128
ಇ-ಮೇಲ್ : info@ktkbank.com ವೆಬ್‌ಸೈಟ್ : https://www.karnatakabank.bank.in

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ನಾಟಕ ಬ್ಯಾಂಕ್ ಬಿಲ್ಡಿಂಗ್, ಕೊಡಿಯಾಲ್‌ಬೈಲ್, ಮಂಗಳೂರು – 575 003. ದೂರವಾಣಿ: 0824-2422811(Gen)/2427811 (CM) ಇ-ಮೇಲ್: mlr.arm@ktkbank.com

ಸ್ವಾಧೀನತೆಯ ನೋಟೀಸು (ಸ್ಥಿರಾಸ್ತಿಗೆ ಸಂಬಂಧಿಸಿದಂತೆ)

ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 (SARFAESI ACT 2002) ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಪರಿಚ್ಛೇದ 13(12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ಸದರಿ ಕಾಯ್ದೆಯ ಸೆಕ್ಷನ್ 13(2)ರಂತೇ ತಗಾದೆ ನೋಟೀಸನ್ನು ಈ ಕೆಳಕಾಣಿಸಿದ ಸಾಲಗಾರರಿಗೆ / ಅಡಮಾನದಾರರಿಗೆ / ಸಹ-ಬಾಧ್ಯತೆದಾರರಿಗೆ / ಜಾಮೀನುದಾರರಿಗೆ ನೀಡಿದ್ದು, ತಗಾದೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ **60 ದಿನಗಳೊಳಗೆ** ಬಾಕಿಗಳನ್ನು ಮರುಪಾವತಿಸಲು ಸಾಲಗಾರರಿಗೆ ಸೂಚಿಸಲಾಗಿತ್ತು.

1) ಶಾಖೆ: ಮಂಗಳೂರು-ಬಂದರು, **ಸಾಲಗಾರರ / ಅಡಮಾನದಾರರ / ಜಾಮೀನುದಾರರ / ಸಹ-ಬಾಧ್ಯತೆದಾರರ ಹೆಸರು & ವಿಳಾಸ: 1) ಮೆ. ಕಿರಣ್ ಎಂಟರ್‌ಪ್ರೈಸಸ್,** ಇದನ್ನು ಪ್ರತಿನಿಧಿಸುವ ಮಾಲಕಿ **ಶ್ರೀಮತಿ ಕಿರಣ ಪ್ರಜಾಪತಿ, ವಿಳಾಸ:** 1ನೇ ಮಹಡಿ, ಡೋರ್ ನಂ. 11-9-931/10, ಗಂಗಾ ಯಮುನಾ ಬಿಲ್ಡಿಂಗ್, ಮುಖ್ಯ ಪ್ರಾಣ ದೇವಸ್ಥಾನ ರಸ್ತೆ, ಕಸಬಾ ಬಜಾರ್, ಬಂದರು, ಮಂಗಳೂರು – 575 001. **2) ಶ್ರೀಮತಿ ಕಿರಣ ಪ್ರಜಾಪತಿ,** ದಿ. ಅಶೋಕ್‌ಕುಮಾರ್ ಪ್ರಜಾಪತ್‌ರವರ ಪತ್ನಿ, **3) ಶ್ರೀ ಪಂಕಜ್ ಕುಮಾರ್ ಪ್ರಜಾಪತಿ,** ದಿ. ಅಶೋಕ್‌ಕುಮಾರ್ ಪ್ರಜಾಪತ್ ರವರ ಮಗ, **4) ಶ್ರೀ ಗೋವಿಂದ ರಾಮ್ ಪ್ರಜಾಪತ್,** ಶ್ರೀ ಶಂಕರಲಾಲ್ ಪ್ರಜಾಪತ್ ರವರ ಮಗ, **ವಿಳಾಸ:** #5-6-572/43, "ದಿಯಾ ರೆಸಿಡೆನ್ಸಿ", ಫ್ಲ್ಯಾಟ್ ನಂಬ್ರ 405, ಭಗವತಿ ನಗರ ಕ್ರಾಸ್‌ರೋಡ್, ಬೋಜರಾವ್ ಲೇನ್, ಪ್ರಗತಿ ಸರ್ವೀಸ್ ಸ್ಟೇಷನ್‌ನ ಹತ್ತಿರ, ಕುದ್ರೋಳಿ, ಕಂಬ್ಳ ವಾರ್ಡ್, ಮಂಗಳೂರು – 575 003. **5) ಕು. ಮಾನ್ಸಿ ಪ್ರಜಾಪತಿ,** ದಿ. ಅಶೋಕ್‌ಕುಮಾರ್ ಪ್ರಜಾಪತಿ ರವರ ಮಗಳು, **6) ಕು. ಮೇಘ ಪ್ರಜಾಪತಿ,** ದಿ. ಅಶೋಕ್‌ಕುಮಾರ್ ಪ್ರಜಾಪತ್ ರವರ ಮಗಳು, **ನಂ. 2, 3, 5 ಮತ್ತು 6 ಇವರುಗಳ ವಿಳಾಸ:** #5-6-572/40, 'ದಿಯಾ ರೆಸಿಡೆನ್ಸಿ', ಫ್ಲ್ಯಾಟ್ ನಂ. 403, ಭಗವತಿ ನಗರ ಕ್ರಾಸ್‌ರೋಡ್, ಬೋಜರಾವ

ಬಳಂಜ ದೇವಸ್ಥಾನದಲ್ಲಿ ಕಿಡಿಗೇಡಿಯ ದಾಂಧಲೆ

ಬೆಳ್ತಂಗಡಿ: ತಡರಾತ್ರಿ ಕಿಡಿಗೇಡಿಯೊಬ್ಬ ಏಕಾಏಕಿ ದಾಂಧಲೆ ಎಬ್ಬಿಸಿ, ಇತಿಹಾಸ ಪ್ರಸಿದ್ಧ ಬಳಂಜ ಶ್ರೀ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ನುಗ್ಗಿ ದೇವರ ಮೂರ್ತಿಯನ್ನು ಭಗ್ನಗೊಳಿಸಿದ ಘಟನೆ ಬುಧವಾರ ತಡರಾತ್ರಿ ನಡೆದಿದೆ.

ಕಳೆದ ರಾತ್ರಿ ಸಮಯ ಎರಡು ಗಂಟೆಗೆ ಕಪ್ಪು ಕಲರಿನ ಥಾರ್ ವಾಹನದಲ್ಲಿ ದೇವಸ್ಥಾನದ ಪಕ್ಕದಲ್ಲಿರುವ ಸುಬ್ರಹ್ಮಣ್ಯ ಭಟ್ ಅವರ ಮನೆಗೆ ಬಂದ ಆಡೇಯ್ ಎಂಬಾತ 'ಎನನ್ ಬಚಾವ್ ಮಲ್ಪಿ' ಎಂದು ಜೋರಾಗಿ ಕೂಗಾಡಿ ಮನೆಗೆ ನುಗ್ಗಲು ಯತ್ನಿಸಿದಾಗ ಮನೆಯರು ಜೋರು ಮಾಡಿದ ವಿಚಾರ ಬೆಳಕಿಗೆ ಬಂದಿದೆ. ಬಳಿಕ ಈತ ಬಳಂಜ ದೇವಸ್ಥಾನದ ಪವಿತ್ರವಾದ ದೇವರ ಜಳಕದ ಕೆರೆಗೆ ಹಾರಿ ಆಲ್ಲಿಂದ ಸೀದಾ ದೇವಸ್ಥಾನಕ್ಕೆ ಬಂದು ಕಂಬದ ಮೂಲಕ ದೇವಸ್ಥಾನದ ಮೇಲೆ ಹೋಗಿ ಹಂಚು ತೆಗೆದು ಒಳನುಗ್ಗಿ ಕೊಡಮಣಿತ್ತಾಯ ದೈವದ ಗುಡಿಗೆ ಇಳಿದು ದೈವದ ಮಣೆ ಮಂಚದಲ್ಲಿದ್ದ ಘಂಟಾಮಣಿಯನ್ನು ತೆಗೆದು ದೇವಸ್ಥಾನ ಮೇಲ್ಚಾವಣಿಯಲ್ಲಿ ಹಂಚುಗಳ ಪಕ್ಕದಲ್ಲಿ ಇಟ್ಟು ವಿಕೃತಿ ಮೆರೆದಿದ್ದಾನೆ.

ಬಳಿಕ ದೇವಸ್ಥಾನ ತೀರ್ಥ ಮಂಟಪದ ಬಳಿಯಿರುವ ದೊಡ್ಡ ಘಂಟೆಯನ್ನು ಬಾರಿಸಿ,ಗೋಪಾಲಕೃಷ್ಣ ದೇವರ ಗುಡಿಯೊಳಗೆ ನುಗ್ಗಿ ದೇವರ ವಿಗ್ರಹವನ್ನು ತೆಗೆದು ನೆಲಕ್ಕೆ ಎಸೆದು ಭಗ್ನಗೊಳಿಸಿದ್ದಾನೆ. ಗುಡಿಯೊಳಗಿದ್ದ ದೇವರ ಪರಿಕರಗಳನ್ನು ಚೆಲ್ಲಾಪಿಲ್ಲಿಗೊಳಿಸಿದ್ದಾನೆ.

ಈ ಘಟನೆಯನ್ನು ಕಿಡಿಗೇಡಿಯ ಮನೆಯವರಿಗೆ ಮತ್ತು ಸ್ಥಳೀಯ ನಿವಾಸಿ ನಿತ್ಯಾನಂದ ಹೆಗ್ಡೆಯವರಿಗೆ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆರ್ಚಕ ರಾಘವೇಂದ್ರ ಭಟ್ ಅವರು ವಿಷಯ ಮುಟ್ಟಿಸಿದ್ದು ಅವರು ಸ್ಥಳಕ್ಕೆ ಬಂದಿದ್ದಾರೆ. ಈಗಾಗಲೇ ಬಳಂಜ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಅನುವಂಶೀಯ ಆಡಳಿತ ಮೊಕ್ತೇಸರ ಬಿ.ಶೀತಲ್ ಪಡಿವಾಳ್ ಅವರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈ ಘಟನೆಯಿಂದ ಸ್ಥಳೀಯರ ದೇವಸ್ಥಾನದ ಭಕ್ತ ವರ್ಗದಲ್ಲಿ ದಿಗ್ಭ್ರಮೆ ಮೂಡಿಸಿದ್ದು ಈ ಘಟನೆಯಿಂದ ಆತಂಕ ಕೂಡ ನಿರ್ಮಾಣವಾಗಿದೆ.

ಪೊಲೀಸ್ ಇಲಾಖೆ ಈ ಘಟನೆಯನ್ನು ಗಂಭೀರವಾಗಿ ತನಿಖೆ ನಡೆಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಕಿಡಿಗೇಡಿಯ ಈ ಕೃತ್ಯಕ್ಕೆ ಕಾರಣವೇನು ಎಂಬುದು ನಿಗೂಢವಾಗಿದೆ.

ಇತ್ತೀಚೀನ ದಿನಗಳಲ್ಲಿ ರಾತ್ರಿ ತಿರುಗುವ ವಾಹನ, ಗಾಂಜಾ, ಡ್ರಗ್ಸ್ ಬಗ್ಗೆ ಗಾಳಿ ಸುದ್ದಿಯಿದ್ದು ಇದರ ಬಗ್ಗೆಯೂ ತನಿಖೆ ಆಗಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಕಪ್ಪು ಬಣ್ಣದ ಥಾರ್ ವಾಹನ ಸುಬ್ರಹ್ಮಣ್ಯ ಭಟ್ ಅವರ ಮನೆಯಂಗಳದಲ್ಲಿದೆ.

ಇಂದಿನಿಂದ ಮುಡಿಪುವಿನಲ್ಲಿ ಕೃಷಿ ಮೇಳ

ಉಳ್ಳಾಲ: ಮುಡಿಪು ಉತ್ಸವ ಸಮಿತಿ, ಕೃಷಿಕ ಸಮಾಜ ಉಳ್ಳಾಲ ಹಾಗೂ ಯು.ಟಿ.ಫರೀದ್ ಚಾರಿಟೇಬಲ್ ಫೌಂಡೇಶನ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ವಿವಿಧ ಸಂಘ ಸಂಸ್ಥೆಗಳು ಮತ್ತು ಸರ್ಕಾರಿ ಇಲಾಖೆಗಳ ಸಹಭಾಗಿತ್ವದಲ್ಲಿ ಬೃಹತ್ ಕೃಷಿ ಮೇಳ ಹಾಗೂ ಮುಡಿಪು ಉತ್ಸವ ಏ.24ರಿಂದ 26ರವರೆಗೆ ಮುಡಿಪು ಬೆಟ್ಟದ ಶ್ರೀಕೃಷ್ಣ ಧ್ಯಾನ ಮಂದಿರದ ಬಳಿ ನಡೆಯಲಿದೆ ಎಂದು ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ದೇವದಾಸ್ ಭಂಡಾರಿ ತಿಳಿಸಿದರು.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರ ಅಧ್ಯಕ್ಷತೆಯಲ್ಲಿ ಏ.24ರಂದು ಬೆಳಗ್ಗೆ 9.30ಕ್ಕೆ ಕೃಷಿ ಸಚಿವ ಚೆಲುವರಾಯ ಸ್ವಾಮಿ ಕೃಷಿ ಮೇಳ, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮುಡಿಪು ಉತ್ಸವ ಹಾಗೂ ಸಂಸದ ಕ್ಯಾ.ಬ್ರಿಜೇಶ್ ಚೌಟ ಆಹಾರ ಮೇಳಗಳನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ಧ್ಯಾನ ಮಂದಿರದ ಸ್ಥಾಪಕರಾದ ಡಾ.ಮದನ್ ಮೋಹನ್ ನಾಯಕ್ ಆಡೇಳ ಇವರಿಗೆ 'ಸೇವಾ ಧುರಂಧರ' ಪ್ರಶಸ್ತಿ, ಮಾನವ ಹಕ್ಕು ಆಯೋಗದ ಅಧ್ಯಕ್ಷ ಶ್ಯಾಮ್ ಭಟ್,ಯೇನೆಪೋಯ ವಿವಿ ಕುಲಾಧಿಪತಿ ವೈ.ಅಬ್ದುಲ್ಲಾ ಕುಂಞ,ಅದಾನಿ ಗ್ರೂಪ್ ಅಧ್ಯಕ್ಷ ಕಿಶೋರ್ ಆಳ್ವ ಹಾಗೂ ಅನಿವಾಸಿ ಭಾರತೀಯ ರೊನಾಲ್ಡ್ ಕೊಲಾಸೋ ಇವರಿಗೆ ಗೌರವಾಭಿನಂದನೆ ನಡೆಯಲಿದೆ. ಪ್ರತಿ ದಿನ ರಾತ್ರಿ 8 ಗಂಟೆಗೆ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ. ಏ.26ರಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಮುಡಿಪು ಉತ್ಸವ ಸಮಿತಿ ಸಂಚಾಲಕರಾದ ನಾಸಿರ್ ನಡುಪದವು ಮಾತನಾಡಿ ಏ.25ರಂದು ಬೆಳಗ್ಗೆ 9.30ರಿಂದ ನಡೆಯುವ ಕೃಷಿ ವಿಚಾರ ಸಂಕಿರಣದಲ್ಲಿ 'ಮಣ್ಣಿನ ಫಲವತ್ತತೆ, ಪೋಷಕಾಂಶ ನಿರ್ವಹಣೆ,11ರಿಂದ 'ಉನ್ನತ ತಳಿಯ ಕರು ಪ್ರದರ್ಶನ ಮತ್ತು ಮಾಹಿತಿ', 12ರಿಂದ 'ಅಡಿಕೆ ಎಲೆಚುಕ್ಕೆ ರೋಗ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ' ಏ.26ರ ಬೆಳಗ್ಗೆ 9.30ರಿಂದ 'ಗೇರು ಹಣ್ಣಿನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ', 11ರಿಂದ 'ಜೇನು ಸಾಕಾಣಿಕೆ', 12ರಿಂದ ತೋಟಗಾರಿಕಾ ಬೆಳೆಗಳ ಅಭಿವೃದ್ಧಿ ಹಾಗೂ ಸರ್ಕಾರದ ನೆರವು' ವಿಷಯದಲ್ಲಿ ವಿಚಾರ ಸಂಕಿರಣ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮುಡಿಪು ಉತ್ಸವಸಮಿತಿಯಮಹಿಳಾವಿಭಾಗಅಧ್ಯಕ್ಷೆಮಮತಾಗಟ್ಟಿ,ಸಾಂಸ್ಥಿಕ ಸಂಚಾಲಕ ಚಂದ್ರಹಾಸ ಕಣಂತೂರು,ಉತ್ಸವ ಸಮಿತಿ ಪ್ರಧಾನ ಸಂಚಾಲಕರಾದ ಆಬ್ದುಲ್ ಜಲೀಲ್ ಮೋಂಟುಗೋಳಿ, ಕಾರ್ಯಕ್ರಮ ಸಂಯೋಜಕರಾದ ಅಜಿತ್ ಪೂಜಾರಿ ಹಾಗೂ ಪ್ರದೀಪ್ ಡಿಸೋಜ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಏ. 24-26 : ಎಸ್‌ಡಿಎಂ ಕಾಲೇಜಿನಿಂದ ಕಾನೂನು ಹಬ್ಬ

ಮಂಗಳೂರು: ಎಸ್‌ಡಿಎಂ ಕಾನೂನು ಕಾಲೇಜು ವತಿಯಿಂದ ಮೂಟ್ ಕೋರ್ಟ್ ಸೊಸೈಟಿ ಮತ್ತು ಪೂರ್ವ ವಿದ್ಯಾರ್ಥಿ ಸಂಘದ ವತಿಯಿಂದ 28ನೇ ವರ್ಷದ ಕಾನೂನು ಹಬ್ಬ 'ಲೆಕ್ಸ್ ಆಲ್ಟಿಮಾ' ಏ. 24-26ರ ವರೆಗೆ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ.

ಏ.24ರಂದು ಬೆಳಗ್ಗೆ 9.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕೇರಳದ ಕೊಚ್ಚಿಯ ನ್ಯಾಷನಲ್ ಯುನಿವರ್ಸಿಟಿ ಆಫ್ ಅಡ್ವಾನ್ಸ್ಡ್ ಲೀಗಲ್ ಸ್ಟಡೀಸ್‌ನ ಕುಲಪತಿ ಡಾ. ಬಿ.ಜಿ.ರೆಡ್ಡಿ ಉದ್ಘಾಟಿಸಲಿದ್ದಾರೆ. ಪೂರ್ವ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವೇಂದ್ರ ರಾವ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಏ.26ರಂದು ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಹೈಕೋರ್ಟ್ ನ್ಯಾಯಾಧೀಶರಾದ ಹಳೆ ವಿದ್ಯಾರ್ಥಿ ತ್ಯಾಗರಾಜ ಎನ್. ಇನವಳ್ಳಿ ಸಮಾರೋಪ ಭಾಷಣ ಮಾಡಲಿದ್ದಾರೆ. ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಎಸ್‌ಡಿಎಂ ಕಾನೂನು ಕಾಲೇಜು ಪ್ರಾಂಶುಪಾಲ ಡಾ. ತಾರಾನಾಥ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾನೂನು ಹಬ್ಬದಲ್ಲಿ ದೇಶದ ವಿವಿಧೆಡೆಗಳಿಂದ 26 ತಂಡಗಳು ಭಾಗವಹಿಸಲಿವೆ. ಸ್ಪರ್ಧೆಯಲ್ಲಿ ಆಲ್ ಇನ್ ಆಲ್ ಎಡ್ವೊಕೆಸಿ ಪ್ರಾಕಾರಗಳ ಜತೆಗೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ, ಜಾಮೀನು ಅರ್ಜಿ ಹಾಗೂ ಶಾಸನ ರಚನೆ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಎಂದರು.

ಕಾರ್ಯಕ್ರಮ ಸಂಚಾಲಕಿಡಾ. ಆಶ್ವಿನಿ ಪಿ., ಪೂರ್ವ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವೇಂದ್ರರಾವ್, ವಿದ್ಯಾರ್ಥಿ ಕಾರ್ಯದರ್ಶಿ ವಿಂದ್ಯಾ ಕೆ., ವಿದ್ಯಾರ್ಥಿ ಸಂಚಾಲಕರಾದ ಮಹನ್, ಸೃಜನ್ ಪ್ರಸಾದ್, ಸಂಜನಾ ಶೆಟ್ಟಿ, ಸ್ವಾತಿ ಶೆಟ್ಟಿ ಉಪಸ್ಥಿತರಿದ್ದರು.

ನಿಡಿಗಲ್ ಶ್ರೀ ಲೋಕನಾಥೇಶ್ವರ ದೇವಸ್ಥಾನದ ಕಾಣಿಕೆ ಡಬ್ಬಿಗಳ ಕಳವು

ಬೆಳ್ತಂಗಡಿ: ಕನ್ಯಾಡಿ ಗ್ರಾಮದ ನಿಡಿಗಲ್ ಶ್ರೀ ಲೋಕನಾಥೇಶ್ವರ ದೇವಸ್ಥಾನದ ಬೀಗ ಮುರಿದು ಕಳ್ಳರು ನಾಲ್ಕು ಕಾಣಿಕೆ ಡಬ್ಬಿಗಳನ್ನು ಹೊತ್ತೊಯ್ದಿದ್ದಾರೆ.

ಮಂಗಳವಾರ ತಡ ರಾತ್ರಿ ದೇವಸ್ಥಾನದ ಎದುರಿನ ಬಾಗಿಲಿನ ಬೀಗ ಮುರಿದು ಒಳನುಗ್ಗಿದ ಕಳ್ಳರು ದೇವಸ್ಥಾನದ ಒಳಗೆ ಇದ್ದ ಒಂದು ದೊಡ್ಡ ಕಾಣಿಕೆ ಡಬ್ಬಿ ಹಾಗೂ ಮೂರು ಸಣ್ಣ ಕಾಣಿಕೆ ಡಬ್ಬಿಗಳನ್ನು ಹಿಡಿದು ಕೊಂಡು ಪರಾರಿಯಾಗಿದ್ದಾರೆ.

ಕಳ್ಳರು ದೇವಸ್ಥಾನ ಬೀಗ ಮುರಿದು ಒಳನುಗ್ಗಿ ಕಾಣಿಕೆ ಡಬ್ಬಿಕಳವು ಮಾಡಿರುವುದು ಸಿಸಿ ಕ್ಯಾಮೆರದಲ್ಲಿ ಸೆರೆಯಾಗಿದೆ. ದೇವಸ್ಥಾನದ ಸಿರಿ ಜಾತ್ರೋತ್ಸವ ಇತ್ತೀಚೆಗೆ ನಡೆದಿತ್ತು.

ಡಬ್ಬಿಯಲ್ಲಿ ಅಪಾರ ಹಣ ಇತ್ತೆಂದು ಅಂದಾಜಿಸಲಾಗಿದೆ. ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗುರುರಾಜ್ ಗುರಿಪಳ್ಳ ಹಾಗೂ ಸಮಿತಿ ಸದಸ್ಯರು ಬೆಳ್ತಂಗಡಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

23-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	445 - 475
ಚೋಲ್ ಅಡಿಕೆ	:	525 - 550
ಡಬಲ್ ಚೋಲ್	:	525 - 550
ಹೊಸ ಪಟೋರ	:	350 - 400
ಹಳೆ ಪಟೋರ	:	375 - 405
ಹೊಸ ಉಳ್ಳಿ	:	120 - 290
ಹಳೆ ಉಳ್ಳಿ	:	110 - 290
ಹೊಸ ಕೋಕಾ	:	325 - 345
ಹಳೆ ಕೋಕಾ	:	325 - 345
ಹೊಸ ಕರಿಗೋಟು	:	235 - 265
ಹಳೆ ಕರಿಗೋಟು	:	235 - 265
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	230.50
ಆರ್‌ಎಸ್‌ಎಸ್ 2	-	196.00
ಸ್ಕಾಪ್ 1	-	144.00
ಸ್ಕಾಪ್ 2	-	125.00

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,
ಲೋ.ಇ. ಉಡುಪಿ ವಿಭಾಗ - ಉಡುಪಿ - 576101
ದೂರವಾಣಿ & ಫ್ಯಾಕ್ಸ್: (0820) 2531802
ನಂ. ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ: 01:2025-26: ಎಇ-2 ದಿನಾಂಕ: 22.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರೂ. 5.02 ಲಕ್ಷ ಮತ್ತು 59.99 ಲಕ್ಷದ 5054-80-190-0-01-132- ಕರ್ನಾಟಕ ರಸ್ತೆ ಅಭಿವೃದ್ಧಿನಿಗಮ ನಿಯಮಿತ ಬಂಡವಾಳ ವೆಚ್ಚ ಮತ್ತು ಕಾಲುಸಂಕ ಯೋಜನೆಯಡಿಯ 7 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್'' "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ?ಯಕ್ಟ್ 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಮುಖಾಂತರ ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:04.05.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

BEFORE THE HONOURABLE
I ADDL. FAMILY COURT
AT MANGALORE, D.K.
M.C. No.18/2026

Between:
Mrs.Supriya Sadashiva Shetty
...Petitioner
AND
Mr. Manamohan Sadashiva Alva
...Respondent

To,
Mr. Manamohan Sadashiva
Alva,
S/o Late Sadashiva Alva,
Aged about 53 years,
R/at 'Devikrupa' House,
Hosabettu Village,
Manjeshwara Post,
Kasaragod Taluk.

Take notice that the above named Petitioner has filed this petition against you In M.C.No.18/2026 before this Court for divorce petition and as the summons could not be served to you by registered post; the court has ordered service by publication. If you desire to contest the petition you are hereby informed that you may appear personally or through a duly If you fail instructed advocate and on **01-06-2026 at 11 A.M.** to appear on the stated date and time, the court will note your absence and will proceed to decide this suit in your absence.

Given under my hand and seal this 23rd day of April 2026 at Mangaluru.

(By order of the Court)
Sd/- Sheristedar
I Addl. Family Court
D.K., Mangaluru
Sd(Nithin Kumar Kuthar, (Shabana L.)
Advocate for Petitioner

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್ಎ.ಟಿ ಸಂಖ್ಯೆ 02/2026-27 ದಿನಾಂಕ: 18.04.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 2 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಧಿಸೂಚನೆಯಂತೆ ದಿ: 18.04.2026 ರಿಂದ ಟೆಂಡರು ದಾಖಲಾತಿಗಳನ್ನು https://kppp. karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 718.74 ಲಕ್ಷಗಳು ಮತ್ತು ಕನಿಷ್ಠ 21.13 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.10,78,120/- ಮತ್ತು ಕನಿಷ್ಠ ರೂ.25,000/-, ಗುತ್ತಿಗೆ ಕಾಲಾವಧಿ ಗರಿಷ್ಠ 7-ತಿಂಗಳು ಮತ್ತು ಕನಿಷ್ಠ 2-ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ದಿನಾಂಕ: 27.08.2026 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS/85/KSMCA/73/2026-27

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರುದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ.

ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೌಲ್ಯ / ಇಎಂಡಿ
ಐ.ಎಫ್.ಟಿ. ಸಂಖ್ಯೆ: ಬೆಜಮಂ/ಪ್ರಮುಅ/ಅಮುಅ(ಸಿಎಸ್&ಡಿಪಿಡಬ್ಲ್ಯೂ)/ತಾಂಸ(ಯುಎಫ್‌ಡಬ್ಲ್ಯೂ)/326/2026-27		ದಿನಾಂಕ: 23.04.2026
1.	ಬೆಂಗಳೂರು ಜಲಮಂಡಳಿ ಪರಿಮಿತಿಯ ಸಕಾನಿಅ(ಉತ್ತರ ಪೂರ್ವ-2)ಉಪ-ವಿಭಾಗದಡಿ ಬರುವ ಜಯಮಹಲ್ ಮತ್ತು ರಾಮಸ್ವಾಮಿಪಾಳ್ಯದ ಮಿಸ್ಸಿಂಗ್ ಬಿಟ್‌ಗಳಲ್ಲಿ ಯುಎಫ್‌ಡಬ್ಲ್ಯೂ ಅನ್ನು ಕಡಿತಗೊಳಿಸುವುದು ಮತ್ತು ನೀರು ಸರಬರಾಜು ವ್ಯವಸ್ಥೆಯ ಆಧುನೀಕರಣ ಮತ್ತು ಮರು ರೂಪಿಸುವ ಕಾಮಗಾರಿ.	ರೂ. 382.15 ಲಕ್ಷಗಳು / ರೂ. 4.51 ಲಕ್ಷಗಳು
2.	ಬೆಂಗಳೂರು ಜಲಮಂಡಳಿ ಪರಿಮಿತಿಯ ಸಕಾನಿಅ(ದಕ್ಷಿಣ ಪಶ್ಚಿಮ-3)ಉಪ-ವಿಭಾಗದಡಿ ಬರುವ ಗವಿಪುರಂ ಎಕ್ಸ್‌ಟೆನ್ಷನ್ ಡಿಎಂಎ ಮತ್ತು ಸುತ್ತಮುತ

ಕಿರುಸುದ್ದಿ

ಎನ್‌ಎಂಪಿಎ ಶಾಲೆ ಮುಚ್ಚದಂತೆ ಮೊಯ್ದೀನ್ ಬಾವಾ ಆಗ್ರಹ

ಮಂಗಳೂರು: ನವಮಂಗಳೂರು ಬಂದರು ಮಂಡಳಿ(ಎನ್‌ಎಂಪಿಎ) ಆಡಳಿತಕ್ಕೆ ಒಳಪಟ್ಟಿರುವ ಆಂಗ್ಲ ಮಾಧ್ಯಮ ಶಾಲೆಯನ್ನು ಯಾವುದೇ ಕಾರಣಕ್ಕೂ ಶಾಶ್ವತವಾಗಿ ಮುಚ್ಚುವುದಕ್ಕೆ ಮುಂದಾಗಬಾರದು. ಆಂತಹ ಪ್ರಕ್ರಿಯೆ ನಡೆದರೆ ತೀವ್ರ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಮಾಜಿ ಶಾಸಕ ಮೊಯ್ದೀನ್ ಬಾವಾ ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಶಾಲೆಯನ್ನು ಮತ್ತೊಂದು ಶಾಲೆಯೊಂದಿಗೆ ವಿಲೀನಗೊಳಿಸುವುದಕ್ಕೂ ತನ್ನ ವಿರೋಧವಿದೆ. ಕಳೆದ 40 ವರ್ಷಗಳಿಂದ ಸಾವಿರಾರು ಬಡ ವಿದ್ಯಾರ್ಥಿರ್ಗಳಿಗೆ ದಾರಿದೀಪವಾಗಿರುವ ಎನ್.ಎಂ.ಪಿ.ಎ. ಶಾಲೆ ಸ್ವತಂತ್ರವಾಗಿರಬೇಕು ಎಂದರು. ಈ ಶಾಲೆ ನವಮಂಗಳೂರು ಬಂದರಿಗಾಗಿ ತಮ್ಮ ಭೂಮಿಯನ್ನು ತ್ಯಾಗ ಮಾಡಿದ ಕುಟುಂಬಗಳ ಮಕ್ಕಳ ಭವಿಷ್ಯದ ಕೇಂದ್ರವಾಗಿದೆ. ಚಿತ್ರಾಪುರ, ಹೊಸಬೆಟ್ಟು, ಸುರತ್ಕಲ್, ಕಾಟಿಪಳ್ಳ ಮತ್ತು ಕೃಷ್ಣಾಪುರ ಭಾಗದ ನೂರಾರು ಬಡ ವಿದ್ಯಾರ್ಥಿಗಳು ಈ ಶಾಲೆಯನ್ನು ನೆಚ್ಚಿಕೊಂಡಿದ್ದಾರೆ. ಇಂತಹ ಪವಿತ್ರ ವಿದ್ಯಾಕೇಂದ್ರವನ್ನು ಮುಚ್ಚುವ ಯಾವುದೇ ಪ್ರಯತ್ನ ನಡೆದರೂ ನಾನು ಸುಮ್ಮನಿರಲಾರೆ ಎಂದರು. ಶಾಲಾರಂಭಕ್ಕೆ ದಾಖಲಾತಿ ಆರಂಭವಾಗಿದ್ದರೂ ಒಂದನೇ ತರಗತಿಗೆ ಮಕ್ಕಳ ದಾಖಲಾತಿ ಪ್ರಕ್ರಿಯೆಯನ್ನು ಇನ್ನೂ ಆರಂಭಿಸದೆ ಇರುವುದು ಖಂಡನೀಯ. ಕೂಡಲೇ ಮಂಡಳಿಯ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು ಆದೇಶ ಹೊರಡಿಸಿ, ಒಂದನೇ ತರಗತಿಗೆ ಮಕ್ಕಳ ಪ್ರವೇಶಾತಿ ಪ್ರಕ್ರಿಯೆಯನ್ನು ಆರಂಭಿಸಬೇಕು ಎಂದು ಅವರು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಕಮಲಾಕರ, ಜಾರ್ಜ್ ವಿನ್ಸೆಂಟ್, ಮೊಹಮ್ಮದ್ ಇಮ್ರಾನ್ ಉಪಸ್ಥಿತರಿದ್ದರು.

ವ್ಯಾಪಕಗೊಳ್ಳುತ್ತಿರುವ ಅಪ್ರಾಪ್ತರ ವಾಹನ ಸವಾರಿ: ಎರಡು ಸ್ಕೂಟರ್ ವಶಕ್ಕೆ

ಮಂಜೇಶ್ವರ: ಅಪ್ರಾಪ್ತರು ವಾಹನ ಚಲಾಯಿಸುತ್ತಿರುವುದು ವ್ಯಾಪಕಗೊಂಡಿದ್ದು, ಈ ಹಿನ್ನೆಲೆಯಲ್ಲಿ ಮಂಜೇಶ್ವರ ಭಾಗದಲ್ಲಿ ವಾಹನ ತಪಾಸಣೆಯನ್ನು ಬಿಗುಗೊಳಿಸಲಾಗಿದೆ. ಬುಧವಾರ ನಡೆಸಿದ ತಪಾಸಣೆ ವೇಳೆ ಎರಡು ಸ್ಕೂಟರ್‌ಗಳನ್ನು ವಶಪಡಿಸಿ ಸ್ಕೂಟರ್ ಮಾಲಕರಾದ ಅಪ್ರಾಪ್ತರ ತಂದೆಯರ ವಿರುದ್ಧ ಮಂಜೇಶ್ವರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಉಪ್ಪಳ ಪೇಟೆಯಲ್ಲಿ ಎಸ್‌ಐ ವೈಷ್ಣವ್ ರಾಮಚಂದ್ರನ್ ಹಾಗೂ ಸರ್ಕಲ್ ಇನ್‌ಸ್ಪೆಕ್ಟರ್ ಜಿಜೇಶ್ ಪಿ.ಕೆ. ನೇತೃತ್ವದಲ್ಲಿ ಗಸ್ತು ನಡೆಸುತ್ತಿರುವ ವೇಳೆ ಅಪ್ರಾಪ್ತರು ಚಲಾಯಿಸುತ್ತಿದ್ದ ಎರಡು ಸ್ಕೂಟರ್‌ಗಳನ್ನು ವಶಪಡಿಸಿ ಬಾಲಕರ ತಂದೆಯಂದಿರ ವಿರುದ್ಧ ಕೇಸು ದಾಖಲಿಸಿಕೊಳ್ಳಲಾಗಿದೆ.

ಪಾವಂಜೆ: ಬಸ್ ಡಿಕ್ಕಿ ಗಾಯಾಳು ಸಾವು

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಹಳೆಯಂಗಡಿ ಸಮೀಪದ ಪಾವಂಜೆ ಜಂಕ್ಷನ್ ಬಳಿ ಬಸ್ ಡಿಕ್ಕಿಯಾಗಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಪಕ್ಷಿಕೆರೆ ಹೊಸ ಕಾಡು ನಿವಾಸಿ ಗಣೇಶ್ ಹೊಳ್ಳ (70) ಎಂಬವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಮೃತ ಗಣೇಶ್ ಹೊಳ್ಳ ತಮ್ಮ ಕಾರನ್ನು ಪಾವಂಜೆ ದೇವಸ್ಥಾನದ ಹತ್ತಿರ ನಿಲ್ಲಿಸಿ ರಸ್ತೆ ದಾಟುತ್ತಿದ್ದ ಸಂದರ್ಭ ಹಳೆಯಂಗಡಿ ಕಡೆಯಿಂದ ಬಂದ ಬಸ್ಸು ಡಿಕ್ಕಿ ಹೊಡೆದಿದೆ. ಅಪಘಾತದಿಂದ ಗಣೇಶ್ ಹೊಳ್ಳರು ರಸ್ತೆಗೆ ಬಿದ್ದು ತಲೆಗೆ ಗಂಭೀರ ಗಾಯವಾಗಿದ್ದು ಮುಕ್ಕ ಆಸ್ಪತ್ರೆಗೆ ದಾಖಲಾಗಿದ್ದರು. ಮೃತ ಗಣೇಶ್ ಹೊಳ್ಳ ಪಕ್ಷಿಕೆರೆ ಸಮೀಪದ ಸುರಗಿರಿ ಬ್ರಾಹ್ಮಣ ಸಮಾಜದ ಸಕ್ರಿಯ ಕಾರ್ಯಕರ್ತ ಮತ್ತು ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಪತ್ನಿಯನ್ನು ಅಗಲಿದ್ದಾರೆ. ಮಂಗಳೂರು ಉತ್ತರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರ್ಜಿಗಳ ಆಹ್ವಾನ

ಮುಳ್ಳೇರಿಯ: ಕಾಸರಗೋಡು ಜಿಲ್ಲೆಯ ಕಾರಡ್ಕದಲ್ಲಿರುವ ಸರಕಾರಿ ಮೆಟ್ರಿಕ್ ಪೂರ್ವ ಹಾಸ್ಟೆಲ್‌ನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಖಾಲಿ ಇರುವ 12 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಪ್ರಮಾಣಪತ್ರಗಳೊಂದಿಗೆ ಮೇ 20 ರೊಳಗೆ ಕಾರಡ್ಕ ಬ್ಲಾಕ್ ಪರಿಶಿಷ್ಟ ಜಾತಿ ಅಭಿವೃದ್ಧಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ 6282478590 ಆಥವಾ 9188920096 ಸಂಪರ್ಕಿಸಬಹುದು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಭಗತ್‌ಸಿಂಗ್ ಆರ್ಮಿ, ಭಗತ್‌ಸಿಂಗ್ ರೋಡ್, ಆಶೋಕ ನಗರ, ಉರ್ವ ಮಾರ್ಕೆಟ್ ಮೈದಾನದಲ್ಲಿ.
2. ಪುಷ್ಪ ಸುಂದರ ಕೋಟ್ಯಾನ್ ಮತ್ತು ಮಕ್ಕಳು, ಪೂಸ, ಸುರಗಿರಿ ದೇವಸ್ಥಾನದ ವಕಾರ', ಆತ್ತೂರು.
3. ಬೆಳ್ಳಿಬೆಟ್ಟುಗುತ್ತು ಕುಟುಂಬಿಕರು, ಗುರುಪುರ.
4. ದಿ। ಜಯರಾಮ ರಾವ್ ಮತ್ತು ದಿ। ಸೀತಮ್ಮನವರ ಸ್ಮರಣಾರ್ಥ ಮಕ್ಕಳು, 'ದುರ್ಗಾ ಭವನ', ಕಟೀಲು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಕೊಲ್ಲಾಡಿ ಜಯರಾಮ ಅಡ್ಯಂತಾಯ ಮತ್ತು ಸಹೋದರರು, ಶಾಲೆತ್ತೂರು, ಬಂಟ್ವಾಳ (ತಾ).
6. ಪದ್ಮನಾಭ ರೈ ಮತ್ತು ಫೇಮಿಲಿ, ಕುಜ್ಯಂದೊಟ್ಟು ಮನೆ, ವಾಮದಪದವು.
7. ಕಮಲ ನಾರಾಯಣ ರೈ ಮತ್ತು ಮಕ್ಕಳು, ಕಾಡಬೆಟ್ಟು, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ವಾಮಂಜೂರಿನಲ್ಲಿ
ಶ್ರೀ ಸೀತಾರಾಮ ಜೆ. ಶೆಟ್ಟಿ ಮತ್ತು ಸಹೋದರರು ಅಮೃತಸದನ

ಶ್ರೀ ಸಾಲಿಗ್ರಾಮ ಮೇಳ
ಸೊರಬ ಮುಟಗುಪ್ಪೆಯಲ್ಲಿ-**ಕಾಳಿದಾಸ-ಚಂದ್ರಾವಳಿ- ಮಾಯಾ ತಿಲೋತ್ತಮೆ**

ಶ್ರೀ ಪೆರ್ಡೂರು ಮೇಳ
ಹಿತ್ತಲಕೊಪ್ಪದಲ್ಲಿ-**ದಕ್ಷಯಜ್ಞ-ಕನಕಾಂಗಿ ಕಲ್ಯಾಣ**

ಶ್ರೀ ಹನುಮಗಿರಿ ಮೇಳ
ಕೊಪ್ಪಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ

ಶ್ರೀ ಪಾವಂಜೆ ಮೇಳ
ಎಳತ್ತೂರಿನಲ್ಲಿ- **ಶ್ರೀ ದೇವಿ ಮಹಾತ್ಮೆ**

ಆಟೋ ರಿಕ್ಷಾ ದರ ಪರಿಷ್ಕರಿಸುವಂತೆ ಒತ್ತಾಯಿಸಿ ಮೋಟಾರ್ ಮತ್ತು ಜನರಲ್ ಮಜ್ದೂರು ಸಂಘ (ಬಿಎಂಎಸ್) ಜಿಲ್ಲಾ ಸಮಿತಿಯ ವತಿಯಿಂದ ಗುರುವಾರ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಅವರಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಯು, ಸಂಘಟನಾ ಕಾರ್ಯದರ್ಶಿ ವಸಂತ ಕುಮಾರ್ ಮನಿಹಳ್ಳ, ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ಉಪಾಧ್ಯಕ್ಷರಾದ ರೋಹಿತಾಶ್ವ, ನಾರಾಯಣ ಪೂಜಾರಿ, ತಾಲೂಕು ಪದಾಧಿಕಾರಿಗಳಾದ ಹೇಮಂತ್, ಸಚಿನ್, ಸೀತಾರಾಮ್, ಪುತ್ತೂರು, ಪ್ರಕಾಶ್, ರವಿ, ಕರುಣಾಕರ ಗೌಡ, ಶ್ರೀಕಾಂತ್, ಪರಮೇಶ್ವರ್, ನವೀನ್, ಸತೀಶ್, ದಿನೇಶ್, ಸುರೇಶ್ ಹಾಗೂ ವಿವಿಧ ತಾಲೂಕು ರಿಕ್ಷಾ ಯೂನಿಯನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಏ.26ರಿಂದ ಗಂದಾಡಿ ಶ್ರೀ ಸೋಮನಾಥೇಶ್ವರ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶಾಭಿಷೇಕ

ಮಂಗಳೂರು: ಪೊಳಲಿ ಸೀಮೆ ಆಡ್ಡೂರು ಗ್ರಾಮದ ಗಂದಾಡಿ ಶ್ರೀ ಸೋಮನಾಥೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶಾಭಿಷೇಕ ಏ.26ರಿಂದ ಮೇ 3ರ ವರೆಗೆ ವಿವಿಧ ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಕ್ಷೇತ್ರದ ತಂತ್ರಿಗಳಾದ ವೇ.ಮೂ. ಪೊಳಲಿ ಸುಬ್ರಹ್ಮಣ್ಯ ತಂತ್ರಿ ಮತ್ತು ವೆಂಕಟೇಶ್ ತಂತ್ರಿ ಅವರ ನೇತೃತ್ವದಲ್ಲಿ ಪೊಳಲಿ ದೇವಳದ ಅರ್ಚಕ ಅನಂತ ಪದ್ಮನಾಭ ಭಟ್ ಅವರ ಸಹಕಾರದಲ್ಲಿ ಬ್ರಹ್ಮಕಲಶ ನಡೆಯಲಿದೆ. ಏ.26ರಂದು ಮಧ್ಯಾಹ್ನ 3 ಗಂಟೆಗೆ ಹೊರೆಕಾಣಿಕೆ ಮೆರವಣಿಗೆ ಪೊಳಲಿ ರಾಜರಾಜೇಶ್ವರಿ ದೇವಸ್ಥಾನ ಹಾಗೂ ನೂಯಿಯಿಂದ ಹೊರಟು, ಆಡ್ಡೂರಿನಲ್ಲಿ ಸಮಾವೇಶಗೊಂಡು ಕ್ಷೇತ್ರಕ್ಕೆ ಆಗಮಿಸಲಿದೆ ಎಂದು ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರವಿಶಂಕರ್ ರಾವ್ ನೂಯಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಸೂರಜ್ ಶೆಟ್ಟಿ ಆಡ್ಡೂರುಗುತ್ತು ಮಾತನಾಡಿ, ಏ.29ರಂದು ಬೆಳಿಗ್ಗೆ 6 ರಿಂದ ಪುಣ್ಯಾಹ, ಗಣಪತಿ ಹೋಮ, ಪ್ರಾಸಾದ ಶುದ್ಧಿ ಪ್ರತಿಷ್ಠೆ, ಬೆಳಿಗ್ಗೆ 10.27ರ ಮಿಥುನ ಲಗ್ನ ಮುಹೂರ್ತದಲ್ಲಿ ಶ್ರೀ ಸೋಮನಾಥೇಶ್ವರ ದೇವರ ಪ್ರತಿಷ್ಠೆ, ಜೀವ ಕಲಶಾಭಿಷೇಕ, ಪ್ರತಿಷ್ಠಾ ಪೂಜೆ, ಗಣಪತಿ ದೇವರ ಪ್ರತಿಷ್ಠೆ, ಪ್ರತಿಷ್ಠಾ ಪೂಜೆ, ಪ್ರತಿಷ್ಠಾ ಬಲಿ ನಡೆಯಲಿದೆ ಎಂದರು.

ಬ್ರಹ್ಮಕಲಶಾಭಿಷೇಕ

ಮೇ 2ರಂದು ಪುಣ್ಯಾಹ, ಗಣಪತಿ ಹೋಮ, ಕವಾಟೋದ್ಘಾಟನೆ, ತೈಲಾಭಿಷೇಕ, ಪರಿಕಲಶಾಭಿಷೇಕ, ಬೆಳಿಗ್ಗೆ 8.40ಕ್ಕೆ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಸೋಮನಾಥ ದೇವರಿಗೆ ಬ್ರಹ್ಮಕಲಶಾಭಿಷೇಕ, ಗಣಪತಿ ದೇವರಿಗೆ ಕಲಶಾಭಿಷೇಕ ನೆರವೇರಲಿದೆ. ರಾತ್ರಿ 7.30ಕ್ಕೆ ರಂಗಪೂಜೆ ನಡೆಯಲಿದೆ. ಮೇ 3ರಂದು ಬೆಳಿಗ್ಗೆ 7ರಿಂದ ಪುಣ್ಯಾಹ, ಗಣಪತಿ ಹೋಮ, ಶ್ರೀ ದೇವರಿಗೆ ಕಲಶಾಭಿಷೇಕ ಮಧ್ಯಾಹ್ನ 12ಕ್ಕೆ ಮಹಾಪೂಜೆ, ರಾತ್ರಿ 7ರಿಂದ ಜಾರಂದಾಯ ಮತ್ತು ಧೂಮವತಿ ದೈವಗಳ ನೇಮ ನಡೆಯಲಿದೆ ಎಂದರು.

ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ರಂಗನಾಥ ಭಟ್ ಗಂದಾಡಿ, ಗೌರವಾಧ್ಯಕ್ಷ ನೂಯಿ ಬಾಲಕೃಷ್ಣ ರಾವ್, ಪ್ರಮುಖರಾದ ಚಂದ್ರಹಾಸ್, ಸದಾಶಿವ ಉಪಸ್ಥಿತರಿದ್ದರು.

ಮಂಗಳೂರು ವಿವಿ ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನ ಉದ್ಘಾಟನೆ | ಕಿಶೋರ್ ಕುಮಾರ್ ಆಳ್ವ ಅಭಿಮತ

ಸುಸ್ಥಿರ ಅಭಿವೃದ್ಧಿಗೆ 'ವಿಕಸಿತ ಭಾರತ'

ಕೊಣಾಜೆ: ಜಾಗತಿಕ ಮಟ್ಟದ ಸ್ಪರ್ಧೆ, ಸವಾಲುಗಳ ನಡುವೆ ಭಾರತದ ಅಭಿವೃದ್ಧಿಯ ಪಯಣದಲ್ಲಿ ವಿಕಸಿತ ಭಾರತದ ಯೋಜನೆಯ ಕಲ್ಪನೆಯ ಅತ್ಯಂತ ಮಹತ್ವಪೂರ್ಣವಾದುದು. ಪರಿಸರ ಸಂರಕ್ಷಣೆಯ ಜೊತೆಗೆ ತಂತ್ರಜ್ಞಾನ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಯೊಂದಿಗೆ ಸುಸ್ಥಿರ ಅಭಿವೃದ್ಧಿಯೆಡೆಗೆ ಒತ್ತು ನೀಡಿ ಮುನ್ನಡೆಯುವುದು ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಇಂತಹ ಸಮ್ಮೇಳನಗಳು ಅಭಿವೃದ್ಧಿಯ ಚಿಂತನೆಗಳಿಗೆ ಪೂರಕವಾಗಿದೆ ಎಂದು ಕರ್ನಾಟಕ ಅದಾನಿ ಗ್ರೂಪ್‌ನ ಅಧ್ಯಕ್ಷ ಕಿಶೋರ್ ಕುಮಾರ್ ಆಳ್ವ ಹೇಳಿದ್ದಾರೆ.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಅಧ್ಯಯನ ವಿಭಾಗದ ವತಿಯಿಂದ 'ವಿಕಸಿತ ಭಾರತ –2047' ಇದಕ್ಕೆ ಸಂಬಂಧಿಸಿದಂತೆ ಎರಡು ದಿನಗಳ ಕಾಲ ನಡೆಯಲಿರುವ ಅಂತರ್ ರಾಷ್ಟ್ರೀಯ ಸಮ್ಮೇಳನ ಹಾಗೂ 'ಮ್ಯಾಗ್ನಂ' ರಾಷ್ಟ್ರೀಯ ಮಟ್ಟದ ಆಡಳಿತ ಮತ್ತು ಸಾಂಸ್ಕೃತಿಕ ಉತ್ಸವವನ್ನು ಮಂಗಳೂರು ವಿವಿಯ ಮಂಗಳ ಸಭಾಂಗಣದಲ್ಲಿ ಗುರುವಾರ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಮಂಗಳೂರು ವಿವಿಯ ವಿಶ್ರಾಂತ ಕುಲಸಚಿವರಾದ ರಾಜು ಮೊಗವೀರ ಅವರು, ಭಾರತವು ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಯ ಮೂಲಕ ದೇಶದ ಅಭಿವೃದ್ಧಿಯ ನೀತಿಗಳನ್ನು ಜಾರಿಗೆ ತಂದಿತ್ತು. ಆದರೆ ಈಗ ಭಾರತ ಬದಲಾಗಿದೆ. ಇದೀಗ ''ವಿಕಸಿತ ಭಾರತ –2047'' ಮಹತ್ವಕಾಂಕ್ಷೆಯ ಯೋಜನೆಯು ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವದ ಹೆಜ್ಜೆಯಿಟ್ಟಿದೆ. ಸಮಾಜಕ್ಕೆ ಅಭಿವೃದ್ಧಿಗೆ ಪೂರಕವಾದ ಶಿಕ್ಷಣ, ಕೌಶಲ ಅಭಿವೃದ್ಧಿ, ಆರೋಗ್ಯ, ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳಾ ಭಾಗವಹಿಸುವಿಕೆ ಮೊದಲಾದವುಗಳು ವಿಕಸಿತ ಭಾರತದ ಮಹತ್ವಾಕಾಂಕ್ಷೆಯ ಯೋಜನೆಗಳಾಗಿವೆ ಎಂದರು.

> ಭಾರತದ ಅಭಿವೃದ್ಧಿಯ ಪಯಣದಲ್ಲಿ ವಿಕಸಿತ ಭಾರತದ ಯೋಜನೆಯ ಕಲ್ಪನೆಯ ಅತ್ಯಂತ ಮಹತ್ವಪೂರ್ಣವಾದುದು.
>
> ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳಾ ಭಾಗವಹಿಸುವಿಕೆ ಮೊದಲಾದವುಗಳು ವಿಕಸಿತ ಭಾರತದ ಮಹತ್ವಾಕಾಂಕ್ಷೆಯ ಯೋಜನೆಗಳಾಗಿವೆ.

ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಮಸ್ಕರ್ ಸ್ನಾತಕೋತ್ತರ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಆನಂದ ಅವರು ವರ್ಚುವಲ್ ಮೀಡಿಯಾ ಮೂಲಕ ಮಾತನಾಡಿದರು. ಎಎಂಸಿಎ ಅಧ್ಯಕ್ಷಣರಾದ ಪ್ರೊ.ಉಮಪ್ಪ ಪೂಜಾರಿ ಅತಿಥಿಯಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಪ್ರೊ.ಪುಟ್ಟಣ್ಣ ಸಮ್ಮೇಳನದ ಸಹ ಸಂಘಟನಾ ಕಾರ್ಯದರ್ಶಿ ಡಾ. ರೋಶನಿ ಯಶವಂತ್, ಪ್ರಾಧ್ಯಾಪಕರಾದ ಪ್ರೊ. ಮುನಿರಾಜು, ಪ್ರೊ. ವೇದವ ಖಿ, ಪ್ರೊ. ಪರಮೇಶ್ವರ, ಪ್ರೊ. ಪ್ರೀತಿ ಕೀರ್ತಿ ಡಿಸೋಜ, ಉಪನ್ಯಾಸಕರಾದ ಡಾ. ದಿನಕರ, ವೈಶಾಲಿ, ಲಹರಿ ಹಾಗೂ ವಿದ್ಯಾರ್ಥಿ ನಾಯಕರು ಉಪಸ್ಥಿತರಿದ್ದರು.

ವಿಭಾಗದ ಅಧ್ಯಕ್ಷರಾದ ಪ್ರೊ. ಈಶ್ವರ ಅವರು ಸಮ್ಮೇಳನದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿ ನಾಯಕರಾದ ಸುದರ್ಶನ ಅವರು ಮ್ಯಾಗ್ನಂನ ವಿವಿಧ ಸ್ಪರ್ಧೆ ಹಾಗೂ ಕಾರ್ಯಕ್ರಮದ ಬಗ್ಗೆ ವಿವರಿಸಿದರು. ಡಾ. ರಮ್ಯ ಸ್ವಾಗತಿಸಿದರು. ವಿದ್ಯಾರ್ಥಿ ನಾಯಕಿ ಪಲ್ಲವಿ ಜೆ. ವಂದಿಸಿದರು. ಸುಶ್ಮಿತಾ ಮತ್ತು ಸ್ನೇಹ ಕಾರ್ಯಕ್ರಮ ನಿರೂಪಿಸಿದರು.

> **ಡಿಜಿಟಲ್ ಕ್ರಾಂತಿ**
>
> ತಂತ್ರಜ್ಞಾನವು ಬೆಳೆಯುತ್ತಿದ್ದು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಡಿಜಿಟಲ್ ಕ್ರಾಂತಿಯಾಗುತ್ತಿದೆ. ಆಧುನಿಕತೆಗೆ ಪೂರಕವಾಗಿ ನಾವು ಬೆಳೆಯಬೇಕಿದ್ದು, ವಿಕಸಿತ ಭಾರತದ ಕನಸು ನನಸಾಗಬೇಕಾದರೆ ಪ್ರತಿಯೊಬ್ಬರ ಕೊಡುಗೆಯೂ ಅಗತ್ಯ. ಈ ನಿಟ್ಟಿನಲ್ಲಿ ಯುವ ಸಮುದಾಯದ ಪಾತ್ರ ಮಹತ್ತರವಾದುದು.
>
> ■ ಕೆ.ರಾಜು ಮೊಗವೀರ, ವಿಶ್ರಾಂತ ಕುಲಸಚಿವರು, ಮಂಗಳೂರು ವಿವಿ

ಬೆಳ್ತಂಗಡಿ ತಾಲೂಕು ಜನಜಾಗೃತಿ ವೇದಿಕೆಯ ವಿಶೇಷ ಸಭೆ

ಮದ್ಯವರ್ಜನ ಶಿಬಿರ ಆಯೋಜನೆ ಸಿದ್ಧತೆ

ಬೆಳ್ತಂಗಡಿ: ತಾಲೂಕು ಜನಜಾಗೃತಿ ವೇದಿಕೆಯ ಸರ್ವ ಸದಸ್ಯರ ವಿಶೇಷ ಸಭೆಯು ಎಸ್.ಡಿ.ಎಂ. ಕಲಾಭವನದ ಪಿನಾಕಿ ಸಭಾಂಗಣದಲ್ಲಿ ಏ. 21ರಂದು ಜರುಗಿತು. ಸಭಾಧ್ಯಕ್ಷತೆಯನ್ನು ತಾ. ಸಮಿತಿ ಅಧ್ಯಕ್ಷ ಎಂ.ಎ ಕಾಸಿಂ ಮಲ್ಲಿಗೆಮನೆ ವಹಿಸಿದ್ದರು.

ವ್ಯಸನಮುಕ್ತ ಸಮಾಜ ನಿರ್ಮಾಣದ ಸವಾಲಿನ ಸಂಕಲ್ಪದೊಂದಿಗೆ ಮುನ್ನಡೆಯುತ್ತಿರುವ ವೇದಿಕೆಯ ಕಾರ್ಯಕ್ರಮಗಳಿಗೆ ಶಕ್ತಿ ತುಂಬುವ ಉದ್ದೇಶದೊಂದಿಗೆ ವರದಿ ಸಾಲಿನಲ್ಲಿ ತಾಲೂಕಿನ ಗರ್ಡಾಡಿಯಲ್ಲಿ ಮದ್ಯವರ್ಜನ ಶಿಬಿರ ಆಯೋಜಿಸುವ ಬಗ್ಗೆ ನಿರ್ಧರಿಸಲಾಯಿತು. ಇದೇ ವೇಳೆ ವಿದ್ಯಾರ್ಥಿ ಮತ್ತು ಯುವ ಸಮೂಹವನ್ನು ಗುರಿಯಾಗಿಸಿ ತಾಲೂಕಿನ ವಿವಿಧ ಶಾಲಾ ಕಾಲೇಜುಗಳಲ್ಲಿ ಒಟ್ಟು 40 ಕಡೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳನ್ನು ಸಂಯೋಜಿಸುವುದೆಂದು ತೀರ್ಮಾನಿಸಲಾಯಿತು. ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ, ವಿಶ್ವ ತಂಬಾಕು ವಿರೋಧಿ ದಿನಾಚರಣೆಯನ್ನೂ ನಡೆಸಲು ನಿರ್ಧರಿಸಲಾಯಿತು.

ವಲಯಕ್ಕೊಂದು ನವಜೀವನ ಸಮಿತಿ ರಚನೆಯ ಗುರಿ, ನವಜೀವಮೋತ್ಸವ ಕಾರ್ಯಕ್ರಮ

ಟ್ರಂಪ್ ಸೋಷಿಯಲ್ ಮೀಡಿಯಾ ಪೋಸ್ಟ್

ಭಾರತ, ಚೀನಾ ನರಕ ಎಂದ ಅಧ್ಯಕ್ಷ ಟ್ರಂಪ್!

•**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತ ಮತ್ತು ಚೀನಾವನ್ನು ನರಕಗಳು (ಹೆಲ್-ಹೋಲ್ಸ್) ಎಂದು ಬಣ್ಣಿಸಿರುವ ರಾಜಕೀಯ ವಿಶ್ಲೇಷಕ ಮೈಕಲ್ ಸ್ಯಾವೇಜ್ ಅವರ ಪಾಡ್‌ಕಾಸ್ಟ್ ಮತ್ತು ವೀಡಿಯೊವನ್ನು ಮರುಹಂಚಿಕೊಂಡಿದ್ದಾರೆ.

ತಮ್ಮ ಪಾಡ್‌ಕಾಸ್ಟ್‌ನಲ್ಲಿ ಸ್ಯಾವೇಜ್, ಅಮೆರಿಕದ ಜನ್ಮಸಿದ್ಧ ಪೌರತ್ವ ಕಾಯ್ದೆ ಮತ್ತು ಸುಪ್ರೀಂ ಕೋರ್ಟ್ ಅನ್ನು ಟೀಕಿಸಿದ್ದಾರೆ. ಭಾರತ ಮತ್ತು ಚೀನಾದ ವಲಸಿಗರು 'ಬರ್ತ್ ಟೂರಿಸಂ' ಮೂಲಕ ಮಗು ಜನಿಸಿದ ತಕ್ಷಣ ಪೌರತ್ವ ಪಡೆಯುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಆಲ್ಲದೆ, ಈ ವಲಸಿಗರನ್ನು 'ಲ್ಯಾಪ್‌ಟಾಪ್ ಹಿಡಿದ ಗ್ಯಾಂಗ್‌ಸ್ಟರ್‌ಗಳು' ಎಂದು ಕರೆದಿದ್ದಾರೆ. ಅವರು ಕ್ರಿಮಿನಲ್ ಚಟುವಟಿಕೆಗಳಿಗಿಂತ ದೇಶಕ್ಕೆ ಹೆಚ್ಚಿನ ಹಾನಿ ಮಾಡಿದ್ದಾರೆ ಎಂದು ಸ್ಯಾವೇಜ್ ಕಿಡಿಕಾರಿದ್ದಾರೆ.

ಉದ್ಯೋಗದ ಆರೋಪಗಳು: ಕ್ಯಾಲಿಫೋರ್ನಿಯಾದ ಹೈ-ಟೆಕ್ ಕಂಪನಿಗಳು ಬಿಳಿಯರಿಗಿಂತ ಭಾರತೀಯ ಮತ್ತು ಚೀನೀ ಕಾರ್ಮಿಕರಿಗೆ ಆದ್ಯತೆ ನೀಡುತ್ತವೆ ಎಂದು ಸ್ಯಾವೇಜ್ ಪ್ರತಿಪಾದಿಸಿದ್ದಾರೆ. ಆಧುನಿಕ ವಾಯುಯಾನ ಮತ್ತು ಇಂಟರ್‌ನೆಟ್ ಯುಗಕ್ಕೆ ಮುನ್ನ ಬರೆಯಲಾದ ಸಂವಿಧಾನದ 14ನೇ ತಿದ್ದುಪಡಿ, ಪ್ರಸ್ತುತ ಕಾಲಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ಅವರು ವಾದಿಸಿದ್ದಾರೆ.

ಬಗೆಹರಿಯದ ಸಮಸ್ಯೆ: ಜನ್ಮಸಿದ್ಧ ಪೌರತ್ವವನ್ನು ನಿರ್ಬಂಧಿಸಲು ಜನವರಿ 2025 ರಲ್ಲಿ ಟ್ರಂಪ್ ಸಹಿ ಮಾಡಿದ ಆದೇಶದ ಕುರಿತು ಅಮೆರಿಕ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಕೆನಡಾ ಮತ್ತು ಮೆಕ್ಸಿಕೊ ಸೇರಿದಂತೆ ಸುಮಾರು 36 ದೇಶಗಳಲ್ಲಿ ಇಂದಿಗೂ ಜನ್ಮಸಿದ್ಧ ಪೌರತ್ವ ಚಾಲ್ತಿಯಲ್ಲಿದೆ.

ಈ ವಿಷಯಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ: ಎಂಇಎ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಂಚಿಕೊಂಡಿರುವ ಅವಹೇಳನಕಾರಿ ಹೇಳಿಕೆಯ ಕುರಿತು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಂಕ್ಷಿಪ್ತ ಪ್ರತಿಕ್ರಿಯೆ ನೀಡಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಂಇಎ ವಕ್ತಾರ ರಣಧೀರ್ ಜೈಸ್ವಾಲ್, ಮೈಕಲ್ ಸ್ಯಾವೇಜ್ ಅವರ ಪಾಡ್‌ಕಾಸ್ಟ್ ಮತ್ತು ಆದಕ್ಕೆ ಸಂಬಂಧಿಸಿದ ಸೋಷಿಯಲ್ ಮೀಡಿಯಾ ಚಟುವಟಿಕೆಗಳ ವರದಿಯನ್ನು ನಾವು ನೋಡಿದ್ದೇವೆ ಎಂದಷ್ಟೇ ತಿಳಿಸಿದರು. ಈ ಕುರಿತ ಪ್ರತಿಕ್ರಿಯಿಸಿದ ಜೈಸ್ವಾಲ್, ಈ ಕುರಿತು ವರದಿಗಳನ್ನು ಗಮನಿಸಿದ್ದೇವೆ. ಈ ವಿಷಯಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ ಎಂದಿದ್ದಾರೆ. ಈ ಬಗ್ಗೆ ಯಾವುದೇ ರಾಜತಾಂತ್ರಿಕ ವಿಮರ್ಶೆ ಅಥವಾ ಖಂಡನೆ ವ್ಯಕ್ತಪಡಿಸಲು ಅವರು ನಿರಾಕರಿಸಿದರು.

ಜನಾಂಗೀಯ ನಿಂದನೆ ಎಂದ ಇರಾನ್: ಅಮೆರಿಕ ಅಧ್ಯಕ್ಷರು ಮರುಹಂಚಿಕೊಂಡಿರುವ ನರಕ ಎಂಬ ಅವಹೇಳನಕಾರಿ ಹೇಳಿಕೆ, ಯ ವಿರುದ್ಧ ಭಾರತ ಮತ್ತು ಚೀನಾದೊಂದಿಗೆ ಇರಾನ್ ಕೂಡ ಧ್ವನಿಗೂಡಿಸಿದೆ. ಈ ವಾಕ್ಚಾತುರ್ಯ, ಅಮೆರಿಕದ ರಾಜತಾಂತ್ರಿಕ ಪತನ ಮತ್ತು ಜಾಗತಿಕ ವಾಸ್ತವಗಳ ಬಗ್ಗೆ ಆವರಿಗಿರುವ ಅಜ್ಞಾನವನ್ನು ಪ್ರತಿಬಿಂಬಿಸುತ್ತದೆ ಎಂದು ಇರಾನ್ ಅಧಿಕಾರಿಗಳು ಕಿಡಿಕಾರಿದ್ದಾರೆ. ವಲಸಿಗರು ಬರ್ತ್ ಟೂರಿಸಂ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಾಬಲ್ಯದ ಮೂಲಕ ಅಮೆರಿಕದ ಕಾನೂನನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬ ಮೈಕಲ್ ಸ್ಯಾವೇಜ್ ಅವರ ಆರೋಪವನ್ನು ಟ್ರಂಪ್ ಬೆಂಬಲಿಸಿದ್ದಕ್ಕೆ ಇರಾನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಈ ಹೇಳಿಕೆಯನ್ನು ಇರಾನ್ ಜನಾಂಗೀಯ ನಿಂದನೆ ಎಂದು ನೇರವಾಗಿ ಟೀಕಿಸಿದೆ.

ನೌಕಾಪಡೆ ಕಾರ್ಯದರ್ಶಿ ಜಾನ್ ಫೆಲನ್ ನಿರ್ಗಮನ

•**ವಾಷಿಂಗ್ಟನ್:** ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಎರಡನೇ ಅವಧಿಯಲ್ಲಿ ಮೊದಲ ಬಾರಿಗೆ ಮಿಲಿಟರಿ ಸೇವೆಯ ಮುಖ್ಯಸ್ಥರೊಬ್ಬರು ಹುದ್ದೆ ತೊರೆದಿದ್ದು, ನೌಕಾಪಡೆಯ ಕಾರ್ಯದರ್ಶಿ ಜಾನ್ ಫೆಲನ್ ತಕ್ಷಣದಿಂದ ಜಾರಿಗೆ ಬರುವಂತೆ ನಿರ್ಗಮಿಸುತ್ತಿದ್ದಾರೆ ಎಂದು ಪೆಂಟಗನ್ ಬುಧವಾರ ಘೋಷಿಸಿದೆ. ನೌಕಾಪಡೆಯ ಅಂಡರ್ ಸೆಕ್ರೆಟರಿ ಹಂಗ್ ಕಾವೊ ಹಂಗಾಮಿ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಕಾವೊ 25 ವರ್ಷಗಳ ಕಾಲ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದು, ಈ ಹಿಂದೆ ವರ್ಜೀನಿಯಾದಲ್ಲಿ ಸೆನೆಟ್ ಮತ್ತು ಹೌಸ್ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. 2024 ರಲ್ಲಿ ನೇಮಕಗೊಂಡಿದ್ದ ಫೆಲನ್, ಖಾಸಗಿ ಹೂಡಿಕೆ ಸಂಸ್ಥೆಯ ಸ್ಥಾಪಕರಾಗಿದ್ದು ಟ್ರಂಪ್ ಆಭಿಯಾನಕ್ಕೆ ದೊಡ್ಡ ಮಟ್ಟದ ದೇಣಿಗೆ ನೀಡಿದ್ದರು. ಟ್ರಂಪ್, ಫೆಬ್ರವರಿ 2025 ರಿಂದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಭೂಸೇನೆಯ ಮುಖ್ಯಸ್ಥರು ಮತ್ತು ಜಂಟಿ ಮುಖ್ಯಸ್ಥರ ಸಮಿತಿಯ ಅಧ್ಯಕ್ಷರು ಸೇರಿದಂತೆ ಹಲವು ಉನ್ನತ ಸೇನಾ ನಾಯಕರನ್ನು ವಜಾಗೊಳಿಸಿದ್ದಾರೆ. ನಿರ್ಗಮಿಸುವ ಕೇವಲ ಒಂದು ದಿನದ ಮೊದಲು, ಫೆಲನ್, ವಾಷಿಂಗ್ಟನ್‌ನಲ್ಲಿ ನಡೆದ ನೌಕಾಪಡೆಯ ವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ್ದರು. ಆವರ ನಿರ್ಗಮನಕ್ಕೆ ಯಾವುದೇ ಅಧಿಕೃತ ಕಾರಣ ನೀಡಲಾಗಿಲ್ಲ.

ಬಿಜೆಪಿ ಅಭ್ಯರ್ಥಿ ಅಗ್ನಿಮಿತ್ರ ಪೌಲ್ ಮೇಲೆ ದಾಳಿ: ಸ್ವಲ್ಪದರಲ್ಲೇ ಪಾರು

ಪಶ್ಚಿಮ ಬಂಗಾಳದ ಅಸನ್‌ಸೋಲ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಅಗ್ನಿಮಿತ್ರ ಪೌಲ್ ಅವರ ಕಾರಿನ ಮೇಲೆ ಭಾರೀ ಗಾತ್ರದ ಬಂಡೆ ಯೊಂದನ್ನು ಉರುಳಿಸಿ ದಾಳಿ ನಡೆಸಲಾಯಿತು. ರಹಮತ್ ನಗರದ ಆಲ್ಪಸಂಖ್ಯಾತರ ಪ್ರದೇಶದಲ್ಲಿ ಸಾಗುತ್ತಿದ್ದಾಗ ಈ ದಾಳಿ ನಡೆಸಲಾಯಿತು.ಕಾರಿನ ಹಿಂಭಾಗ ಪೂರ್ಣ ಧ್ವಂಸವಾಗಿದ್ದು, ಕನ್ನಡಿಗಳು ಪುಡಿಯಾಗಿವೆ. ದೇವರ ದಯೆಯಿಂದ ನಾನು ಪಾರಾಗಿದ್ದೇನೆ. ಆದರೂ ನನ್ನ ಕಾರ್ಯದರ್ಶಿಗೆ ಏಟಾಗಿದೆ. ಇಂತಹ ಗೂಂಡಾಗಿರಿಯನ್ನು ಸಹಿಸಲು ಸಾಧ್ಯವಿಲ್ಲ.ಇದರ ಹಿಂದೆ ಯಾರಿದ್ದಾರೆ ಎಂಬುದು ಯಾರಿಗಾದರೂ ಅರ್ಥವಾದೀತು. ಆಲ್ಪಸಂಖ್ಯಾತರ ತುಷ್ಟೀಕರಣದಿಂದ ಯಾವ ರೀತಿ ಹಿಂಸೆಗೆ ಕುಮ್ಮಕ್ಕು ನೀಡಲಾಗುತ್ತಿದೆ ಎಂಬುದು ಕೂಡ ಇದರಿಂದ ಬಯಲಿಗೆ ಬಂದಿದೆ ಎಂದು ಹೇಳುವ ಮೂಲಕ ಅವರು ಟಿಎಂಸಿಯ ಗೂಂಡಾಗಿರಿಯನ್ನು ತರಾಟೆಗೆತ್ತಿಕೊಂಡರು.

27 ಅಭ್ಯರ್ಥಿಗಳನ್ನು ಖರೀದಿಸಿದ ಟಿಎಂಸಿ: ಹುಮಾಯುನ್ ಕಬೀರ್

ಈ ನಡುವೆ ತನ್ನ ಪಕ್ಷದ 27ಅಭ್ಯರ್ಥಿಗಳನ್ನು ಆಳುವ ಟಿಎಂಸಿ ಖರೀದಿಸಿದೆ ಎಂದು ಆಮ್ ಜನತಾ ಉನ್ನಯನ್ ಪಕ್ಷ (ಎಜೆಯುಪಿ)ದ ನಾಯಕ ಹುಮಾಯುನ್ ಕಬೀರ್ ಆರೋಪಿಸಿದ್ದಾರೆ. ಕಬೀರ್ ಗುರುವಾರ ಬೆಳಗ್ಗೆಯೇ ಮತ ಚಲಾಯಿಸಿದ್ದು, ಬಳಿಕ ಮುರ್ಷಿದಾಬಾದ್ ಜಿಲ್ಲೆಯ ನವೋದಾ ವಿಧಾನಸಭಾ ಕ್ಷೇತ್ರದ ಶಿಬನಗರ ಗ್ರಾಮದಲ್ಲಿನ ಮತಗಟ್ಟೆಯಲ್ಲಿ ಟಿಎಂಸಿ ಬೆಂಬಲಿಗರು ಅವರ ವಾಹನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನಾಕಾರರು ಆವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆ ನಡೆಸಿದ ಹುಮಾಯೂನ್

ತನ್ನ ಬೆಂಬಲಿಗರ ಮೇಲೆ ನೋಮ್ನಾ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆಂಬ ಆರೋಪಗೈದ ಎಜೆಯುಪಿ ನಾಯಕ ಹುಮಾಯೂನ್, ಅಧಿಕಾರಿಗಳನ್ನು ಅಮಾನತು ಮಾಡಬೇಕೆಂದು ಪ್ರತಿಭಟನೆ ನಡೆಸಿದ್ದಾರೆ. ಸಂಘರ್ಷದಲ್ಲಿ ಭಾಗಿಯಾಗಿದ್ದ ಟಿಎಂಸಿ ಕಾರ್ಯಕರ್ತರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಹುಮಾಯೂನ್ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ. ಮತದಾನದ ವೇಳೆ ಬಂಗಾಳದಲ್ಲಿ ಕಟ್ಟಿದ ಬಾಬ್ರಿ ಮಸೀದಿ ಸ್ಥಳಕ್ಕೆ ಕಬೀರ್ ಭೇಟಿ ನೀಡಿದ್ದಾರೆ.

ಇವಿಎಂನಲ್ಲಿ ತಾಂತ್ರಿಕ ದೋಷ

ಬೆಲ್ದಾಂಗ ವಿಧಾನಸಭಾ ಕ್ಷೇತ್ರದ ಬೂತ್ ಸಂಖ್ಯೆ 156ರಲ್ಲಿ ಇಲೆಕ್ಟ್ರಾನಿಕ್ ವೋಟಿಂಗ್ ಮಶೀನ್ (ಇವಿಎಂ)ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ಮತದಾನವನ್ನು ಅರ್ಧಕ್ಕೆ ನಿಲ್ಲಿಸಲಾಗಿತ್ತು. ಸಂಶೇರ್ ಗಂಜ್ ವಿಧಾನಸಭಾ ಕ್ಷೇತ್ರದ ಬೂತ್ ಸಂಖ್ಯೆ 212, ಕಂಡಿಯಲ್ಲಿ ಬೂತ್ ಸಂಖ್ಯೆ 130, ಕೂಚ್ ಬಿಹಾರ್‌ನ ಬೂತ್ ಸಂಖ್ಯೆ 229, ಮಾಲ್ಡಾ ಜಿಲ್ಲೆಯ ಹಬೀಬ್ ಪುರ್ ಕ್ಷೇತ್ರದ 231ನೇ ಬೂತ್, ಸಿಲಿಗುರಿ ಬೂತ್ ಸಂಖ್ಯೆ 26/31 ಮತ್ತು ನಂದಿ ಗ್ರಾಮದ ಇವಿಎಂ ತಾಂತ್ರಿಕ ದೋಷಗಳಿಂದ ಮತದಾನ ತಡವಾಯಿತು.

ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಪ್ರಜಾಪ್ರಭುತ್ವದ ಹಬ್ಬವಾದ ವಿಧಾನಸಭಾ ಚುನಾವಣೆಯು ಹಲವು ಅಹಿತಕರ ಘಟನೆಗಳಿಗೆ ಸಾಕ್ಷಿಯಾಗಿದೆ. ಟಿಎಂಸಿ ಗೂಂಡಾಗಳು ಚುನಾವಣಾ ಅಭ್ಯರ್ಥಿಗಳ ಮೇಲೆಯೇ ಹಲ್ಲೆ ನಡೆಸಿ ಉದ್ಧಟತನ ಮೆರೆದಿದ್ದಾರೆ.

ಪ.ಬಂಗಾಳದಲ್ಲಿ ಟಿಎಂಸಿ ಗೂಂಡಾಗಳ ಅಟ್ಟಹಾಸ

ಪ.ಬಂ.ಬಿಜೆಪಿ ಅಭ್ಯರ್ಥಿಗೆ ಥಳಿತ: ವಿಡಿಯೋ ವೈರಲ್

•**ಕುಮಾರ್‌ಗಂಜ್:** ಪಶ್ಚಿಮ ಬಂಗಾಳಲ್ಲಿ ಆಳುವ ಟಿಎಂಸಿಯ ಗೂಂಡಾಗಿರಿಗೆ ಪ್ರತ್ಯಕ್ಷ ಸಾಕ್ಷಿ ಎಂಬಂತೆ, ಚುನಾವಣೆಯ ಸಂದರ್ಭದಲ್ಲೇ ಕುಮಾರ್ ಗಂಜ್‌ನಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಸರ್ಕಾರ್ ಮೇಲೆ ತೀವ್ರ ಹಲ್ಲೆ ನಡೆಸಲಾಗಿದೆ. ಪೊಲೀಸರ ಸಮ್ಮುಖದಲ್ಲೇ ಟಿಎಂಸಿ ಕಾರ್ಯಕರ್ತರು ಈ ಹಲ್ಲೆ ನಡೆಸಿರುವ ವಿಡಿಯೋ ವೈರಲ್ ಆಗಿದೆ. ಕುಮಾರ್‌ಗಂಜ್‌ನಲ್ಲಿ ಮತದಾನದ ಮೇಲೆ ಹಿಂಸಾಚಾರದ ಕರಿನೆರಳು ಆವರಿಸಿತು. ಪ್ರದೇಶದಲ್ಲಿ ಗಲಭೆ ನಡೆದಿರುವ ಮಾಹಿತಿಯ ಹಿನ್ನೆಲೆಯಲ್ಲಿ ಸರ್ಕಾರ್ ಮತಗಟ್ಟೆಯತ್ತ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ.ಬಿಜೆಪಿ ಅಭ್ಯರ್ಥಿಯನ್ನು ತಡೆದು ಥಳಿಸಲಾಗಿದ್ದು, ತದನಂತರ ಆವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ. ಪೊಲೀಸರ ಸಮ್ಮುಖದಲ್ಲಿ ದಾಳಿ ನಡೆದಿರುವುದು ಆಲ್ಲಿನ ಗೂಂಡಾರಾಜ್‌ಗೆ ಸಾಕ್ಷಿಯಾಯಿತು.ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಭಾರತೀಯ ಚುನಾವಣಾ ಆಯೋಗ, ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ, ಹಲ್ಲೆಗೆ ಸಂಬಂಧಿಸಿದ ವೀಡಿಯೊ ದೃಶ್ಯಗಳಲ್ಲಿ ಕಂಡುಬರುವ ವ್ಯಕ್ತಿಗಳನ್ನು ಬಂಧಿಸಲು ಆದೇಶಿಸಿದೆ. ಬಿಜೆಪಿಯ ಮತಗಟ್ಟೆ ಏಜೆಂಟ್ ಆನ್ನು ಟಿಎಂಸಿ ಕಾರ್ಯಕರ್ತರು ಮತಗಟ್ಟೆಗೆ ಪ್ರವೇಶಿಸದಂತೆ ತಡೆದಿದ್ದಾರೆ. ಇದು ಕ್ಷೇತ್ರದಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸಿತ್ತು. ಆದರೆ ಆಡಳಿತಾರೂಢ ಟಿಎಂಸಿ ಎಂದಿನಂತೆ ಈ ಆರೋಪಗಳನ್ನು ಆಲ್ಲಗಳೆದಿದೆ.

ಮೇ 4 ಟಿಎಂಸಿಯ ಎಕ್ಸ್‌ಪೈರಿ ಡೇಟ್

•**ಮಥುರಾಪುರ್:** ಪಶ್ಚಿಮ ಬಂಗಾಳದಲ್ಲಿ 15ವರ್ಷಗಳ ಕಾಲ ನಡೆದ ಟಿಎಂಸಿಯ''ಮಹಾಜಂಗಲ್‌ರಾಜ್ ಮತ್ತು ಸಿಂಡಿಕೇಟ್‌ರಾಜ್''ವ್ಯವಸ್ಥೆಗೆ ಮೇ 4 ಎಕ್ಸ್ ಪೈರಿ ಡೇಟ್ ಆಗಿದ್ದು, ಆನಂತರ ಜನತೆ ಬಿಜೆಪಿ ಆಡಳಿತದಲ್ಲಿ ಭಯಮುಕ್ತರಾಗಿ ನೆಮ್ಮದಿಯ ಬಾಳುವೆ ನಡೆಸಬಹುದು ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಬಂಗಾಲದ ಜನತೆಗೆ ಭರವಸೆ ನೀಡಿದರು.ಚುನಾವಣೆಯ ಎರಡನೇ ಹಂತದ ಮತದಾನಕ್ಕೂ ಮುನ್ನ ಕೃಷ್ಣನಗರದಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ರಾಜ್ಯದ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು 10 ಅಂಶಗಳ ಗ್ಯಾರಂಟಿ ನೀಡಿದ್ದಾರೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೇ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗುವವರಿಗೆ ಶಿಕ್ಷೆಯಾಗುತ್ತದೆ ಎಂದು ಮೋದಿ ಪ್ರತಿಜ್ಞೆ ಮಾಡಿದರು. ಪ್ರತಿ ಬ್ಲಾಕ್‌ನಲ್ಲಿ ಮಹಿಳಾ ಠಾಣೆ ಇರುತ್ತದೆ. ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ಪೊಲೀಸ್ ಪಡೆಗೆ ನೇಮಿಸಿಕೊಳ್ಳಲಾಗುತ್ತದೆ ಎಂದರು. ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ, 36,000 ರೂ.ಗಳನ್ನು ಮಹಿಳೆಯರ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ. ಪದವೀಧರ ವಿದ್ಯಾರ್ಥಿನಿಯರಿಗೆ 50,000 ರೂ. ಹಾಗೂ ಗರ್ಭಿಣಿ ಮಹಿಳೆಯರಿಗೆ 21,000 ರೂ.ಗಳ ಆರ್ಥಿಕ ನೆರವು ಸಿಗುತ್ತದೆ ಎಂದು ಆವರು ಹೇಳಿದರು.ಈ ರೀತಿಯ ಹತ್ತು ಭರವಸೆಗಳನ್ನು ಜನತೆಗೆ ನೀಡಿದ್ದಾರೆ.

ಬಂಗಾಳ ಚುನಾವಣಾ ಪ್ರಚಾರದಲ್ಲಿ ಮೋದಿ ಭವಿಷ್ಯ

ಬಿಜೆಪಿ ಗೆದ್ದರೆ ನುಸುಳುಕೋರರಿಗೆ ಅವಕಾಶ ಇಲ್ಲ

•**ಬಾಲಾಘರ್:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದೇ ಆದರೆ ಒಬ್ಬನೇ ಒಬ್ಬ ನುಸುಳುಕೋರನಿಗೆ ರಾಜ್ಯಕ್ಕೆ ಪ್ರವೇಶಿಸಲು ಅವಕಾಶ ನೀಡುವುದಿಲ್ಲಳಿ ಮಾತ್ರವಲ್ಲ, ಈಗಾಗಲೇ ಇಲ್ಲಿರುವ ಆಕ್ರಮ ನುಸುಳುಕೋರರನ್ನು ಹೊರಹಾಕಲಾಗುವುದು. ಪಶ್ಚಿಮ ಬಂಗಾಳವನ್ನು ಭೀತಿಮುಕ್ತ, ಮಹಿಳೆಯರಿಗೆ ಸುರಕ್ಷಿತ ರಾಜ್ಯವನ್ನಾಗಿಸಲಾಗುವುದು ಎಂಬುದಾಗಿ ಕೇಂದ್ರ ಗೃಹಸಚಿವ ಅಮಿತ್ ಶಾ ಗುರುವಾರ ಘೋಷಿಸಿದ್ದಾರೆ. ರಾಜ್ಯದಲ್ಲಿ ನನ್ನ 30ನೇ ಸಾರ್ವಜನಿಕ ರ‍್ಯಾಲಿ ಇದಾಗಿದೆ. ಪ.ಬಂ.ದಲ್ಲಿ ಆಕ್ರಮ ನುಸುಳುವಿಕೆಯಿಂದಾಗಿ ರಾಜ್ಯದ ಆರ್ಥಿಕತೆ ಮತ್ತು ದೇಶದ ಭದ್ರತೆಗೆ ಗಂಭೀರ ಹಾನಿಯುಂಟಾಗಿದೆ.ಈ ನುಸುಳುಕೋರರು ರಾಜ್ಯದ ಯುವಜನತೆಯ ಉದ್ಯೋಗಗಳನ್ನು ಕಸಿಯುತ್ತಿದ್ದಾರೆ.ಬಡವರ ಪಡಿತರವನ್ನು ಕಸಿದುಕೊಳ್ಳುತ್ತಿದ್ದಾರೆ.ದೇಶದ ಭದ್ರತೆಗೆ ಆಪಾಯ ತರುವ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದರು.

ಸೇಲಂನ ಬೂತ್‌ನೊಳಗೆ ಏಜೆಂಟರ ಮಧ್ಯೆ ಫೈಟ್

•**ಸೇಲಂ:** ತಮಿಳುನಾಡಿನ ಸೇಲಂನ ಆರಿಸಿಪಾಳಯಂನಲ್ಲಿ ಬೂತ್ ಸಂಖ್ಯೆ 139ರಲ್ಲಿ ಏಕಾಏಕಿ ಸಂಘರ್ಷ ಏರ್ಪಟ್ಟಿದೆ. ಇಲ್ಲಿ ಎಐಎಡಿಎಂಕೆ ಮತ್ತು ಡಿಎಂಕೆ ಪಕ್ಷಗಳ ಬೂತ್ ಏಜೆಂಟರ ಮಧ್ಯೆ ಸಂಘರ್ಷ ಏರ್ಪಟ್ಟಿದೆ. ಪ್ರತ್ಯಕ್ಷ ಸಾಕ್ಷಿಗಳ ಪ್ರಕಾರ, ಎಐಎಡಿಎಂಕೆ ಪಕ್ಷದ ಎಂ.ಕಂದಸಾಮಿ ಮತ್ತು ಡಿಎಂಕೆ ಪಕ್ಷದ ಸಿ.ಸೆಂಥಿಲ್ ಮಧ್ಯೆ ಪೋಲಿಂಗ್ ಬೂತ್‌ನೊಳಗೆ ವಾಗ್ವಾದ ನಡೆದಿದೆ.

ವಾಗ್ವಾದದಿಂದ ಸಂಘರ್ಷ: ಸೆಂಥಿಲ್-ಕಂದಸಾಮಿ ನಡುವಿನ ವಾಗ್ವಾದವನ್ನು ಸ್ವಲ್ಪ ಕೇಳಿಸಿಕೊಂಡ ವಾರ್ಡ್ 27ರ ಮತದಾರೆ ಎಸ್.ಲೋಕನಾಯಕಿ, ತಮ್ಮ ಬಗ್ಗೆ ಮಾತನಾಡುತ್ತಿದ್ದಾರೆಂದು ತಪ್ಪುಕಲ್ಪನೆಯಿಂದ ಕಂದಸಾಮಿ ಆವರನ್ನು ಬೈಯ್ದಿದ್ದು, ಕಂದಸಾಮಿ ಜತೆಗಿನ ವಾಗ್ವಾದದ ವೇಳೆ ಆವರಿಗೆ ಕಪಾಳಮೋಕ್ಷ ಮಾಡಿದ್ದಾರೆ.

ಕಿರುಸುದ್ದಿ

ಬಿಕಾಜಿ ಫುಡ್ಸ್ ಸಂಸ್ಥಾಪಕ ರತನ್ ಅಗರ್ವಾಲ್ ನಿಧನ

•**ಹೊಸದಿಲ್ಲಿ:** ಬಿಕಾಜಿ ಫುಡ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸಂಸ್ಥಾಪಕ ಹಾಗು ಅಧ್ಯಕ್ಷ ಶಿವ ರತನ್ ಅಗರ್ವಾಲ್ ಅವರು ವಯೋಸಹಜ ಕಾಯಿಲೆಯಿಂದ ನಿಧನರಾದರು. ಭಾರತೀಯ ಸಾಂಪ್ರದಾ ಯಿಕ ತಿಂಡಿಗಳನ್ನು ಜಾಗತಿಕ ವ್ಯಾಪಾರವಾಗಿ ಪರಿವರ್ತಿಸು ವಲ್ಲಿ ಪ್ರವರ್ತಕರಾಗಿ ವ್ಯಾಪಕವಾಗಿ ಪರಿಗಣಿಸಲ್ಪಟ್ಟ ಆಗರ್‌ವಾಲ್, ಬಿಕಾಜಿಯನ್ನು ಮನೆ ಮಾತಾಗಿ ಪರಿವರ್

ತಲಪಾಡಿ ಶಾರದಾ ವಿದ್ಯಾನಿಕೇತನದಲ್ಲಿ ಸಂಸ್ಕೃತ ಭಾರತಿಯಿಂದ ಅಪೂರ್ವ ಸಂಸ್ಕೃತ ಪ್ರಬೋಧನವರ್ಗ

ಕಣಕಣದಲ್ಲಿ ಅನುರಣಿಸಿದೆ ಸಂಸ್ಕೃತ ನಾದ

ದಿನೇಶ್ ನಾಯಕ್ ಪಿಲಾರ್

ಉಳ್ಳಾಲ: ಬೆಳಿಗ್ಗೆ ಐದು ಗಂಟೆಗೆ ಎದ್ದರೆ ರಾತ್ರಿ ಹತ್ತು ಗಂಟೆಯ ದೀಪ ಆರಿಸುವವರೆಗೂ ಎಲ್ಲಾ ಚಟುವಟಿಕೆಗಳ ಸಂವಹನಗಳು ಸಂಸ್ಕೃತದಲ್ಲೇ ನಡೆಯುತ್ತದೆ. ಶಿಬಿರದಲ್ಲಿ ಎಲ್ಲಿ ನೋಡಿದರೂ ಸಂಸ್ಕೃತ, ಸಂಸ್ಕೃತ... ತಪ್ಪಿದಲ್ಲಿ ಆಲ್ಲೇ ತಿದ್ದುವ ಕಾರ್ಯವನ್ನು ಪ್ರಬಂಧಕರು ನಡೆಸುತ್ತಾರೆ. ಆ ಮೂಲಕ ಈ ಶಿಬಿರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳು ರಾತ್ರಿಯ ನಿದ್ದೆಯಲ್ಲಿ ಕನಸು ಕೂಡಾ ಸಂಸ್ಕೃತದಲ್ಲೇ ಕಾಣುವಂತಹ ಸಂಸ್ಕೃತದ ವಾತಾವರಣ ಇಲ್ಲಿ ನಿರ್ಮಾಣವಾಗಿದೆ.

ಸಂಘದ ಹಿರಿಯರಿಂದ ಬೌದ್ಧಿಕ್ ನೀಡುತ್ತಿರುವುದು, ಪ್ರಾತ: ಕಾಲ ಯೋಗಾಭ್ಯಾಸ

ಸಂಸ್ಕೃತ ಭಾರತೀ ಕರ್ನಾಟಕ ದಕ್ಷಿಣ ಸಾರಥ್ಯ

ಇದು ಸಂಸ್ಕೃತ ಭಾರತೀ ಕರ್ನಾಟಕ ದಕ್ಷಿಣದ ವತಿಯಿಂದ ತಲಪಾಡಿ ದೇವಿನಗರದ ಶಾರದಾ ವಿದ್ಯಾನಿಕೇತನದಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿರುವ ಸಂಸ್ಕೃತ ಪ್ರಬೋಧನವರ್ಗದಲ್ಲಿ ಕಾಣುವಂತಹ ಅಪೂರ್ವ ದೃಶ್ಯವಾಗಿದೆ. ಕಳೆದ ಏ.19 ರಂದು ಶಾರದಾ ವಿದ್ಯಾನಿಕೇತನದಲ್ಲಿ ಆರಂಭಗೊಂಡ ಪ್ರಬೋಧನಾ ವರ್ಗದಲ್ಲಿ ದಕ್ಷಿಣ ಕನ್ನಡ ಮಾತ್ರವಲ್ಲದೆ ಚಿಕ್ಕಮಗಳೂರು,ಶಿವಮೊಗ್ಗ, ಬೆಂಗಳೂರು, ಮಂಡ್ಯ, ಮೈಸೂರು, ಕೋಲಾರ, ತುಮಕೂರು ಜಿಲ್ಲೆಗಳಿಂದ 15 ರಿಂದ 60 ವಯೋಮಿತಿಯೊಳಗಿನ 125 ಆರ್ಹ ಶಿಬಿರಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಸುಲಲಿತವಾಗಿ ಸಂಸ್ಕೃತ ಭಾಷೆ ಮಾತನಾಡಲು ಕಲಿತಿದ್ದಾರೆ. ಈಗಾಗಲೇ ಐದು ದಿವಸಗಳ ಶಿಬಿರ ಸಂಪೂರ್ಣಗೊಂಡಿದ್ದು, ಶನಿವಾರ ಸಮಾರೋಪ ಸಮಾರಂಭ ನಡೆಯಲಿದೆ.

ಸಂಸ್ಕೃತ ಪ್ರಬೋಧನ ವರ್ಗ ಹೀಗಿದೆ

ಬೆಳಿಗ್ಗೆ 5 ಗಂಟೆಗೆ ಶಿಬಿರಾರ್ಥಿಗಳು ಎದ್ದು 5.20 ರಿಂದ 6 ಗಂಟೆ ತನಕ ಪ್ರಾತಃಸ್ಮರಣೆ, ಯೋಗಾಭ್ಯಾಸ ನಡೆಸಿದ ಬಳಿಕ ಮತ್ತೆ ಉಳಿದ ಎಲ್ಲಾ ಚಟುವಟಿಕೆಗಳು ಬಹುತೇಕ ಸಂಘ ಶಿಕ್ಷಾ ವರ್ಗದ ರೀತಿಯಲ್ಲೇ ಇರುತ್ತದೆ. ಬೆಳಿಗ್ಗೆ 5 ರಿಂದ ರಾತ್ರಿ 10 ರವರೆಗೆ ವಿವಿಧ ಆವಧಿಗಳಲ್ಲಿ ಎಲ್ಲವೂ ಸಂಸ್ಕೃತದಲ್ಲಿರುತ್ತದೆ. ಆದರಲ್ಲಿ ಸಂಸ್ಕೃತ ಭಾಷೆಯಲ್ಲೇ ನಡೆಯುವ ಕ್ರೀಡಾವಧಿಯೂ ಮಹತ್ವದ್ದಾಗಿ ಮನ ಸೆಳೆಯುತ್ತದೆ. ಸಂಸ್ಕೃತ ಪಾಠಗಳು ಬೆಳಿಗ್ಗೆ ಮೂರು ಆವಧಿಯಲ್ಲಿದ್ದರೆ, ಮಧ್ಯಾಹ್ನ ಎರಡು ಆವಧಿಯ ಪಾಠ ಇರುತ್ತದೆ. ಸಂಜೆ 7 ರಿಂದ 8 ರವರೆಗೆ ಸಮಾಜದ ಗಣ್ಯರು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯರಿಂದ ಬೌದ್ಧಿಕ್ ನಡೆಯುತ್ತದೆ. ಬಾಹ್ಯ ಚಟುವಟಿಕೆಯ ಅಂಗವಾಗಿ ಇಂದು (ಶುಕ್ರವಾರ) ಸೋಮೇಶ್ವರ ಸೋಮನಾಥನ ಕ್ಷೇತ್ರದಲ್ಲಿ ಮತ್ತು ಸೋಮೇಶ್ವರದ ಕಡಲ ಕಿನಾರೆಯಲ್ಲಿ ಸಂಸ್ಕೃತ ಭಜನೆ ನಡೆಯಲಿರುವುದು ವಿಶೇಷವಾಗಿದೆ ಎನ್ನುತ್ತಾರೆ ಸಂಸ್ಕೃತ ಭಾರತಿಯ ದಕ್ಷಿಣ ಪ್ರಾಂತ ಸಹ ಮಂತ್ರಿ ಕೆ.ವಿ.ಸತ್ಯನಾರಾಯಣ ಆವರು.

ಸುಸಜ್ಜಿತ ವಸತಿ,ಊಟೋಪಚಾರದ ವ್ಯವಸ್ಥೆ:

ದೇವಿನಗರದ ಶಾರದಾ ವಿದ್ಯಾಲಯವು ಸಂಸ್ಕೃತ ಪ್ರಬೋಧನ ವರ್ಗಕ್ಕೆ ಮಹಿಳೆಯರು, ಪುರುಷರಿಗೆ ಸೂಕ್ತವಾದ ಪ್ರತ್ಯೇಕ ವಸತಿ ವ್ಯವಸ್ಥೆ ಕಲ್ಪಿಸಿದ್ದು, ಸಂಸ್ಕಾರ ಭಾರತೀ ವತಿಯಿಂದ ಧಾರ್ಮಿಕ ಕ್ಷೇತ್ರಗಳು ಹಾಗೂ ದಾನಿಗಳ ಸಹಕಾರದಿಂದ ಶಿಬಿರಾರ್ಥಿಗಳಿಗೆ ಬೆಳಗ್ಗಿನ ಉಪಹಾರ, ಮಧ್ಯಾಹ್ನದ ಊಟ, ಸಂಜೆ ಆಲ್ಪಹಾರ, ರಾತ್ರಿ ಊಟವನ್ನ ತಯಾರಿಸಿ ಕೊಡಲಾಗುತ್ತಿದೆ. ಆಡುಗೆ, ಸ್ವಚ್ಛತೆ, ಶಿಕ್ಷಣ ಹೀಗೆ ವಿವಿಧ ವಿಭಾಗಗಳ ಜವಾಬ್ದಾರಿ ನಿಭಾಯಿಸಲು 25 ಜನ ಪ್ರಬಂಧಕರು ಇದ್ದಾರೆ. ತಲಪಾಡಿಯಲ್ಲಿ ಮೊದಲ ಬಾರಿ ಮಾತ್ರವ ಲ್ಲದೆ, ಮಂಗಳೂರಲ್ಲೇ ನಡೆಯುತ್ತಿರುವ ದೊಡ್ಡ ಮಟ್ಟದ ದಕ್ಷಿಣ ಪ್ರಾಂತ ಮಟ್ಟದ ಶಿಬಿರ ಇದಾಗಿದೆ. 300 ಜನರ ವಸತಿ ಯೋಜನೆ ತಯಾರಿಸಿದ್ದರೂ ಪಿಯುಸಿ, ಎಸ್ಸೆಸೆಲ್ಲಿ ಪರೀಕ್ಷೆ ಫಲಿತಾಂಶ ಮಧ್ಯದಲ್ಲಿ ಬಂದ ಕಾರಣ ಆಂದಾಜಿಸಿದಷ್ಟು ಶಿಬಿರಾರ್ಥಿಗಳು ಪಾಲ್ಗೊಳ್ಳಲು ಸಾಧ್ಯವಾಗಿಲ್ಲ. ಶಾರದಾ ಕಾಲೇಜಿನಲ್ಲಿ ಶಿಬಿರಾರ್ಥಿಗಳಿಗೆ ವಸತಿ ಕಲ್ಪಿಸಲು ಇದೇ ಯೋಗ್ಯ ಸಮಯವಾದುದರಿಂದ ಶಿಬಿರದ ಸಮಯ ಬದಲಾಯಿಸಲು ಆಗಲಿಲ್ಲ ಎಂದು ಸಂಘಟಕರು ಅಭಿಪ್ರಾಯಪಟ್ಟಿದ್ದಾರೆ.

> **ಪೋಷಕ ಭಾಷೆ ಸಂಸ್ಕೃತ**
>
> ಸಂಸ್ಕೃತ ಮೃತಭಾಷೆ ಅಲ್ಲ, ಬದಲಿಗೆ ಅಮೃತಭಾಷೆ ಎಂಬುದು ಇಲ್ಲಿ ಪ್ರತ್ಯಕ್ಷವಾಗಿ ಗೋಚರಿಸುತ್ತಿದೆ. ಎಲ್ಲ ಭಾಷೆಗಳ ಪೋಷಕ ಭಾಷೆಯಾಗಿ, ತಾಯಿ ಭಾಷೆಯಾಗಿರುವ ಸಂಸ್ಕೃತ ಎಲ್ಲ ಮಾತೃಭಾಷೆಗಳನ್ನೂ ಪೋಷಿಸಿ ಉಳಿಸುವ ಭಾಷೆಯಾಗಿದೆ. ಮಾತ್ರವಲ್ಲದೆ ಭಾರತೀಯ ಧರ್ಮ, ಸಂಸ್ಕೃತಿ, ಸಭ್ಯತೆ, ಮೌಲ್ಯಗಳನ್ನು ಎತ್ತಿಹಿಡಿಯುವಲ್ಲೂ ಸಂಸ್ಕೃತದ ಕೊಡುಗೆ ಅನನ್ಯವಾಗಿದ್ದು, ಇಂತಹ ಭಾಷೆಯ ಪುನರು ತ್ಥಾನದ ಮಹಾ ಅಭಿಯಾನದಲ್ಲಿ ಇಲ್ಲಿ ನಡೆಯುತ್ತಿರುವ ಒಂದು ಪ್ರಯತ್ನ ಗಮನ ಸೆಳೆಯುತ್ತಿದೆ.

ವಿಯೆಟ್ನಾಮ್‌ನಿಂದ ಬೆಂಗಳೂರಿನ ವೃದ್ಧರವರೆಗೆ

ಓರ್ವ ಶಿಬಿರಾರ್ಥಿ ವಿಯೆಟ್ನಾಮ್‌ನಿಂದ ಬಂದಿದ್ದು ಚೆನ್ನಾಗಿ ಕಲಿತು ಸಂಸ್ಕೃತ ಮಾತನಾಡುತ್ತಿದ್ದಾರೆ. ಬೆಂಗಳೂರಿನಿಂದ ಖುದ್ದು ತಾನೇ ಕಾರು ಚಲಾಯಿಸಿ ಶಿಬಿರಕ್ಕೆ ಬಂದಿರುವ ಎಂಭತ್ತು ವರ್ಷ ಮೇಲ್ಪಟ್ಟವರೋರ್ವರು ಸುಲಲಿತವಾಗಿ ಸಂಸ್ಕೃತ ಮಾತನಾಡುತ್ತಿದ್ದಾರೆ. ಪ್ರಬೋಧನ ವರ್ಗ ಮುಗಿದ ಬಳಿಕ ಬಹುತೇಕ ಶಿಬಿರಾರ್ಥಿಗಳು ಸುಲಲಿತವಾಗಿ ಸಂಸ್ಕೃತ ಮಾತನಾಡಲು ಕಲಿಯುತ್ತಾರೆ. ಇಲ್ಲಿಗೆ ಬರುವ ಶಿಬಿರಾರ್ಥಿಗಳಿಗೆ ಸ್ವಲ್ಪವಾದರೂ ಸಂಸ್ಕೃತದ ಜ್ಞಾನ ಇರಬೇಕು, ಇಲ್ಲದಿದ್ದರೆ ಅವರಿಗೆ ಪಾಠ ಮಾಡಲು ಕಷ್ಟ. ಸಂಸ್ಕೃತದ ಪ್ರಾಥಮಿಕ ಹಂತದ ಶಿಬಿರಗಳಲ್ಲಿ ಭಾಗವಹಿಸಿದವರು ಮಾತ್ರ ಇಲ್ಲಿಗೆ ಬರುತ್ತಾರೆ.

ಕಿರುಸುದ್ದಿ

ದ.ಕ. ಜಿಲ್ಲೆಯಲ್ಲಿ ಇಬ್ಬರು ಟಾಪರ್

ಮಂಗಳೂರು : ಎಸ್ಸೆಲ್ಲಿ ಪರೀಕ್ಷೆಯಲ್ಲಿ ಮಂಗಳೂರಿನ ಇಬ್ಬರು ದ.ಕ. ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಹಂಚಿಕೊಂಡಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಮಂಗಳೂರು ಡೊಂಗರಕೇರಿಯ ಕೆನರಾ ಹೈಸ್ಕೂಲ್ ಮೈನ್ ವಿದ್ಯಾರ್ಥಿನಿ ಶ್ರೀನಿಧಿ ಶೆಣೈ ಹಾಗೂ ಆಂಗ್ಲ ಮಾಧ್ಯಮದಲ್ಲಿ ಮಂಗಳೂರು ಬೊಂದೇಲ್‌ನ ಸೇಂಟ್ ಲಾರೆನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ ಸಾಹಿತ್ಯ ಕೆ. 625ರಲ್ಲಿ 623 ಸಮಾನ ಅಂಕ ಹಂಚಿಕೊಂಡಿದ್ದಾರೆ. ಕೆನರಾ ಹೈಸ್ಕೂಲ್‌ನ ಶ್ರೀನಿಧಿ ಶೆಣೈ ತಂದೆ ಬಿ.ನಾರಾಯಣ ಶೆಣೈ ಅವರು ಮೆಸ್ಕಾಂ ಪುತ್ತೂರು ವಿಭಾಗದಲ್ಲಿ ಉದ್ಯೋಗಿಯಾಗಿದ್ದು, ತಾಯಿ ಬಿ.ವಿಜಯ ಶೆಣೈ, ಗೃಹಿಣಿಯಾಗಿದ್ದಾರೆ. ಶ್ರೀನಿಧಿಯ ಅಣ್ಣ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಕಲಿಯುತ್ತಿದ್ದಾರೆ. ಶ್ರೀನಿಧಿ ನಿರಂತರ ಕಲಿಕೆಯಲ್ಲಿ ಮಾತ್ರವಲ್ಲ ಡ್ರಾಯಿಂಗ್, ಭರತನಾಟ್ಯದಲ್ಲೂ ತೊಡಗಿಸಿಕೊಂಡಿದ್ದಾಳೆ. ಮುಂದೆ ಸಯನ್ಸ್ ಕಲಿಯುವ ಹಂಬಲ ವ್ಯಕ್ತಪಡಿಸಿದ್ದಾಳೆ.

ಸಿಇಟಿ ಪರೀಕ್ಷೆ: 3,701 ಮಂದಿ ಗೈರು

ಮಂಗಳೂರು: ಸಿಇಟಿ ಪರೀಕ್ಷೆ ಗುರುವಾರ ಯಶಸ್ವಿಯಾಗಿ ನಡೆದಿದೆ. ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಗುರುವಾರ ನಡೆದಿದ್ದು, ಇದರಲ್ಲಿ ಒಟ್ಟು 3,701 ಮಂದಿ ಗೈರು ಹಾಜರಾಗಿದ್ದಾರೆ. ಬೆಳಗ್ಗೆ ನಡೆದ ಭೌತಶಾಸ್ತ್ರಜ್ಞ ಪರೀಕ್ಷೆಯಲ್ಲಿ 21,488 ಮಂದಿ ನೋಂದಣಿ ಮಾಡಿದ್ದು, ಇದರಲ್ಲಿ 19,643 ಮಂದಿ ಹಾಜರಾಗಿ 1,845 ಮಂದಿ ಗೈರು ಹಾಜರಾಗಿದ್ದಾರೆ. ಮಧ್ಯಾಹ್ನ ಬಳಿಕ ನಡೆದ ರಸಾಯನಶಾಸ್ತ್ರ ಪರೀಕ್ಷೆಯಲ್ಲಿ 21,488 ಮಂದಿ ನೋಂದಣಿ ಮಾಡಿದ್ದು, 19,632 ಮಂದಿ ಹಾಜರಾಗಿ 1,856 ಮಂದಿ ಗೈರು ಹಾಜರಾಗಿದ್ದಾರೆ. ಜಿಲ್ಲೆಯ 40 ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆದಿದ್ದು, ಜಿಲ್ಲೆಯ ಮೂರು ಎಂಜಿನಿಯರಿಂಗ್ ಕಾಲೇಜನ್ನು ಈ ಬಾರಿ ಕೇಂದ್ರವನ್ನಾಗಿ ಮಾಡಲಾಗಿತ್ತು. ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಮೂರು ಬ್ಲಾಕ್‌ಗಳನ್ನು ಮಾಡಲಾಗಿದ್ದು, 2400ಕ್ಕಿಂತ ಅಧಿಕ ವಿದ್ಯಾರ್ಥಿಗಳು ಹಾಜರಾಗಿದ್ದರೆ ಮಂಗಳೂರು ಭಾಗದಲ್ಲಿ ಸಂತ ಅಲೋಶಿಯಸ್, ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಹೆಚ್ಚಿನ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಬಂಡಿಕೊಟ್ಯ ಕೊಟ್ಟಾರಸ್ಥಾನ ದೈವಸ್ಥಾನದಲ್ಲಿ ಇಂದಿನಿಂದ ಏ.26ರವರೆಗೆ ಬಂಡಿ ಉತ್ಸವ

ಉಳ್ಳಾಲ: ಉಳ್ಳಾಲ ಬಂಡಿಕೊಟ್ಯದ ಶ್ರೀ ಕ್ಷೇತ್ರ ಕೊಟ್ಟಾರಸ್ಥಾನ ದೈವಸ್ಥಾನದಲ್ಲಿ ಏ.24ರಿಂದ ಏ.26ರವರೆಗೆ ಮೂರು ದಿನಗಳ ಕಾಲ ವರ್ಷಾವಧಿ ಬಂಡಿ ಉತ್ಸವವು ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ಉಚ್ಚಿಲತ್ತಾಯ ನೀಲೇಶ್ವರ ಪದ್ಮನಾಭ ತಂತ್ರಿಗಳ ಮಾರ್ಗದರ್ಶನದಲ್ಲಿ ನಡೆಯಲಿದೆ. ಏ.24 ರಂದು ಶ್ರೀ ಕ್ಷೇತ್ರದಲ್ಲಿ ಬೆಳಗ್ಗೆ 8 ಗಂಟೆಗೆ ಕ್ಷೇತ್ರದ ನಾಗದೇವರಿಗೆ ತಂಬಿಲ, ಧ್ವಜಸ್ತಂಭ ಏರುವಿಕೆ,ರಾತ್ರಿ ಗಂಟೆ 7 ಕ್ಕೆ ಧ್ವಜಾರೋಹಣ ಬಳಿಕ ಮಹಾಪೂಜೆ, ಕೊಟ್ಟದಾಯನ, ಕಂಚಿಲ್ ಸೇವೆ ನಡೆಯಲಿದೆ. ಏ.25ರಂದು ರಾತ್ರಿ 7.30ಕ್ಕೆ ಮಹಾಪೂಜೆಯ ಬಳಿಕ ಪ್ರಥಮ ಬಂಡಿ ಉತ್ಸವ ನಡೆಯಲಿದೆ. ಏ.26ರಂದು ಬೆಳಗ್ಗೆ 10 ಗಂಟೆಗೆ ಧೂಮಾವತಿ ಬಂಟ ದೈವಗಳ ಕಟ್ಟುಕಟ್ಟಲೆ ನೇಮ,ರಾತ್ರಿ 7.30ಕ್ಕೆ ಮಹಾಪೂಜೆ, ಪೂರ್ಣ ಬಂಡಿ ಉತ್ಸವ ಮತ್ತು ಧ್ವಜಾವರೋಹಣ ನಡೆಯಲಿದೆಯೆಂದು ಶ್ರೀ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಉಳ್ಳಾಲ ಸುಂದರ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಏ.24ರಂದು ದೃಢಕಲಶ

ಬೆಳ್ತಂಗಡಿ: ಮಾ.3ರಿಂದ 11ರವರೆಗೆ ನಡೆದ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಮುಂದುವರಿದ ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ಏ.24ರಂದು ಜನಾರ್ದನ ಸ್ವಾಮಿ ಹಾಗೂ ಪರಿವಾರ ದೇವರಿಗೆ ದೃಢಕಲಶಾಭಷೇಕ ನಡೆಯಲಿದೆ. ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿ ನೇತೃತ್ವ ಹಾಗೂ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣಪಡುವೆಟ್ನಾಯ ಯಜಮಾನಿಕೆಯಲ್ಲಿ ಧಾರ್ಮಿಕ ವಿಽಗಳು ನಡೆಯಲಿವೆ. ಮಧ್ಯಾಹ್ನ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ ಶ್ರೀ ದೇವರ ಉತ್ಸವ ನಡೆಯಲಿದೆ.

ನಿರಂಜನ ಪ್ರಶಸ್ತಿಗೆ ಪ್ರೊ. ದೇರ್ಲ, ಶಂಕರ ಸಾಹಿತ್ಯ ಪ್ರಶಸ್ತಿಗೆ ಜಗದೀಶ ಶರ್ಮ ಆಯ್ಕೆ

ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ (ಸ್ವಾಯತ್ತ) ಡಾ.ಕೆ. ಶಿವರಾಮ ಕಾರಂತ ಅಧ್ಯಯನ ಕೇಂದ್ರವು ಕೊಡಮಾಡುವ 2026ನೇ ಸಾಲಿನ ನಿರಂಜನ ಪ್ರಶಸ್ತಿಗೆ ಪ್ರೊ. ನರೇಂದ್ರ ರೈ ದೇರ್ಲ ಆವರನ್ನು ಹಾಗೂ 2026ನೇ ಸಾಲಿನ ಶಂಕರ ಸಾಹಿತ್ಯ ಪ್ರಶಸ್ತಿಗೆ ಜಗದೀಶ ಶರ್ಮ ಸಂಪ ಆವರನ್ನು ವಿವೇಕಾನಂದ ವಿದ್ಯಾವರ್ಧಕ ಸಂಘ ಆಯ್ಕೆ ಮಾಡಿದೆ ಮಾಡಿದೆ. ಈ ಪ್ರಶಸ್ತಿ ಪ್ರದಾನ ಸಮಾರಂಭ ಮೇ 2ರಂದು ಕಾಲೇಜಿನ ಸುವರ್ಣ ಮಹೋತ್ಸವ ಸಭಾಭವನದಲ್ಲಿ ನಡೆಯಲಿದೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಡಾ. ನರೇಂದ್ರ ರೈ ದೇರ್ಲ

ದೇರ್ಲರು ದ.ಕ ಜಿಲ್ಲೆಯ ಪುತ್ತೂರು ತಾಲೂಕಿನಮಾಡಾವುನಲ್ಲಿವಾಸವಾಗಿದ್ದು ಕನ್ನಡದ ಪ್ರಸಿದ್ಧ ಸಾಹಿತಿ, ನಿವೃತ್ತ ಪ್ರಾಧ್ಯಾಪಕ ಹಾಗೂ ಪರಿಸರ ಮತ್ತು ಕೃಷಿ ಚಿಂತಕರಾಗಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಬೇಟೆ ಪರಿಕಲ್ಪನೆ ಮತ್ತು ಧೋರಣೆ ಎನ್ನುವ ವಿಷಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿ ಪಡೆದಿದ್ದು ಆವರು ಪರಿಸರ ಕಾಳಜಿಯುಳ್ಳ ಬರಹಗಾರರು. ವಿವಿಧ ಕನ್ನಡ ಪತ್ರಿಕೆಗಳಲ್ಲಿ ಕೃಷಿ ಮತ್ತು ಪರಿಸರಕ್ಕೆ ಸಂಬಂಧಿಸಿದ ಲೇಖನಗಳನ್ನು ಹಾಗೂ ಆಂಕಣಗಳನ್ನು ಬರೆಯುತ್ತಿದ್ದಾರೆ.

ಜಗದೀಶ ಶರ್ಮ ಸಂಪ

ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರ ಸಮೀಪದ ಸಂಪ ಗ್ರಾಮದವರು. ಆವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಸಂಸ್ಕೃತದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಗೋಕರ್ಣದ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಕೃಷ್ಣ ಯಜುರ್ವೇದ ಕ್ರಮಾಂತ ಅಧ್ಯಯನ ಮಾಡಿರುವ ಆವರು, ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ ಆಲಂಕಾರ ವಿದ್ವತ್ ವಿದ್ಯಾಭ್ಯಾಸ ಮಾಡಿದ್ದಾರೆ. ಆವರು ಆದ್ವೈತ ವೇದಾಂತ, ನ್ಯಾಯ-ವೈಶೇಷಿಕ, ಸಾಂಖ್ಯ-ಯೋಗ ತತ್ವಶಾಸ್ತ್ರಗಳಲ್ಲಿ ಆಳವಾದ ಅಧ್ಯಯನವನ್ನು ನಡೆಸಿದ್ದಾರೆ. ಪರಿಣಿತ ವಾಗ್ಮಿಯಾಗಿರುವ ಆವರು, ರಾಷ್ಟ್ರೀಯ ಮಟ್ಟದ ಸಂಸ್ಕೃತ ವಾಕ್ ಪ್ರತಿಯೋಗಿತಾದಲ್ಲಿ ಎರಡು ಬಾರಿ ಚಿನ್ನದ ಪದಕವನ್ನು ಪಡೆದಿದ್ದಾರೆ. ಸಂಸ್ಕೃತ ಸಾಹಿತ್ಯ, ಭಾಷಾ ವಿಜ್ಞಾನ, ಯೋಗ, ಪುರಾಣ ಸಾಹಿತ್ಯ ಮತ್ತು ಪ್ರಾಚೀನ ಜ್ಞಾನ ಕ್ಷೇತ್ರಗಳಲ್ಲಿ ವಿಶಿಷ್ಟ ಪಾಂಡಿತ್ಯ ಹೊಂದಿರುವ ಜಗದೀಶ್ ಶರ್ಮಾ ಸಮೃದ್ಧ ಬರಹಗಾರರಾಗಿದ್ದಾರೆ.

ಆವರು 'ಹೊಸ ದಿಗಂತ'ದ ಆಂಕಣಕಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ, ಜ್ಞಾನ ವಿಜ್ಞಾನ ಅಧ್ಯಯನ ಕೇಂದ್ರದ ಸಂಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವೇದ, ಉಪನಿಷತ್, ಗೀತಗಳ ಕುರಿತಾಗಿ ಖಚಿತವಾಗಿ ಮಾತನಾಡಬಲ್ಲರು. ಭಾರತೀಯ ತತ್ವಶಾಸ್ತ್ರ ಮತ್ತು ಭಾರತೀಯ ಜ್ಞಾನ ಪರಂಪರೆಗಳ ಕುರಿತು ಸಾಕಷ್ಟು ಅಧ್ಯಯನ ನಡೆಸಿದ್ದಾರೆ.

ಏ.25: ಬಿಲ್ಲವ ಬ್ರಿಗೇಡ್, ನಂದಾದೀಪ ಫೌಂಡೇಶನ್ ನೇತೃತ್ವದಲ್ಲಿ ಮನೆ ಹಸ್ತಾಂತರ

ಮಂಗಳೂರು: ಬಿಲ್ಲವಬ್ರಿಗೇಡ್ ಮತ್ತು ನಂದಾದೀಪ ಫೌಂಡೇಶನ್ ಮಂಗಳೂರು ಆಶ್ರಯದಲ್ಲಿ ನಿರ್ಮಿಸ ಲಾದ 14ನೇ ಮತ್ತು 15ನೇ ಮನೆ ಹಸ್ತಾಂತರ ಕಾರ್ಯಕ್ರಮ 'ಸೇವಾ ಸಂಭ್ರಮ' ಬಂಟ್ವಾಳ ಬ್ರಹ್ಮರಕೂಟ್ಲು ಪಂಬದಬೆಟ್ಟು ಕ್ರೀಡಾಂಗಣದಲ್ಲಿ ಏ.25ರಂದು ಸಂಜೆ 6ರಿಂದ ನಡೆಯಲಿದೆ.

ಮನೆ ಹಸ್ತಾಂತರ ಕಾರ್ಯಕ್ರಮದಲ್ಲಿ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಸಿನಿಮಾ ಕ್ಷೇತ್ರದ ದಿಗ್ಗಜರು ಭಾಗವಹಿಸಲಿದ್ದಾರೆ. ರಾತ್ರಿ 8ರಿಂದ ನಡೆಯುವ ಮ್ಯೂಸಿಕಲ್ ಸ್ಟಾರ್ ನೈಟ್ ಕಾರ್ಯಕ್ರಮದಲ್ಲಿ ಪ್ರಕಾಶ್ ಮಹಾದೇವನ್, ರೂಪಾ ಪ್ರಕಾಶ್, ಶಮೀರ್ ಮುಡಿಪು, ಸುಪ್ರೀಯಾ ರಾಮ್, ಮೈಮ್ ರಾಮ್‌ದಾಸ್, ಆನೀಶ್ ವೇಣೂರು, ಪಲ್ಲವಿ ಪ್ರಭು, ಆನುರಾಗ್ ಬಂಗೇರಾ, ಪಲ್ಲವಿ ದೇವಾಡಿಗ, ಶನೀಲ್ ಗೌತಮ್, ಜೆ.ಪಿ. ತೂಮಿನಾಡು, ಪುಷ್ಪರಾಜ್ ಬೊಳ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ರಾಜಸ್ಥಾನ	7	5	2	0	10	+0.790
ಆರ್‌ಸಿಬಿ	6	4	2	0	8	+1.171
ಹೈದರಾಬಾದ್	7	4	3	0	8	+0.820
ದಿಲ್ಲಿ	6	3	3	0	6	-0.130
ಗುಜರಾತ್	6	3	3	0	6	-0.821
ಮುಂಬೈ	6	2	4	0	4	+0.067
ಚೆನ್ನೈ	6	2	4	0	4	-0.780
ಲಖನೌ	7	2	5	0	4	-1.177
ಕೆಕೆಆರ್	7	1	5	1	3	-0.879

ಕಿರುಸುದ್ದಿ

ಆಯುಷ್ ಮಾಥ್ರೆ ಬದಲಿಗೆ ವೇಗಿ ಆಕಾಶ್ ಮಡಿವಾಳ್

ಮುಂಬೈ: ಗಾಯಾಳು ಆಯುಷ್ ಮಾಥ್ರೆ ಬದಲಿಗೆ ವೇಗಿ ಆಕಾಶ್ ಮಡಿವಾಳ್ ಅವರನ್ನು ಬದಲಿ ಆಟಗಾರರನ್ನಾಗಿ ಆಯ್ಕೆ ಮಾಡಿರುವುದಾಗಿ ಚೆನ್ನೈ ತಿಳಿಸಿದೆ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುತ್ತಿರುವ ವೇಳೆ ಕಾಲಿಗೆ ಗಾಯ ಮಾಡಿಕೊಂಡ ಅವರು, 12 ವಾರದ ರಿಹ್ಯಾಬ್ ಹಾಜರಾಗಲಿರುವ ನಿಟ್ಟಿನಲ್ಲಿ ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚೆನ್ನೈ ಪಂದ್ಯಾವಳಿಗೂ ಮುನ್ನ ಎಲ್ಲಿಸ್ ಹೊರಬಿದ್ದಿದ್ದರು. ದಿಲ್ಲಿ ವಿರುದ್ಧದ ಪಂದ್ಯದ ವೇಳೆ ಖಲೀಲ್ ಅಹ್ಮದ್ ಗಾಯ ಮಾಡಿಕೊಂಡಿದ್ದರು. ಆವರೂ ಪಂದ್ಯಾವಳಿಯಿಂದ ಹೊರಬಿದ್ದ ನಂತರ ಚೆನ್ನೈ ತಂಡಕ್ಕೆ ಬೌಲಿಂಗ್ ವಿಚಾರದಲ್ಲಿ ಭಾರೀ ಹಿನ್ನಡೆಯಾಗಿತ್ತು. ಈಗಾಗಲೇ ತಂಡದಲ್ಲಿ ಸ್ಪೆನ್ಸರ್ ಜಾನ್ಸನ್ ಸೇರಿಕೊಂಡಿದ್ದಾರೆ. ಬೌಲಿಂಗ್ ಬಲವನ್ನು ಹೆಚ್ಚಿಸಲು ಆಕಾಶ್ ಅವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಹಿಂದೆ ಮಡಿವಾಳ್ ಮುಂಬೈ ಹಾಗೂ ರಾಜಸ್ಥಾನ ಪರ ಆಡಿದ್ದರು.

ಶೀಘ್ರವೇ ದಿಲ್ಲಿಗೆ ಸ್ಟಾರ್ಕ್: ವೇಗಿ ಮಿಚೆಲ್ ಸ್ಟಾರ್ಕ್ ಶೀಘ್ರವೇ ದಿಲ್ಲಿ ಕ್ಯಾಂಪ್‌ಗೆ ಸೇರಿಕೊಳ್ಳಲಿದ್ದಾರೆ. ಗಾಯದ ಕಾರಣದಿಂದ ಬಹುತೇಕ ಅರ್ಧ ಪಂದ್ಯಾವಳಿಯಿಂದ ದೂರ ಉಳಿದಿದ್ದ ಆವರು, ಭಾರತಕ್ಕೆ ಬರಲಿದ್ದು, ದಿಲ್ಲಿ ಕ್ಯಾಂಪ್ ಸೇರಿಕೊಳ್ಳುವ ನಿರೀಕ್ಷೆಯಿದೆ. ಮೇ 1ಕ್ಕೆ ನಡೆಯುವ ದಿಲ್ಲಿ-ರಾಜಸ್ಥಾನ ನಡುವಿನ ಪಂದ್ಯದಲ್ಲಿ ಆಡುವ ಸಾಧ್ಯತೆ ಇದೆ.

ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯನ್ ಯೋಜನೆಗೆ ಪ್ರೀತಿ, ಪ್ರಿಯಾ

ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಎಲೈಟ್ ಚಾಂಪಿಯನ್‌ಶಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿರುವ ಪ್ರಿಯಾ, ಪ್ರೀತಿ ಪವಾರ್, ಆರುಂಧತ್ತಿ ಚೌಧರಿ ಮತ್ತು ಸಚಿನ್ ಅವರನ್ನು ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯನ್ ಯೋಜನೆಗೆ ಸೇರಿಸಲಾಗಿದೆ. ಆದಲ್ಲದೆ ಇನ್ನೂ ಮೂರು ಬಾಕ್ಸರ್‌ಗಳನ್ನು ಡೆವಲೆಪ್‌ಮೆಂಟ್ ಗುಂಪಿಗೆ ಸೇರಿಸಲಾಗಿದೆ ಎಂದು ಭಾರತೀಯ ಕ್ರೀಡಾ ಪ್ರಾಧಿಕಾರ ತಿಳಿಸಿದೆ. ಇತ್ತೀಚೆಗೆ ನಡೆದ 172ನೇ ಮಿಶನ್ ಒಲಿಂಪಿಕ್ಸ್ ಸೆಲ್‌ನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರೀತಿ 54ಕೆಜಿ, ಪ್ರಿಯಾ 64ಕೆಜಿ ಮತ್ತು ಆರುಂಧತ್ತಿ 70ಕೆಜಿ ವಿಭಾಗದಲ್ಲಿ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. ಸಚಿನ್ 60 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಮಿಶನ್ ಒಲಿಂಪಿಕ್ಸ್ ಸೆಲ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತೀಯರ ಪ್ರದರ್ಶನ ಪರಿಶೀಲಿಸಿ ಅವರನ್ನು ವಿವಿಧ ಗುಂಪುಗಳಲ್ಲಿ ಸೇರಿಸುತ್ತದೆ. ಪೋಡಿಯಂ ಗುಂಪಿನಲ್ಲಿರುವವರು ಹೆಚ್ಚಿನ ತರಬೇತಿ ಮತ್ತು ಬೆಂಬಲ ಪಡೆಯುತ್ತಾರೆ.

ಭಾರತಕ್ಕೆ ಹ್ಯಾಟ್ರಿಕ್ ಸೋಲು

ಜೊಹಾನ್ಸ್‌ಬರ್ಗ್(ದ.ಆಫ್ರಿಕಾ): ಲೌರಾ ವಾಲ್ವಾರ್ಡ್ಟ್ ಅವರ ಸ್ಫೋಟಕ ಶತಕದ ನೆರವಿನಿಂದ ಮಿಂಚಿದ ದಕ್ಷಿಣ ಆಫ್ರಿಕಾ ಮಹಿಳಾ ತಂಡವು ಶೆಫಾಲಿ ವರ್ಮಾ, ಹರ್ಮನ್‌ಪ್ರೀತ್ ಕೌರ್ ಅವರ ಉತ್ತಮ ಬ್ಯಾಟಿಂಗ್ ಹೊರತಾಗ್ಯೂ ಭಾರತ ವಿರುದ್ಧ 9 ವಿಕೆಟ್‌ಗಳಿಂದ ಜಯಿಸಿತು. ದ.ಆಫ್ರಿಕಾ ವಿರುದ್ಧ 5 ಸರಣಿಯನ್ನಾಡುತ್ತಿರುವ ಭಾರತ ಮೊದಲಿನ ಮೂರು ಪಂದ್ಯಗಳಲ್ಲಿ ಸೋತು ಸರಣಿ ಕೈಬಿಟ್ಟಿದೆ. ಆದಾಗ್ಯೂ ಎರಡು ಪಂದ್ಯಗಳನ್ನಾಡಲಿದೆ. ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 4 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿತು. ತಂಡದ ಪರ ಶೆಫಾಲಿ 64, ಕೌರ್ 66 ರನ್ ಗಳಿಸಿದರು. ಆಫ್ರಿಕಾ ಪರ ಎಮ್ ಲಬಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ದ.ಆಫ್ರಿಕಾ 16.3 ಓವರ್‌ಗಳಲ್ಲೇ 193 ರನ್‌ಗಳಿಸಿತು. ಲೌರಾ ಆಜೇಯ 115 ರನ್‌ಗಳಿಸಿದರು. ಆವರ ಇನ್ನಿಂಗ್ಸ್‌ನಲ್ಲಿ 14 ಬೌಂಡರಿ 5 ಸಿಕ್ಸರ್‌ಗಳು ಸೇರಿವೆ. ಸುನೆ ಲೂಸ್ ಆಜೇಯ 64 ರನ್ ಗಳಿಸಿದರು. ನಾಳನೇ ಪಂದ್ಯಶನಿವಾರದಂದು ನಡೆಯಲಿದೆ.

ಇಂದು ತವರಲ್ಲಿ ಬೆಂಗಳೂರಿಗೆ ಕೊನೆಯ ಲೀಗ್ ಪಂದ್ಯ | ಗೆಲುವಿನ ತವಕದಲ್ಲಿ ಗುಜರಾತ್

ಟೈಟಾನ್ಸ್ ಸವಾಲು ಛೇದಿಸಿತೇ ಆರ್‌ಸಿಬಿ?

ಬೆಂಗಳೂರು: ಲೀಗ್ ಹಂತದ ತನ್ನ ಕೊನೆಯ ತವರು ಪಂದ್ಯವಾಡುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಗೆಲುವಿನ ಹಳಿಗೆ ಬರಲು ಸಿದ್ಧವಾಗಿದೆ. ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಎದುರಾಗಲಿವೆ.

ಮೊದಲೇ ಘೋಷಿಸಿರುವ ಹಾಗೆ ಆರ್‌ಸಿಬಿ ಬೆಂಗಳೂರಲ್ಲಿ 5 ಮತ್ತು 2 ಪಂದ್ಯಗಳನ್ನು ರಾಯ್ಪುರದಲ್ಲಿ ಆಡಲಿದೆ. ಈಗಾಗಲೇ 4 ತವರು ಪಂದ್ಯಗಳನ್ನಾಡಿರುವ ಆರ್‌ಸಿಬಿ 5ನೇ ಪಂದ್ಯವನ್ನು ಶುಕ್ರವಾರ ಆಡಲಿದೆ. ಎಂದಿನಂತೆ ಚಿನ್ನಸ್ವಾಮಿ ಸಿದ್ಧವಾಗಿತ್ತು. ವಿರಾಟ್ ಕೊಹ್ಲಿ ಸೇರಿದಂತೆ ಪ್ರಮುಖರು ಗುರುವಾರ ಅಭ್ಯಾಸಕ್ಕಿಳಿದರು. ಇತ್ತ ಗುಜರಾತ್ ಕೂಡ ಅಭ್ಯಾಸ ಮಾಡಿತು. ಆಡಿರುವ ಕೊನೆ ಪಂದ್ಯದಲ್ಲಿ ಆರ್‌ಸಿಬಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸೋತಿದೆ. ಇತ್ತ ಗುಜರಾತ್ ಮುಂಬೈ ವಿರುದ್ಧ ಸೋತಿದೆ. ಎರಡೂ ತಂಡಗಳು ಲಯದ ಹುಡುಕಾಟದಲ್ಲಿವೆ.

ಆರ್‌ಸಿಬಿಗೆ ಆತ್ಮವಿಶ್ವಾಸ: ಹೈದರಾಬಾದ್, ಚೆನ್ನೈ, ಲಖನೌ ಹೀಗೆ ಬಂದ ತಂಡಗಳನ್ನೆಲ್ಲಾ ತವರಿನಲ್ಲಿ ಸೋಲಿಸಿರುವ ಬೆಂಗಳೂರು ಎಲ್ಲಾ ಪಂದ್ಯಗಳಲ್ಲಿ ಏಕಪಕ್ಷೀಯವಾಗಿ ಮೇಲುಗೈ ಸಾಧಿಸಿತ್ತು. ಆದರೆ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಮಾತ್ರ ಸೋತಿದೆ. ರಜತ್ ಪಡೆ ಬಲಿಷ್ಠ ಬ್ಯಾಟಿಂಗ್ ಹಾಗೂ ಆನುಭವಿ ಬೌಲಿಂಗ್ ಬಳಗವನ್ನು ಹೊಂದಿದೆ. ಸಾಲ್ಟ್, ಕೊಹ್ಲಿ ಉತ್ತಮ ಆರಂಭ ಒದಗಿಸುತ್ತಿದ್ದರೆ, ರಜತ್ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಪಡಿಕ್ಕಲ್ ಲಯಕ್ಕೆ ಬರಬೇಕಿದೆ. ತಂಡದಲ್ಲಿ ಹೆಚ್ಚುವರಿ ಬ್ಯಾಟರ್‌ಗಳಿದ್ದಾರೆ. 7 ವಿಕೆಟ್ ಬಿದ್ದರೂ ಸಿಕ್ಸರ್ ಬಾರಿಸುವ ಸಾಮರ್ಥ್ಯ ಹೊಂದಿರುವುದೇ ತಂಡದ ದೊಡ್ಡ ಬಲ. ಬೌಲಿಂಗ್‌ನಲ್ಲಿ ಕೃಣಾಲ್, ಸುಯಶ್ ಸ್ಪಿನ್ ವಿಭಾಗದಲ್ಲಿ ಮಿಂಚಿದರೆ, ಡಷಿ, ಭುವನೇಶ್ವರ್ ಕುಮಾರ್ ಸೇರಿದಂತೆ ಪ್ರಮುಖರು ವಿಶ್ವಾಸ ಹೆಚ್ಚಿಸಿದ್ದಾರೆ. ಕಳೆದ ಪಂದ್ಯದಲ್ಲಿ ಹ್ಯಾಜೆಲ್‌ವುಡ್ ಮಾರಕ ಬೌಲಿಂಗ್ ದಾಳಿ ಮಾಡಿದ್ದರು.

ಗೆಲುವಿನ ತವಕದಲ್ಲಿ ಗುಜರಾತ್: ಇತ್ತ ಟೈಟಾನ್ಸ್ ಕಳೆದ ಪಂದ್ಯದಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಬ್ಯಾಟಿಂಗ್ ವಿಭಾಗ ಕುಸಿದು ಬಿದ್ದಿದೆ. ಆರಂಭಿಕ ಮೂವರು ಬ್ಯಾಟಿಗರು ಬಿಟ್ಟರೆ ಯಾವುದೇ ಬ್ಯಾಟಿಗರೂ ಮಿಂಚಿಲ್ಲ. ಮುಖ್ಯವಾಗಿ ಗುಜರಾತ್ ತಂಡದ ಬಲವಾಗಿದ್ದ ಸುದರ್ಶನ್ ಲಯದಲ್ಲಿಲ್ಲ. ಇತ್ತ ಗಿಲ್ ಉತ್ತಮ ಬ್ಯಾಟಿಂಗ್ ಮಾಡಿದರೂ ಅದು ಸಾಕಾಗುತ್ತಿಲ್ಲ.

ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಇನ್ನು ತಂಡದ ವಾಷಿಂಗ್ಟನ್ ಸುಂದರ್, ಶಾರುಖ್ ಖಾನ್ ಮಿಂಚಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ, ವೇಗಿ ಪ್ರಸಿದ್ಧ ಕೃಷ್ಣ ಕಳೆದ ಪಂದ್ಯದಲ್ಲಿ ದುಬಾರಿಯಾಗಿದ್ದಾರೆ. ರಬಾಡ ತಮ್ಮ ಆಸಲು ಲಯಕ್ಕೆ ಬಂದರು. ಆದರೆ ಸ್ಪಿನ್ ವಿಭಾಗದಲ್ಲಿ ತಂಡ ಹಿನ್ನಡೆ ಅನುಭವಿಸಿದೆ. ರಶೀದ್ ಖಾನ್, ವಾಷಿ ವಿಕೆಟ್ ಕಿತ್ತಬೇಕಿದೆ.

ಪಿಚ್
ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಆನ್ನುತ್ತಾರೆ ವಿಕ್ಷಪರ್ಟ್‌ಗಳು.

ಪಂದ್ಯದ ವಿವರ: ಯಾವಾಗ: ಶುಕ್ರವಾರ, ಎಲ್ಲಿ: ಬೆಂಗಳೂರು,ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ನಮ್ಮ ಆಟ ಆಡಿರುವುದೇ ಮುಖ್ಯ: ಆರ್‌ಸಿಬಿ ನಿರ್ದೇಶಕ ಬೋಬಾಟ್

ನಾವು ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡರಲ್ಲೂ ಆಕ್ರಮಣಕಾರಿ ಕ್ರಿಕೆಟ್ ಆಡಲು ಬಯಸುತ್ತೇವೆ. ಅದಕ್ಕಿಂತ ಮುಖ್ಯವಾಗಿ, ಪಂದ್ಯ ನಿರ್ಣಾಯಕ ಕ್ಷಣಗಳಲ್ಲಿ ಧೈರ್ಯದಿಂದ ಆಡಬೇಕು. ಅದನ್ನು ನಿರಂತರವಾಗಿ ಮಾಡಿದ್ದರೆ ಫಲಿತಾಂಶಗಳು ಸ್ವತಃ ಬರುತ್ತವೆ, ಎಂದು ಆರ್‌ಸಿಬಿ ಕ್ರಿಕೆಟ್ ನಿರ್ದೇಶಕ ಮೊ ಬೋಬಾಟ್ ಹೇಳಿದರು. ಆರು ಪಂದ್ಯಗಳಲ್ಲಿ ನಾಲ್ಕು ಜಯಗಳಿಸಿರುವ ತಂಡದ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ ಅವರು, ಅಂಕಪಟ್ಟಿಗಿಂತ ಪ್ರದರ್ಶನವೇ ಮುಖ್ಯವೆಂದು ಹೇಳಿದ್ದಾರೆ. ನಾಲ್ಕು ಗೆಲುವು ಸಂತೋಷಕರ, ಆದರೆ ಹೆಚ್ಚಿನ ಪಂದ್ಯಗಳಲ್ಲಿ ನಾವು ನಮ್ಮ ಶೈಲಿಯಲ್ಲಿ ಆಡಿದ್ದೇವೆ ಎಂಬುದು ಮುಖ್ಯ. ಅಂಕಪಟ್ಟಿ ಇನ್ನೂ ಕಠಿಣವಾಗಿದೆ, ಆದ್ದರಿಂದ ಮುಂದಿನ ಪಂದ್ಯಕ್ಕೇ ಗಮನ ಕೊಡುತ್ತಿದ್ದೇವೆ ಎಂದರು. ಕಳೆದ ಪಂದ್ಯ ಬಳಿಕ ಸಿಕ್ಕ ವಿರಾಮದ ಬಗ್ಗೆ ಮಾತನಾಡಿದ ಅವರು, ಆಟಗಾರರಿಗೆ ವಿಶ್ರಾಂತಿ ಮತ್ತು ಪುನಶ್ಚೇತನಕ್ಕೆ ಸಮಯ ಸಿಕ್ಕಿತು. ಹೆಚ್ಚು ಅವಕಾಶ ಸಿಗದ ಆಟಗಾರರೊಂದಿಗೆ ಕೆಲಸ ಮಾಡಲು ಸಹ ಸಾಧ್ಯವಾಯಿತು. ಇದರಿಂದ ತಂಡಕ್ಕೆ ಲಾಭವಾಗಿದೆ, ಎಂದು ಹೇಳಿದರು. ಗುಜರಾತ್ ವಿರುದ್ಧದ ಸವಾಲಿನ ಕುರಿತು ಮಾತನಾಡಿ, ಗುಜರಾತ್ ತಂಡದ ಸ್ಥಿರ ಪ್ರದರ್ಶನವನ್ನು ಒಪ್ಪಿಕೊಂಡರು. ಆದು ಉತ್ತಮ ತಂಡ. ಆದರೆ ನಾವು ಎದುರಾಳಿಯನ್ನು ಹೆಚ್ಚು ವಿಶ್ಲೇಷಿಸುವುದಿಲ್ಲ. ನಮ್ಮ ತಯಾರಿ, ನಮ್ಮ ಯೋಜನೆಗಳ ಜಾರಿಗೆ ಹೆಚ್ಚು ಗಮನ ಕೊಡುತ್ತೇವೆ, ಎಂದರು. ಮನೆ ಮೈದಾನದ ಪರಿಸ್ಥಿತಿಗಳ ಬಗ್ಗೆ ಆವರು, ನಗರ ಮತ್ತು ಕ್ರೀಡಾಂಗಣ ನಮ್ಮದೇ ಆದರೂ ಪಿಚ್ ಮೇಲೆ ನಮ್ಮ ಪ್ರಭಾವ ಕಡಿಮೆ. ಆಟಗಾರರು ಪರಿಸ್ಥಿತಿಯನ್ನು ಬೇಗ ಅರ್ಥಮಾಡಿಕೊಂಡು ಹೊಂದಿಕೊಳ್ಳಬೇಕು, ಆದೇ ಪ್ರಮುಖ, ಎಂದು ಹೇಳಿದರು.

ಲಖನೌಗೆ ರಾಜಸ್ಥಾನ ಆಘಾತ

ಲಖನೌ: ರಾಜಸ್ಥಾನ ವೇಗಿಗಳ ದಾಳಿಗೆ ತತ್ತರಿಸಿದ ಲಖನೌ ಸೂಪರ್ ಜೇಂಟ್ಸ್ ತಂಡವು ಒಂದೊಂದು ರನ್ ಗಾಗಿ ಪರದಾಟ ನಡೆಸಿದ್ದು, 160 ರನ್ ಗುರಿ ಪೇರಿಸಲಾಗದೆ 40 ರನ್‌ಗಳಿಂದ ಸೋತಿತು.

ಜೋಫ್ರಾ ಆರ್ಚರ್(4-0-20-3), ನಾಂದ್ರೆ ಬರ್ಜರ್ (4-0-27-2) ಹಾಗೂ ಬ್ರಿಜೇಶ್ (3-0-18-2) ಕರಾರುವಾಕ್ ದಾಳಿಗೆ ಸಿಲುಕಿಕೊಂಡ ಲಖನೌ ಬ್ಯಾಟರ್‌ಗಳು ತೀರಾ ನಿರಾಶಾದಾಯಕ ಪ್ರದರ್ಶನ ನೀಡಿದರು. ಮಿಚೆಲ್ ಮಾರ್ಷ್(55, 41ಎ, 6ಬೌ, 2ಸಿ) ಹೋರಾಟ ನಡೆಸಿದ್ದು ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟಿಗರು 25ರ ಗಡಿ ದಾಟಲೇ ಇಲ್ಲ. ಪರಿಣಾಮ 160 ರನ್ ಬೆನ್ನತ್ತಿದ ಲಖನೌ 18 ಓವರ್‌ಗಳಲ್ಲಿ 119 ರನ್‌ಗಳಿಗೆ ಪತನಗೊಂಡಿತು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನಕ್ಕೆ ಜಡೇಜಾ (43★,29ಎ, 2ಬೌ, 1ಸಿ) ಆಸರೆಯಾಗಿದ್ದರು. ಹೆಟ್ಮೇರ್, ಫೆರಾರಿಯಾ, ಜೈಸ್ವಾಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಲಖನೌ ಪರ ಮೊಹ್ಸಿನ್, ಪ್ರಿನ್ಸ್ ಹಾಗೂ ಶಮಿ ತಲಾ 2 ವಿಕೆಟ್ ಪಡೆದುಕೊಂಡಿದ್ದರು.

ರಾಜಸ್ಥಾನ ಮೇಲುಗೈ: ರಾಜಸ್ಥಾನ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆಯಿತು. ಆಂತಿಮ ಎರಡು ಬಾಲ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡರೂ ಪವರ್‌ಪ್ಲೇನಲ್ಲಿ 44 ರನ್ ಗಳಿಸಿತು. ಇತ್ತ ಲಖನೌ ಆತುರ ಪಟ್ಟಿತು. ಬದೋನಿ ರನ್ ಔಟ್‌ಗೆ ಬಲಿಯಾದ ನಂತರ ಪಂತ್ ಮತ್ತು ಮಾರ್ಕ್ರಂ ಬೇಗನೇ ವಿಕೆಟ್ ಕೊಟ್ಟರು. ತತ್ತರಿಸಿದ ಲಖನೌ, ಪವರ್‌ಪ್ಲೇನಲ್ಲಿ ನಿಧಾನಗತಿ ಬ್ಯಾಟಿಂಗ್ ಮಾಡಿತು. ಅಲ್ಲಿ 31 ರನ್ ಮಾತ್ರ ಗಳಿಸಿ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನ ಹಿನ್ನಡೆ ಅನುಭವಿಸಿತು. ಡಾಟ್ ಬಾಲ್‌ಗಳಿಂದ ಕಂಗೆಟ್ಟ ತಂಡವು ಜಡೇಜಾ ಆಸರೆ ಪಡೆಯಿತು. ಪರಾಗ್, ಹೆಟ್ಮೇರ್ ಕೂಡ ಆಲ್ರ ಪ್ರಯತ್ನ ಪಟ್ಟರು. ಇತ್ತ ಲಖನೌ ಪರ ವೇಗಿಗಳು ಮಿಂಚಿದರು. ಮಧ್ಯಮ ಓವರ್‌ಗಳಲ್ಲಿ 66 ರನ್ ಮಾತ್ರ ಗಳಿಸಿದ ರಾಜಸ್ಥಾನ 3 ವಿಕೆಟ್ ಕಳೆದುಕೊಂಡಿತು. ಇತ್ತ ಲಖನೌ ಮಾರ್ಷ್ ಆವರ ಆಸರೆಯೊಂದಿಗೆ ಆರ್ ಹೋಲಿಕೆಗೆ ಮಧ್ಯಮ ಓವರ್‌ಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿತು. 3 ವಿಕೆಟ್ ಕಳೆದುಕೊಂಡರೂ, 80 ರನ್ ಗಳಿಸಿತು. ಕೊನೆಯ ಓವರ್‌ಗಳಲ್ಲಿ ರಾಜಸ್ಥಾನ ಜಡೇಜಾ ಆವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿತು. 49 ರನ್ ಗಳಿಸಿ ಸ್ಪರ್ಧಾತ್ಮಕ ಗುರಿ ನೀಡಿತು. ಲಖನೌಗೆ ಹೊರೆ. ಹೆಚ್ಚಿನ ರನ್‌ರೇಟ್ ದಾಟಬೇಕಿತ್ತು. ಆದರೆ ಮುಖ್ಯ ಬ್ಯಾಟರ್‌ಗಳೆಲ್ಲರೂ ಔಟಾಗಿದ್ದರು. ಆಂತಿಮ ಓವರ್‌ಗಳಲ್ಲಿ ಎರಡು ಓವರ್ ಮಾತ್ರ ನಿಂತ ಲಖನೌ 8 ರನ್ ಆನ್ನುವಷ್ಟರಲ್ಲಿ ಉಳಿದ ನಾಲ್ಕೂ ವಿಕೆಟ್ ಕಳೆದುಕೊಂಡು ಸೋತಿತು.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 20 ಓವರ್‌ಗಳಲ್ಲಿ 159/6: ಜಡೇಜಾ 43★, ಜೈಸ್ವಾಲ್ 22; ಮೊಹ್ಸಿನ್ 17/2

ಲಖನೌ 18 ಓವರ್‌ಗಳಲ್ಲಿ 119/10: ಮಾರ್ಷ್ 55, ಪೂರಣ್ 22; ಆರ್ಚರ್ 20/3, ಬ್ರಿಜೇಶ್ 18/2

ಹಾರ್ದಿಕ್ ಬಳಗಕ್ಕೆ 208 ರನ್ ದೊಡ್ಡ ಗುರಿ

ಸಂಜು ಶತಕದ ಅಬ್ಬರ

ಮುಂಬೈ: ಅಬ್ಬರದ ಶತಕ ಬಾರಿಸಿದ ಸಂಜು ಸ್ಯಾಮ್ಸನ್ ಮತ್ತೊಮ್ಮೆ ಚೆನ್ನೈ ತಂಡಕ್ಕೆ ಆಸರೆಯಾಗಿದ್ದು, ಮುಂಬೈಗೆ ಸಿಎಸ್‌ಕೆ ದೊಡ್ಡ ಗುರಿ ನೀಡಿದೆ. ಫಾಜ್ಹೀಫರ್ ಕಡಿವಾಣದ ಹೊರತಾಗ್ಯೂ ಮಿಂಚಿದ ಚೆನ್ನೈ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಿತು.

ಸಂಜು(101★, 54ಎ, 10ಬೌ, 6ಸಿ) ವಿವಿಧ ದಾಖಲೆಗಳನ್ನು ಮಾಡಿದರು. ಐಪಿಎಲ್‌ನ 5ನೇ ಶತಕ ಬಾರಿಸಿದ ಆವರು, ಡಿಕಾಕ

|| JAI SRI GURUDEV ||

SRI ADICHUNCHANAGIRI SHIKSHANA TRUST (R.)

BGS INSTITUTIONS

Gandhinagar, Kavoor, Mangaluru-15

Ph.: 0824-2484749, 2484748, 2483344, **2483777 (College)**

Mobile : **9035481793/9482161779**

www.bgsec.net.in : bgsmlr@gmail.com bgs institutions mangalore

CONGRATULATIONS TO 2025-26 TOPPERS

593

SHARVARI

6thSTATE RANK

14th Batch BGS PU COLLEGE

Science

YASHIKA S
586

POORVI B SUVARNA
580

GANYASHREE P C
571

ISHANTH Y M
563

PRASHANTHA
555

MANJUNATH D S
546

VARSHA ANNAPOORNA
542

ROHITH D MADAR
542

ESHITA KAUSHALYA
539

HARSHA D RAMESH
532

NILESH N
522

FATHIMA ANSIYA
520

ABHINAV BISWAL
517

SUDALAI KANNU
517

Commerce

PRERANA P DEVADIGA
578

SAMARTH SUDHAKAR
568

GAGAN K
550

NITHIN CA
549

AMRUTHA
548

KRITHI B KOTIAN
545

ANITHA
538

NISHA
536

ANKITH SHETTY
534

TEJASWI C HOSMATH
526

MAHAMMED AKHIL
523

NEEKSHA S BHANDARY
520

17th Batch BGS HIGH SCHOOL (SSLC)

SAMRUDDHI SHETTY
583

SHIKA B SHETTY
577

VAMSHI ALVA
575

ADWITHA
568

HARIKARTHIK V
562

BHUSHAN RAI
559

CHETHAN ARADHYA L
557

VIJAY KUMAR
546

MAYANK J V
547

ADITI
543

M D IMRAN ANSARI
539

VIRUPAKSHAYYA
524

ಬಿಜಿಎಸ್ ಸರ್ವೋದಯ ಪ್ರೌಢ ಶಾಲೆ (ಕನ್ನಡ ಮಾಧ್ಯಮ) ಪೆರಿಯಡ್ಕ

ಚಂಚಲ
592

ಹೇಮಂತ್ ಕುಮಾರ್
582

ಕಾವ್ಯಶ್ರೀ
568

ಹೇಮಂತ್ ಕುಮಾರ್
536

ಪೂಜಾ ಎನ್
534

ಗಗನ್
532

100% Result

20th Batch BGS EDUCATION CENTRE (CBSE)

MANISH HUGAR
484

SUSHVI DHEERAJ KAVOOR
479

DAKSH SURESH POOJARY
478

VARDHAN PRAMOD RAO
472

TANMAY
468

VAISHNAVI
468

VEBHISH RAJ B
467



S SAI VISHNU SHARMA
466

SINDHU SUVARNA N
460

MANISHA A
458

THAKSHA C G
458

YASHWANTH H L
456

HARDIK
455

GURU SAANDHIPANI
453

DISHAN SALIAN
449

SANVI BEKAL
448



JITHIN BHARADWAAJ
446

K YUSHAN POOJARY
446

NAMITH UDUPA
444

AMRUTHA D K
441

AYUSH KUSUMAKAR SHETTY
441

DIVISH H
438

DEEPTHA
436

POORNA CHANDRA C M
433

N SAMARTH ACHARYA
432

SANJAN C D
429

ASHIK AFFAN
428

MUHAMMAD SAHAR
427

THANUSHA V TOTAD
425

BHUVAN GOWDA D S
423

ADMISSION OPEN 2026-27

BGS PU College Science & Commerce

BGS First Grade College (B.Com)

› NEET › CET › IIT JEE › NDA › NATA › CLAT CA Foundation & CS Coaching Available

BGS EDUCATION CENTRE Class LKG to X (Affliated to CBSE New Delhi)

ಬಿಜಿಎಸ್ ಸರ್ವೋದಯ ಪ್ರೌಢ ಶಾಲೆ (ಕನ್ನಡ ಮಾಧ್ಯಮ) ಪೆರಿಯಡ್ಕ, ಪುತ್ತೂರು

BGS HR. PRIMARY & HIGH SCHOOL

BGS MONTESSORI SCHOOL

BGS Hostel (Class III to Degree)

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ ಸಂಗಮ

ದಕ್ಷಿಣ ಕನ್ನಡ । ಉಡುಪಿ । ಕೊಡಗು । ಕಾಸರಗೋಡು

ಶುಕ್ರವಾರ 24, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
36° 26°	33° 27°

ಪುಟ 3

ಕಟೀಲು ದೇವಸ್ಥಾನದಲ್ಲಿ ಹಿಂದು ಬಾಂಧವರಿಗಾಗಿ ಧಾರ್ಮಿಕ ಶಿಬಿರ

ಪುಟ 6

ಪಡುಬಿದ್ರಿ ಶ್ರೀ ದೇಗುಲ: ಶೋಭಾಯಾತ್ರೆಯಲ್ಲಿ ದಿವ್ಯಾಭರಣ ಆಗಮನ

ಸುದ್ದಿ ಅಪ್‌ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಹೊಸ ದಿಗಂತ

ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ

ಹೆಚ್ಚಿನ ಮಾಹಿತಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ

88612 09102
88612 09100

ದಕ್ಷಿಣ ಕನ್ನಡದ 110 ಸರ್ಕಾರಿ ಶಾಲೆಗಳಲ್ಲಿ 100% ಫಲಿತಾಂಶ

ಖದರ್ ತೋರಿದ 'ಕನ್ನಡ'!

5 ವರ್ಷದ ಬಳಿಕ 99ರ ಗಡಿ ಮುಟ್ಟಿದ ಶೇಕಡಾವ್ಯಾರು

ಗುರುವಾರ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ಜಿಲ್ಲಾವಾರು ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಅಗ್ರಗಣ್ಯನಾಗಿ ಹೊರಹೊಮ್ಮಿದೆ. ವಿಶೇಷವೆಂದರೆ ಈ ಬಾರಿ ಅತ್ಯಧಿಕ ಸಂಖ್ಯೆಯಲ್ಲಿ ಸರಕಾರಿ ಶಾಲೆಗಳು ಕೂಡ ಶೇಕಡ ನೂರರ ಸಾಧನೆ ತೋರಿವೆ. ಜೊತೆಗೆ ಕನ್ನಡ ಮಾಧ್ಯಮ ಶಾಲೆಗಳು ಕೂಡಾ ಅಭೂತಪೂರ್ವ ಸಾಧನೆ ದಾಖಲಿಸಿದ್ದು, ನಾವು ಯಾವುದರಲ್ಲೂ ಕಮ್ಮಿಯಿಲ್ಲ ಎಂಬ ಸ್ಪಷ್ಟ ಸಂದೇಶ ನೀಡಿವೆ. ಕಳೆದ ಐದು ವರ್ಷಗಳ ಬಳಿಕ ಮತ್ತೊಮ್ಮೆ ದಕ್ಷಿಣ ಕನ್ನಡವು ಶೇಕಡಾವಾರು ಫಲಿತಾಂಶದಲ್ಲಿ 99ರ ಗಡಿ ತಲುಪಿದ್ದು, ಇನ್ನೊಂದು ಇತಿಹಾಸ ಬರೆದಿದೆ. ಈ ಹಿಂದೆ 2021ರಲ್ಲಿ ಶೇ.100ರ ಸಾಧನೆಯಾಗಿತ್ತು. ಈ ಬಾರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಒಟ್ಟು 349 ಶಾಲೆಗಳು ಶೇಕಡಾ ನೂರರ ಸಾಧನೆ ತೋರುವ ಮೂಲಕ ರಾಜ್ಯದಲ್ಲಿಯೇ ಎಲ್ಲರ ಗಮನ ಸೆಳೆದಿವೆ.

ಮಂಗಳೂರು: ಗುರುವಾರದಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಈ ಬಾರಿ ಜಿಲ್ಲೆಯ ಒಟ್ಟು 349 ಶಾಲೆಗಳು ಶೇ.100ರ ಸಾಧನೆ ತೋರುವ ಮೂಲಕ ರಾಜ್ಯದಾದ್ಯಂತ ಗಮನಸೆಳೆದಿವೆ.

ವಿಶೇಷವೆಂದರೆ ಈ ಪೈಕಿ 110 ಸರ್ಕಾರಿ ಶಾಲೆಗಳು ಕೂಡಾ ಬರೋಬ್ಬರಿ ಶೇ. 100ರ ಸಾಧನೆ ತೋರಿದ್ದು, ಇವೆಲ್ಲವೂ ಕೂಡಾ ಕನ್ನಡ ಮಾಧ್ಯಮ ಶಾಲೆಗಳು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಎಲ್ಲೆಲ್ಲಿ ಹೇಗಿದೆ ತೃಕ್ಷಣಿಕ ಸಾಧನೆ?

ಮಂಗಳೂರು ಉತ್ತರದಲ್ಲಿ 17, ಮಂಗಳೂರು ದಕ್ಷಿಣದಲ್ಲಿ 18, ಬಂಟ್ವಾಳ ತಾಲೂಕಿನಲ್ಲಿ 16, ಬೆಳ್ತಂಗಡಿ 24, ಮೂಡುಬಿದಿರೆ 8, ಪುತ್ತೂರು 14 ಮತ್ತು ಸುಳ್ಯ ತಾಲೂಕಿನಲ್ಲಿ 13 ಶಾಲೆ ಶೇಕಡಾ ನೂರು ಫಲಿತಾಂಶ ದಾಖಲಿಸಿವೆ. ಇಲ್ಲಿ ಒಟ್ಟು 68 ಸರ್ಕಾರಿ ಶಾಲೆಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇ. 90 ಫಲಿತಾಂಶ ಪಡೆದಿವೆ.

50 ಅನುದಾನಿತ ಶಾಲೆಗಳಲ್ಲಿ ಶೇ.100:

ದಕ್ಷಿಣ ಕನ್ನಡ ಜಿಲ್ಲೆಯ ಅನುದಾನಿತ ಶಾಲೆಗಳು ಕೂಡಾ ಸಾಧನೆಯಲ್ಲಿ ಹಿಂದೆ ಬಿದ್ದಿಲ್ಲ. ಈ ಬಾರಿ 50 ಶಾಲೆಗಳು ಶೇಕಡಾ ನೂರು ಸಾಧನೆ ಮಾಡಿವೆ. ಅಲ್ಲದೆ ಜಿಲ್ಲೆಯಲ್ಲಿ 189 ಅನುದಾನ ರಹಿತ ಶಾಲೆಗಳು ಕೂಡಾ ಶೇಕಡಾ ನೂರು ಫಲಿತಾಂಶ ದಾಖಲಿಸುವ ಮೂಲಕ ತಮ್ಮ ಸಾಧನೆಯಲ್ಲಿ ಎಲ್ಲರ ಗಮನ ಸೆಳೆದಿವೆ.

ಸುತ್ತಮುತ್ತ

ಎಸ್ಸೆಸ್ಸೆಲ್ಸಿ ಫಲಿತಾಂಶ: ಈ ಬಾರಿ ಬಾಲಕಿಯರನ್ನು ಹಿಂದಿಕ್ಕಿದ ಬಾಲಕರು!

ಮಂಗಳೂರು: ಪ್ರತಿ ಬಾರಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಫಲಿತಾಂಶದಲ್ಲಿ ಬಾಲಕಿಯರೇ ಮೇಲುಗೈ ಸಾಧಿಸುತ್ತಿದ್ದರು. ಆದರೆ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬಾಲಕರು ಮೇಲುಗೈ ಸಾಧಿಸಿದ್ದಾರೆ. ತೇರ್ಗಡೆಯಾದವರ ಪೈಕಿ 13,572 ಬಾಲಕರಾದರೆ, 13,200 ಬಾಲಕಿಯರಾಗಿದ್ದಾರೆ.

ಎಂಟನೇ ಸ್ಥಾನಕ್ಕೆ ಕೊಡಗು ಜಿಲ್ಲೆ

ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಕೊಡಗು ಜಿಲ್ಲೆ ಶೇ.96.70 ಫಲಿತಾಂಶ ಪಡೆಯುವುದರ ಮೂಲಕ ರಾಜ್ಯಕ್ಕೆ 8ನೇ ಸ್ಥಾನ ಪಡೆದಿದೆ. ಕಳೆದ ಸಾಲಿನಲ್ಲಿ ಕೊಡಗು ಜಿಲ್ಲೆಯು ಶೇ.87.53 ಫಲಿತಾಂಶದೊಂದಿಗೆ ರಾಜ್ಯದಲ್ಲಿ ಏಳನೇ ಸ್ಥಾನದಲ್ಲಿತ್ತು. ಈ ಬಾರಿ ಪರಿಸ್ಥಿತಿ ತುಸು ಬದಲಾವಣೆ ಕಂಡಿದೆ.

ಬೀದಿಬದಿ ವ್ಯಾಪಾರಿಯ ಮಗಳಿಗೆ 96.48% ಅಂಕ

ಛಲವಿದ್ದರೆ ಸಾಧನೆಗೆ ಬಡತನ ಅಡ್ಡಿಯಲ್ಲ ಎಂಬುದಕ್ಕೆ ಸಾಕ್ಷಿಯಾದ ರಕ್ಷಾ

ಮಂಗಳೂರು ನಗರದಲ್ಲಿ ಬೀದಿ ಬದಿ ವ್ಯಾಪಾರ ಮಾಡುವ ವ್ಯಾಪಾರಿಯೊಬ್ಬರ ಮಗಳು ಶೇ.96.48 ಅಂಕ ಗಳಿಸುವ ಮೂಲಕ ಸಾಧನೆ ಮೆರೆದಿದ್ದಾರೆ. ಮಂಗಳೂರಿನ ಬೀದಿಬದಿ ವ್ಯಾಪಾರಿ ಗರೋಡಿ ನಿವಾಸಿ ಕೆ. ನಾಗೇಶ್- ಗಾಯತ್ರಿ ದಂಪತಿಯ ಪುತ್ರಿ ಕೆ.ರಕ್ಷಾ ಜಿ.ಎನ್ ಈ ಸಾಧನೆ ಮಾಡಿದವರು. ತನ್ನ ಬಡುವಿನ ಸಮಯದಲ್ಲಿ ತಂದೆ ತಾಯಿಗೆ ವೃತ್ತಿಯಲ್ಲಿ ಸಹಾಯ ಮಾಡುತ್ತಾ ಓದಿ ಕಡು ಬಡತನದ ನಡುವೆಯೂ ಉತ್ತಮ ಅಂಕ ಪಡೆದಿದ್ದಾರೆ. ಕೆ.ರಕ್ಷಾ ಜಿ.ಎನ್ ಅವರು ತನ್ನ ಮುಂದಿನ ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲೇ ಮುಂದುವರಿಸುವ ಆಭಿಲಾಷೆ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವಾಗ ಎಷ್ಟು ಫಲಿತಾಂಶ?

ವರ್ಷ	ಸಾಧನೆ
2020	81.28%
2021	100%
2022	88.63%
2023	89.52%
2024	92.12%
2025	91.12%
2026	98.40%

ಸಾಧನೆಗಳ ವಿವರ ಪುಟ 2,5

Ambika Padavipoorva Vidyalaya A/c Ambika Vidyalaya (CBSE)
Nellikatte, Puttur, 574201, D.K. | Bappalige (Residential), Puttur, 574201, D.K.
Bappalige, Puttur, Dakshina Kannada - 574201)
Sponsored by Nattoja Foundation Trust ® Puttur
info@ambikapucollege.edu.in
www.ambikapucollege.edu.in

RESULTS PROVE OUR QUALITY

75% Students Secured Distinction
158 STUDENTS SCORED MORE THAN THEIR SSLC PERCENTAGE
NO. OF STUDENTS SCORED ABOVE 570 116
100% RESULT In Board Exam Since 2020
NO. OF STUDENTS APPEARED 484
NO. OF DISTINCTIONS 363

CONGRATULATIONS
TO THE ACHIEVERS OF
II PU BOARD EXAM RESULTS 2026 | CBSE 10TH GRADE RESULT 2026

150 Years of Vande Mataram

100% RESULT since FIRST BATCH
Appeared 38
Distinction 19
First Class 19

SCIENCE
3RD STATE RANK 597 SHARVARI R.S
6TH STATE RANK 594 TRISHUL N.D
6TH STATE RANK 594 GAGAN K.R
7TH STATE RANK 593 CHANDANA E.
9TH STATE RANK 591 SANNIDHI N.
9TH STATE RANK 591 AKHILESH SHARMA
10TH STATE RANK 590 PRAKRITHI SHETTY
10TH STATE RANK 590 KAVANA

COMMERCE
7TH STATE RANK 594 PRATEEKSHA N. SHENOY
8TH STATE RANK 593 ANANYA V.
10TH STATE RANK 591 K. PRATHEEK PADIYAR
590 SHREEDEVI

TALUK TOPPER
97.33% KANISHK S SHETTY
95.66% KARNASHRUTH PRABHU
95.33% TANVI A RAI
94.83% SINCHANA PRAVEEN
94.33% A NIHARIKA BOKADE
94.16% PRIYANSHU RAO U
94% MANDIRA KAJE
93.66% BHUVI Y
93.5% SUDHANVA SUDARSHAN
93.16% SHARAN P
93% LASYA SANTHOSH
93% RAKSHA S S
92.33% SAHANA HARISH PANAMBU
91% NIDHI M U
87.83% VIVIKTHA RAI S
86.33% YASHAS R
85.6% SAMRUDH L SHETTY
85.33% SANVIKA V
85.16% HIMAMSHU L SHETTY

9448835488 | 9741481600 | 7353661688 | 08251-235688, 298688, 238688

ಸುತ್ತಮುತ್ತ

ಎಸ್‌ವಿಎಸ್ ದೇವಳ ಆಂಗ್ಲಮಾಧ್ಯಮ ಶಾಲೆ

ಬಂಟ್ವಾಳ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬಂಟ್ವಾಳ ಎಸ್.ವಿ.ಎಸ್.ದೇವಳ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಒಟ್ಟು 127 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದುಶೇಕಡಾ ನೂರು ಫಲಿತಾಂಶವನ್ನು ದಾಖಲಿಸಿ ಶಾಲೆಗೆ 'ಎ' ಗ್ರೇಡ್ ಬಂದಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿನಿಯಾದ ದ್ರುವಿ ಬಿ. 618 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ನಂಜಯ್ ಶರ್ಮಾ ಹಾಗೂ ಗಗನ್ ಆಳ್ವ 616 ಅಂಕ ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಈ ಪೈಕಿ 88 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 39 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಹಾಗೆಯೇ ಶಾಲೆಗೆ ಜಿಎಬಿ ಗ್ರೇಡ್ ಬಂದಿರುತ್ತದೆ. ಎಲ್ಲಾವಿದ್ಯಾರ್ಥಿಗಳಿಗೆ ಶ್ರೀ ದೇವಳದ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯಿನಿಯರು, ಶಿಕ್ಷಕ-ಶಿಕ್ಷಕೇತರ ವರ್ಗದವರು ಶುಭ ಹಾರೈಸಿದ್ದಾರೆ.

ಉಪ್ಪಿನಂಗಡಿ ಶ್ರೀರಾಮ ಶಾಲೆಗೆ 97.83%

ಉಪ್ಪಿನಂಗಡಿ: ಉಪ್ಪಿನಂಗಡಿಯ ವೇದಶಂಕರ ನಗರದ ಶ್ರೀರಾಮ ಶಾಲೆ 2025-26ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿಯಲ್ಲಿ ಪರೀಕ್ಷೆಗೆ ಹಾಜರಾಗಿದ್ದ 46 ವಿದ್ಯಾರ್ಥಿಗಳಲ್ಲಿ 45 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.97.83 ಫಲಿತಾಂಶ ದಾಖಲಿಸಿದೆ. ಶಾಲೆಯ ತುಷಾರ್ ಎಸ್. ದೇವಾಡಿಗ 617 ಅಂಕಗಳೊಂದಿಗೆ ರಾಜ್ಯಕ್ಕೆ 8ನೇ ಸ್ಥಾನ ಪಡೆದಿದ್ದಾರೆ. ಪ್ರಣವ ನರಸಿಂಹ ಶರ್ಮ ಕೆ. 606 ಅಂಕಗಳೊಂದಿಗೆ ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

18 ವಿಶಿಷ್ಟಶ್ರೇಣಿ

ಕನ್ನಡ ಮಾತೃ ಭಾಷ ಶಿಕ್ಷಣದ ಮೂಲಕ ಹಾಗೂ ಕಲಿಕೆಯಲ್ಲಿ ಎಲ್ಲಾ ಸಾಮಾರ್ಥ್ಯದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಹೊಂದಿರುವ ಈ ಶಾಲೆಯ 18 ವಿದ್ಯಾರ್ಥಿಗಳು ವಿಶಿಷ್ಟಶ್ರೇಣಿ, 22 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, ಒಬ್ಬ ವಿದ್ಯಾರ್ಥಿಯು ದ್ವಿತೀಯ ಶ್ರೇಣಿ ಹಾಗೂ 4 ವಿದ್ಯಾರ್ಥಿಗಳು ತೃತೀಯ ಶ್ರೇಣಿ ಪಡೆದಿದ್ದಾರೆ.

ವಿಠಲ ಪ್ರೌಢ ಶಾಲಾ ಶಾಲೆ ಶೇ.98.59 ಉತ್ತೀರ್ಣತೆ

ವಿಟ್ಲ: ಎಸ್ಸೆಸ್ಸೆಲ್ಸಿಯಲ್ಲಿ ವಿಠಲ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ ಒಟ್ಟು 213 ವಿದ್ಯಾರ್ಥಿಗಳು ಹಾಜರಾಗಿ 210 ವಿದ್ಯಾರ್ಥಿಗಳು ತೇರ್ಗಡೆಗೊಂಡು ಶೇ 98.59 ಫಲಿತಾಂಶ ದಾಖಲಾದೆ. 30 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ 129 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 33 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಬಾಂಧವಿ-606, ಕೆ. ಕಾವ್ಯಶ್ರೀ-593, ಆಂದ್ರಿತಾ-593 ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ.

ಜಿಲ್ಲೆಯ ಗ್ರಾಮೀಣ ಭಾಗದ ಹಲವು ಖಾಸಗಿ ವಿದ್ಯಾಸಂಸ್ಥೆಗಳಿಗೆ ಉತ್ತಮ ಫಲಿತಾಂಶ ಸಾಧನೆ

ಎಸ್ಸೆಸೆಲ್ಸಿಯಲ್ಲಿ ದ.ಕ.ದ ಹಲವು ಶಾಲೆಗಳ ಮೇಲುಗೈ

ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿಯೂ ದಕ್ಷಿಣ ಕನ್ನಡ ಜಿಲ್ಲೆಯ ಹಲವು ಶಾಲೆಗಳು ಮೇಲುಗೈ ಸಾಧಿಸಿದೆ. ಪುತ್ತೂರು, ಬಂಟ್ವಾಳ, ಸುಳ್ಯ, ಕಡಬ ಸೇರಿದಂತೆ ಬಹುತೇಕ ತಾಲೂಕುಗಳ ವಿದ್ಯಾರ್ಥಿಗಳು ಈ ಬಾರಿಯೂ ಉತ್ತಮ ಫಲಿತಾಂಶ ಗಳಿಸಿದ್ದಾರೆ. 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಅವಿಭಜಿತ ಕಡಬ ತಾಲೂಕು ಒಳಗೊಂಡ ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ವ್ಯಾಪ್ತಿಗೆ ಇತಿಹಾಸದಲ್ಲಿ ಮೊದಲ ಬಾರಿಗೆ ಶೇ.98.05 ಉತ್ತೀರ್ಣತೆ ದಾಖಲಾಗಿದೆ. ದ.ಕ. ಜಿಲ್ಲೆಯ ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯದ ವಿದ್ಯಾರ್ಥಿನಿ ಆದ್ಯ ದ.ಕ ಜಿಲ್ಲೆಗೆ ದ್ವಿತೀಯ ಸ್ಥಾನಿಯಾಗಿ, ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನಿಯಾಗಿ ಹೊರ ಹೊಮ್ಮಿದ್ದಾರೆ. ಒಟ್ಟಾರೆಯಾಗಿ ಉತ್ತಮ ಫಲಿತಾಂಶ ನಾಡಿಗೆ ಹಾಗೂ ವಿದ್ಯಾಸಂಸ್ಥೆಗಳಿಗೆ ಹೆಮ್ಮೆ ತರಿಸಿದೆ.

ವಿವೇಕಾನಂದ ಕನ್ನಡ ಶಾಲೆ: ಶೇ.100

- 19 ವಿದ್ಯಾರ್ಥಿಗಳಿಗೆ ವಿಶಿಷ್ಠ ಶ್ರೇಣಿ
- 50 ವಿದ್ಯಾರ್ಥಿಗಳಿಗೆ ಪ್ರಥಮ ಶ್ರೇಣಿ

ಪುತ್ತೂರು: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ಶೇ.100 ಉತ್ತೀರ್ಣತೆ ದಾಖಲಿಸಿದೆ.

ವಿದ್ಯಾರ್ಥಿಗಳ ವಿವರ

ದರ್ಶನಿ ಎಂ. (ಎಂ. ಮೋಹನ ಗೌಡ-ಯಶೋಧ ದಂಪತಿ ಪುತ್ರಿ) 609 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನಿಯಾಗಿದ್ದಾರೆ. ಧನುಷ್ ಡಿ.ಜಿ.-605, ಕುಶಿತಾ ಬಿ.-598, ಸ್ವೀಕೃತಿ-596, ತನ್ವಿತಾ ಎಂ.-592, ವಿನಿಲ್ ವಿಶ್ವಕರ್ಮ-582, ಅನುಷಾ ಬಿ.ಎಸ್.-582, ಕೃತಿ-580, ಲಹರಿ ಯು.-575, ಗುಣಶ್ರೀ-574, ಯಶ್ವಿತ್ ಎಸ್. ಸಾಲ್ಯಾನ್ -570, ಕೆ. ಸುಶಾನಿ-568, ಸುಪ್ರಿತ್ ಬಿ.ಎಸ್ .567, ತೃಷಾ ಎ.-563, ಜಿತೇಶ್ -559, ಚರಿತ್-542, ಕೌಶಿಕ್ -539, ಗ್ರೀಷ್ಮಾ-537, ಚಿನ್ಮಯ್ ಬಿ.-535 ಅಂಕಗಳನ್ನು ಗಳಿಸಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 88 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶಾಲೆಗೆ ಶೇ.100 ಉತ್ತೀರ್ಣತೆ ದಾಖಲಿಸಿದೆ. 19 ವಿಶಿಷ್ಠ ಶ್ರೇಣಿ, 50 ಪ್ರಥಮ ಶ್ರೇಣಿ, 19 ದ್ವಿತೀಯ ಶ್ರೇಣಿ ಬಂದಿದೆ.

ಪ್ರಗತಿ ವಿದ್ಯಾಸಂಸ್ಥೆ ಸಾಧನೆ

- ಶಾಲೆಯ ಹಲವು ಮಕ್ಕಳ ಸಾಧನೆ

ಪುತ್ತೂರು: ಕಾಣಿಯೂರು ಪ್ರಗತಿ ವಿದ್ಯಾ ಸಂಸ್ಥೆಯ ಆಂಗ್ಲ ಮಾಧ್ಯಮ ವಿಭಾಗದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶ್ರಾವ್ಯ ರೈ 617 ಅಂಕಗಳೊಂದಿಗೆ ತರಗತಿಗೆ ಪ್ರಥಮ, ಕೆ. ಪ್ರಣಮ್ಯ ರೈ 612 ತರಗತಿಗೆ ದ್ವಿತೀಯ, ಪೃಥ್ವಿ ಎಂ. 610 ಅಂಕಗಳೊಂದಿಗೆ ತರಗತಿಗೆ ತೃತೀಯ ಸ್ಥಾನವನ್ನು ಗಳಿಸಿದ್ದಾರೆ.

ಪ್ರಗತಿ ಕನ್ನಡ ಮಾಧ್ಯಮದಲ್ಲಿ ನಿರೀಕ್ಷಾ 608 ಅಂಕಗಳೊಂದಿಗೆ ತರಗತಿಗೆ ಪ್ರಥಮ, ರಿತಿಕಾ ಟಿ.ಕೆ. 597 ಅಂಕಗಳೊಂದಿಗೆ ದ್ವಿತೀಯ, ತ್ರಿಷಾ ಎಚ್.ವಿ. 587 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಆಂಗ್ಲ ಮಾಧ್ಯಮದಲ್ಲಿ ಒಟ್ಟು 48 ವಿದ್ಯಾರ್ಥಿಗಳಲ್ಲಿ 27 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 21 ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕನ್ನಡ ಮಾಧ್ಯಮದಲ್ಲಿ23 ವಿದ್ಯಾರ್ಥಿಗಳಲ್ಲಿ 8 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 13 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿಮತ್ತು 2 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

- ಆಂಗ್ಲಮಾಧ್ಯಮದಲ್ಲಿ 27 ವಿದ್ಯಾರ್ಥಿಗಳಿಗೆ ಡಿಸ್ಟಿಂಕ್ಷನ್
- ಕನ್ನಡ ಮಾಧ್ಯಮ: 8 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್

ಇಂದ್ರಪ್ರಸ್ಥ: ಆದ್ಯ ದ್ವಿತೀಯ

ಉಪ್ಪಿನಂಗಡಿ: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ರಲ್ಲಿ 622 ಅಂಕ ಗಳಿಸಿ ರಾಜ್ಯಕ್ಕೆ 4ನೇ ಸ್ಥಾನಿಯಾಗಿ, ದ.ಕ ಜಿಲ್ಲೆಗೆ ದ್ವಿತೀಯ ಸ್ಥಾನಿಯಾಗಿ, ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನಿಯಾಗಿ ಹೊರ ಹೊಮ್ಮಿದ ದ.ಕ. ಜಿಲ್ಲೆಯ ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯದ ವಿದ್ಯಾರ್ಥಿನಿ ಆದ್ಯ ಪರೀಕ್ಷಾ ಫಲಿತಾಂಶದ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಶಿಕ್ಷಕರ ಪ್ರೋತ್ಸಾಹ

ಪರೀಕ್ಷೆಯನ್ನು ಸುಲಭವಾಗಿಸಲು ನಾನು ಕಲಿತ ಇಂದ್ರಪ್ರಸ್ಥ ಶಾಲೆಯ ಎಲ್ಲಾ ಶಿಕ್ಷಕರ ಪ್ರೋತ್ಸಾಹವೇ ಕಾರಣ. ಶಾಲಾ ರಜೆಯಲ್ಲೂ ಶಿಕ್ಷಕರಿಗೆ ಫೋನಾಯಿಸಿ ಸಂದೇಹದ ಬಗ್ಗೆ ವಿಚಾರಿಸಿದರೆ ಸ್ಪಂದಿಸುತ್ತಿದ್ದರು. ಮನೆಯಲ್ಲೂ ಹೆತ್ತವರು ಕಲಿಕೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸುತ್ತಿದ್ದರು. ಶಾಲೆಯಲ್ಲಿಯೂ ಮನೆಯಲ್ಲಿಯೂ ಎಲ್ಲರೂ ನನ್ನ ಬಗ್ಗೆ ಅತಿ ಎನಿಸುವಷ್ಟು ನಿರೀಕ್ಷೆ ಇರಿಸಿದ್ದರು. ತತ್ ಪರಿಣಾಮ ನನಗೆ ಅವರೆಲ್ಲರ ನಿರೀಕ್ಷೆಯೇ ಭಾರವೆನಿಸುತ್ತಿತ್ತು. ಪರೀಕ್ಷೆಯನ್ನು ಚೆನ್ನಾಗಿ ಬರೆದಿದ್ದೆ. ಇದೀಗ ನಾನು ನಿರೀಕ್ಷಿಸಿದ 622 ಅಂಕ ಲಭಿಸಿ ನನ್ನ ಮನಸ್ಸು ಹಗುರವಾಗಿದೆ. ಆತೃಪ್ತಿ ಲಭಿಸಿದೆ. ವರ್ಷವಿಡೀ ಶಾಲೆಯಲ್ಲಿ ಕಲಿತದ್ದನ್ನು ಮನೆಯಲ್ಲಿ ಪುನರ್ ಮನನ ಮಾಡಿದರೆ ಎಲ್ಲರಿಗೂ ಈ ಮಟ್ಟದ ಸಾಧನೆ ತೋರಬಹುದು. ವಿಜ್ಞಾನವೊಂದರಲ್ಲಿ ನನಗೆ 97 ಅಂಕ ಲಭಿಸಿದ್ದು ಬಿಟ್ಟರೆ ಉಳಿದ ಎಲ್ಲಾ ಪತ್ಯಗಳಲ್ಲಿ ನೂರಕ್ಕೆ ನೂರು ಅಂಕ ಗಳಿಸಿದ್ದೇನೆ. ಮುಂದಕ್ಕೆ ನನಗೆ ವಾಣಿಜ್ಯ ವಿಭಾಗದಲ್ಲಿ ಕಲಿಕೆಯನ್ನು ಮುಂದುವರೆಸಬೇಕೆಂಬ ಕನಸಿದೆ. ಸಿಎ, ಯುಪಿಎಸ್‌ಸಿ ಯಂತಹ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸುವ ಹಂಬಲವಿದೆ ಎಂದು ಫಲಿತಾಂಶದ ಬಗ್ಗೆ 'ಮಾಧ್ಯಮ'ಗಳೊಂದಿಗೆ ಸಂತಸ ಹಂಚಿಕೊಂಡರು.

ಒಡಿಯೂರು ಶ್ರೀ ವಿದ್ಯಾಪೀಠ



- ಶಾಲೆಯ 12 ಮಕ್ಕಳಿಗೆ ವಿಶಿಷ್ಟ ಶ್ರೇಣಿ

ವಿಟ್ಲ: ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ಶ್ರೀ ಗುರುದೇವ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ 2025-26ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿಯಲ್ಲಿ ಶೇ.100 ಉತ್ತೀರ್ಣತೆ ದಾಖಲಿಸಿದೆ. ಶ್ರೀ ರಕ್ಷಾ 599 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಹಾಗೂ 598 ಅಂಕ ಪಡೆದ ಚಿನ್ಮಯ ದ್ವಿತೀಯ ಸ್ಥಾನಿಯಾಗಿದ್ದಾರೆ. ಒಟ್ಟು 12 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ, 8 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, ಹಾಗೂ 3 ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಎಸ್‌ವಿಎಸ್ ಕನ್ನಡ ಮಾಧ್ಯಮ ಶಾಲೆ

ಬಂಟ್ವಾಳ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎಸ್‌ವಿಎಸ್ ದೇವಳ ಕನ್ನಡ ಪ್ರೌಢಶಾಲೆ ಇಲ್ಲಿನ 50 ವಿದ್ಯಾರ್ಥಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಶೇಕಡಾ 100 ಫಲಿತಾಂಶ ಬಂದಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ. ಅಧಿತಿ ಕೆ.ಪೂಜಾರಿ ಅವರು 588 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. 587 ಅಂಕಗಳನ್ನು ಗಳಿಸಿದ ಫಾತಿಮಾತ್ ಸನ ದ್ವಿತೀಯ ಸ್ಥಾನ ಪಡೆದಿದ್ದಾರೆ. 14 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. 33 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯನ್ನು ಪಡೆದರೆ, 3 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಪಡೆದಿದ್ದಾರೆ. ಶಾಲೆಯ ಫಲಿತಾಂಶದಲ್ಲಿ 'ಎ' ಗ್ರೇಡ್ ಲಭಿಸಿದೆ.

ಬಂಟ್ವಾಳ ತಾಲೂಕಿಗೆ ಶೇ.97.87 ಫಲಿತಾಂಶ

ಬಂಟ್ವಾಳ: ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಈ ಬಾರಿ ಬಂಟ್ವಾಳ ತಾಲೂಕಿಗೆ ಶೇ. 97.87 ಉತ್ತಮ ಫಲಿತಾಂಶ ಬಂದಿದೆ.

ಬಂಟ್ವಾಳ ತಾಲೂಕಿನಲ್ಲಿ ಒಟ್ಟು ಪರೀಕ್ಷೆಗೆ 5488 ಮಂದಿ ಹಾಜರಾಗಿದ್ದು ಇವರಲ್ಲಿ 2862 ಹುಡುಗರು ಹಾಗೂ 2626 ಹುಡುಗಿಯರು ಹಾಜರಾಗಿದ್ದರು. ತೇರ್ಗಡೆಯಾದವರ ಪೈಕಿ 2776 ಹುಡುಗರು ಮತ್ತು 2595 ಹುಡುಗಿಯರು ಸೇರಿ 5371 ಸೇರಿದ್ದಾರೆ, ಒಟ್ಟು 96 ಶಾಲೆಗಳಲ್ಲಿ 13 ಅನುದಾನಿತ ಪ್ರೌಢಶಾಲೆ, 42 ಸರಕಾರಿ ಹೈಸ್ಕೂಲ್ ಮತ್ತು 41 ಅನುದಾನ ರಹಿತ ಶಾಲೆಗಳಿವೆ.

ಎಸ್‌ವಿಎಸ್ ವಿದ್ಯಾಗಿರಿ ಶಾಲೆ



- ಪರೀಕ್ಷೆಗೆ ಒಟ್ಟು ಶಾಲೆಯ 119 ವಿದ್ಯಾರ್ಥಿಗಳು ಹಾಜರ್

ಬಂಟ್ವಾಳ: ಇಲ್ಲಿನ ವಿದ್ಯಾಗಿರಿ ಶ್ರೀ ವೆಂಕಟರಮಣ ಸ್ವಾಮೀ ಆಂಗ್ಲ ಮಾಧ್ಯಮ ಶಾಲೆಗೆ ಪ್ರಸಕ್ತ ಸಾಲಿನ ಎಸ್‌ಎಸ್ ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶವನ್ನು ದಾಖಲಿಸಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.

ಪರೀಕ್ಷೆಗೆ ಒಟ್ಟು 119 ವಿದ್ಯಾರ್ಥಿಗಳು ಹಾಜರಾಗಿದ್ದು 68 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ, 48 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯೊಂದಿಗೆ ಉತ್ತೀರ್ಣಗಿದ್ದಾರೆ. ಶಾಲೆಯು ಪ್ರತ್ಯೂಷ್ ಜೆ.ಎಂ 617/625 (98.72%), ರೋಹನ್ ಎಚ್ ಎಸ್ 612/625 (97.92%), ಅನನ್ಯ ಪಿ ಭಟ್, ಅನುಷ್ಕ ಶೆಟ್ಟಿ 611/625 (97.76%), ಮೇಧಶ್ರೀ, ತನಿಶ್ ಆರ್ ಶೆಟ್ಟಿಗಾರ್ 610/625 (97.6%), ಭೂಮಿಕಾ ಎಸ್ ಶೆಟ್ಟಿ 609/625 (97.44%), ದಿವಿತ್, ಶಾನ್ವಿ ಆರ್ ಸುವರ್ಣ 608/625 (97.28%),ಅನುಕ್ತ ಕೆ, ನಮನ್ ಪ್ರಭು, ಶ್ರೀಯ ಪ್ರಭು ಯು 603/625 (96.48), ಪ್ರಥ್ವಿನ್, ಆಯಿಷತುಲ್ ಅಸ್ಮಿನಾ 602/625 (96.32%), ತನ್ಮಯಿ ಡಿ. ಪೂಜಾರಿ 600/625 (96.00%), ಝೀಬಾ ಮರಿಯಂ ಫಾತಿಮಾ 597/625 (95.52%), ಕೆ. ಶ್ರೀಶ ವೈ ಆಚಾರ್ಯ, ರಿತಿಕ್ ಮನೋಜ್ 595/625 (95.2%), ಮೇಘನಾ 594/625 (95.04%), ತೃಪ್ತಿ ಕೆಟ್ಟಿ 592/625 (94.72%), ಇಶಾ ಕೆ. 591/625 (94.56%), ಪ್ರೀತಮ್ ಆರ್ ಶೆಣೈ 590/625 (94.4%) ಅಂಕ ಪಡೆದ್ದಿದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಕೂಡಿಗೆ ಪಾಂಡುರಂಗ ಶೆಣೈ, ಕಾರ್ಯದರ್ಶಿ ಕೂಡಿಗೆ ಪ್ರಕಾಶ್ ಶೆಣೈ ಮತ್ತು ಅನಿರುದ್ಧ ಕಾಮತ್, ಎಸ್‌ವಿಎಸ್ ಸಮೂಹ ಸಂಸ್ಥೆಗಳ ಸಂಚಾಲಕಿ ಕೆ. ರೇಖಾ ಶೆಣೈ, ಮುಖ್ಯೋಪಾಧ್ಯಾಯರು, ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

- 68 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣ
- ಮಕ್ಕಳ ಸಾಧನೆಗೆ ಮೆಚ್ಚುಗೆ

ಪುತ್ತೂರು ತಾಲೂಕು: ಶೇ. 98.05 %

ಪುತ್ತೂರು: ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಅವಿಭಜಿತ ಕಡಬ ತಾಲೂಕು ಒಳಗೊಂಡ ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ವ್ಯಾಪ್ತಿಗೆ ಇತಿಹಾಸದಲ್ಲಿ ಮೊದಲ ಬಾರಿಗೆ ಶೇ.98.05 ಉತ್ತೀರ್ಣತೆ ದಾಖಲಾಗಿದೆ.

ಬಾಲಕರು (2356), ಬಾಲಕಿಯರು (2158) ಸೇರಿ ಒಟ್ಟು (4514) ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇದರಲ್ಲಿ (2286) ಬಾಲಕರು ಹಾಗೂ (2140) ಬಾಲಕಿಯರು ಸೇರಿ ಒಟ್ಟು (4426) ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ. ಬಾಲಕರಿಗೆ ಶೇ.97.03, ಬಾಲಕಿಯರು 99.23 ಶೇ. ಸೇರಿ ಪುತ್ತೂರಿಗೆ ಶೇ.98.05 ಉತ್ತೀರ್ಣತೆ ದಾಖಲಾಗಿದೆ. 14 ಸರಕಾರಿ ಪ್ರೌಢ ಶಾಲೆಗಳು, 12 ಅನುದಾನಿತ ಶಾಲೆಗಳು ಹಾಗೂ 28 ಅನುದಾನ ರಹಿತ ಶಾಲೆಗಳು ಸೇರಿ ಒಟ್ಟು 54 ಶಾಲೆಗಳು ಶೇ.100 ಉತ್ತೀರ್ಣತೆ ದಾಖಲಿಸಿವೆ. ಕಳೆದ ಸಾಲಿನಲ್ಲಿ 29 ಶಾಲೆಗಳು ಶೇ. 100 ಫಲಿತಾಂಶ ದಾಖಲಿಸಿದ್ದವು.

ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯದ ಆದ್ಯ (622) ಅಂಕ ಗಳನ್ನು ಪಡೆದು ತಾಲೂಕಿನಲ್ಲಿ ಅತೀ ಹೆಚ್ಚು ಅಂಕ ಪಡೆದುಕೊ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಶುಕ್ರವಾರ 24, ಏಪ್ರಿಲ್ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪು ಟ ಸಂ ಖ್ಯೆ

ಸುತ್ತಮುತ್ತ

ಇಂದು ಪಶು ಚಿಕಿತ್ಸಾಲಯ ನೂತನ ಕಟ್ಟಡ ಉದ್ಘಾಟನೆ

ಮಂಗಳೂರು: ಜಿಲ್ಲಾಡಳಿತ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಪಶುಪಾಲನಾ –ಪಶುವೈದ್ಯಕೀಯ ಸೇವಾ ಇಲಾಖೆ, ದ.ಕ. ಜಿಲ್ಲೆ ಇದರ ಸಂಯುಕ್ತ ಆಶ್ರಯದಲ್ಲಿ ಆರ್.ಐ.ಡಿ.ಎಫ್ –28ರ ಅಡಿಯಲ್ಲಿ ನಿರ್ಮಾಣಗೊಂಡಿರುವ ಪಶು ಚಿಕಿತ್ಸಾಲಯದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಏ.24 ರಂದು ಬೆಳಿಗ್ಗೆ 9 ಗಂಟೆಗೆ ಉಳ್ಳಾಲ ತಾಲೂಕು ಕುರ್ನಾಡಿನಲ್ಲಿ (ಮುಡಿಪು)ನಡೆಯಲಿದೆ. ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಲಿದ್ದಾರೆ. ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಉಪಸ್ಥಿತರಿರಲಿರುವರು.

ಏ.25 -26 ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ

ಬದಿಯಡ್ಕ: ಬದಿಯಡ್ಕ ಸಮೀಪದ ವೀಣಾವಾದಿನಿ ಸಂಗೀತ ವಿದ್ಯಾಪೀಠ ಮತ್ತು ವೇದ ತಂತ್ರ ವಿದ್ಯಾಪೀಠದಲ್ಲಿ ಏ.25 ಹಾಗೂ 26ರಂದು ಎರಡು ದಿನಗಳ ಕಾಲ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿಕಾ ಶಿಬಿರವು ನಡೆಯಲಿದೆ. ಸಂಪನ್ಮೂಲ ವ್ಯಕ್ತಿಗಳಾಗಿ ಮಧುರೈ ಟಿ.ಎನ್.ಎಸ್.ಕೃಷ್ಣ ಚೆನ್ನೈ ಭಾಗವಹಿಸಲಿದ್ದಾರೆ.
ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾಸಕ್ತ ಎಲ್ಲರೂ ಈ ಶಿಬಿರದಲ್ಲಿ ಪಾಲ್ಗೊಳ್ಳಬೇಕೆಂದು ವೀಣಾವಾದಿನಿ ಸಂಗೀತ ವಿದ್ಯಾಪೀಠದ ಸ್ಥಾಪಕರೂ ಸಂಗೀತ ಗುರುಗಳೂ ಆದ ವಿದ್ವಾನ್ ಯೋಗೀಶ ಶರ್ಮಾ ಬಳ್ಳಪದವು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ. ಶಿಬಿರಾರ್ಥಿಗಳಿಗೆ ಉಟೋಪಚಾರ ಹಾಗೂ ವಸತಿಯ ವ್ಯವಸ್ಥೆ ಮಾಡಲಾಗಿದೆ. ಈ ಹಿಂದೆ ಇದೇ ರೀತಿಯ ಹಲವಾರು ಸಂಗೀತ ಶಿಬಿರಗಳನ್ನು ವ್ಯವಸ್ಥೆಗೊಳಿಸಿ ಯಶಸ್ವಿಯಾಗಿ 25 ವರ್ಷಗಳನ್ನು ಪೂರ್ತಿಗೊಳಿಸಿದ ಹಿನ್ನೆಲೆ ಇರುವ ಸಂಸ್ಥೆಯಲ್ಲಿ ಈ ಬಾರಿಯ ರಜಾವಧಿಯ ಈ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಲಾಸಕ್ತರು ಭಾಗವಹಿಸಬೇಕೆಂದು ಮುಖ್ಯಸ್ಥರು ಮನವಿ ಮಾಡಿದ್ದಾರೆ.

ಇಂದು ಶಾಸಕರ 'ಸೇವಕ ಕಚೇರಿ' ಆರಂಭ

ಮುಲ್ಕಿ: ಗೇರುಕಟ್ಟೆಯ ಮುಲ್ಕಿ ತಾಲೂಕಿನ ಆಡಳಿತ ಸೌಧ,ನೂತನ ಪ್ರಜಾಸೌಧದಲ್ಲಿ ಮುಲ್ಕಿ ಮೂಡಬಿದ್ರೆ ಶಾಸಕ ಉಮಾನಾಥ ಕೋಟ್ಯಾನ್ ಅವರ ಸೇವಕ ಕಚೇರಿಯು ಏ.24 ರಿಂದ ಕಾರ್ಯಾರಂಭಗೊಳ್ಳಲಿದೆ ಏ.24 ರಂದು ಬೆಳಿಗ್ಗೆ 10 ಗಂಟೆಗೆ ಉದ್ಘಾಟನೆ ನಡೆಯಲಿದೆ ಎಂದು ಶಾಸಕರ ಪ್ರಕಟಣೆ ತಿಳಿಸಿದೆ.

ಶ್ರೀ ಕೋರ್ದಬ್ಬು ಧೂಮಾವತಿ ದೈವಸ್ಥಾನದಲ್ಲಿ ವಾರ್ಷಿಕ ನೇಮ

ಮುಲ್ಕಿ: ಸಮೀಪದ ಕಕ್ವ–ಕೊಲಕಾಡಿ ಶ್ರೀ ಕೋರ್ದಬ್ಬು ಧೂಮಾವತಿ ದೈವಸ್ಥಾನದಲ್ಲಿ ವಾರ್ಷಿಕ ನೇಮ ಏ.25ರಿಂದ 26 ರವರೆಗೆ ನಡೆಯಲಿದೆ. ಏ.25ರಂದು ಮದ್ಯಾಹ್ನ ಚಪ್ಪರ ಮುಹೂರ್ತ, ಸಾರ್ವಜನಿಕ ಅನ್ನಸಂತರ್ಪಣೆ, ಸಂಜೆ ದೈವಗಳ ಭಂಡಾರ ಇಳಿದು ರಾತ್ರಿ 10 ಕ್ಕೆ ಕೋರ್ದಬ್ಬು, ತನ್ನಿಮಾನಿಗ ದೈವದ ನೇಮ, ಏ.26ರಂದು ಮಧ್ಯಾಹ್ನ 2 ಗಂಟೆಗೆ ಶ್ರೀ ಧೂಮಾವತಿ, ಬಂಟ ದೈವದ ನೇಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಾರ್ಷಿಕ ಪ್ರತಿಷ್ಠಾ ದಿನಾಚರಣೆ, ನವಗ್ರಹ ಪ್ರತಿಷ್ಠಾಪನೆ

ಮಡಿಕೇರಿ : ಮಡಿಕೇರಿ ನಗರದ ಶ್ರೀ ಓಂಕಾರೇಶ್ವರ ದೇವಾಲಯ ಹಾಗೂ ಶ್ರೀ ಆಂಜನೇಯ ದೇವಾಲಯದ ವಾರ್ಷಿಕ ಪ್ರತಿಷ್ಠಾ ದಿನಾಚರಣೆ ಏ.26ರಂದು ಜರುಗಲಿದೆ. ಶ್ರೀ ಆಂಜನೇಯ ದೇವಾಲಯದ ಆವರಣದಲ್ಲಿ ನೂತನವಾಗಿ ನವಗ್ರಹ ಪ್ರತಿಷ್ಠಾಪನೆ ನಡೆಯಲಿದೆ. ಕ್ಷೇತ್ರ ತಂತ್ರಿಗಳಾದ ಉಚ್ಚಿಲದ ವೇದಬ್ರಹ್ಮ ಶ್ರೀ ನೀಲೇಶ್ವರ ಪದ್ಮನಾಭ ತಂತ್ರಿ ನೇತೃತ್ವದಲ್ಲಿ ಧಾರ್ಮಿಕ ಆಚರಣೆ ಜರುಗಲಿದೆ. ಏ.25 ರಂದು ಸಂಜೆ 6ರಿಂದ ಪ್ರಾರ್ಥನೆ, ಆಂಜನೇಯ ಗುಡಿಯಲ್ಲಿ ಪುಣ್ಯಾಹ, ಆರೂಢ ಪರಿಗ್ರಹ ಹಾಗೂ ನವಗ್ರಹ ಬಿಂಬ ಪರಿಗ್ರಹ, ಜಲಾಧಿವಾಸ, ವಾಸ್ತು ರಾಕ್ಷೋಘ್ನ ಹೋಮ, ವಾಸ್ತು ಬಲಿ, ಮಹಾಪೂಜೆ ನಡೆಯಲಿದೆ. ಏ.26 ರಂದು ಬೆಳಿಗ್ಗೆ 7ರಿಂದ ಗಣಪತಿ ಹೋಮ, ಬಿಂಬ ಶುದ್ಧಿ ಶ್ರೀ ನೀಲೇಶ್ವರ ಪದ್ಮನಾಭ ತಂತ್ರಿಯವರಿಂದ 11 ಗಂಟೆಗೆ ಆಂಜನೇಯ ದೇವಾಲಯದ ಆವರಣದಲ್ಲಿ ಮಿಥುನ ಲಗ್ನದ ಶುಭ ಮುಹೂರ್ತದಲ್ಲಿ ನವಗ್ರಹ ಪ್ರತಿಷ್ಠಾಪನೆ, ಸಾನಿಧ್ಯ ಕಳಶ, ಮಹಾಪೂಜೆ, ಹಾಗೂ ಭಕ್ತಾದಿಗಳಿಗೆ ಅನ್ನಸಂತರ್ಪಣೆಯಾಗಲಿದೆ ಎಂದು ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಮಟ್ಟದ ಬರ ಪರಿಶೀಲನಾ ಸಭೆ | ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶನ

ಕುಡಿಯುವ ನೀರು ಸಹಿತ ಮೂಲ ಸೌಲಭ್ಯ ಅನುಷ್ಠಾನಗೊಳಿಸಿ

ಕಾಸರಗೋಡು: ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆ ಸಮಗ್ರವಾಗಿ ಕುಡಿಯುವ ನೀರು ಪೂರೈಸಬೇಕು. ಪ್ರತಿಯೋರ್ವರಿಗೂ ಕುಡಿಯುವ ನೀರು ಲಭ್ಯಗೊಳ್ಳುತ್ತಿದೆ ಎಂಬುದನ್ನು ಖಾತರಿ ಪಡಿಸಬೇಕು. ಎಲ್ಲಾ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಸಮರ್ಪಕವಾಗಿ ನಡೆಯುತ್ತಿದೆ ಎಂಬ ಕುರಿತು ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶನ ನೀಡಿದ್ದಾರೆ.
ಕಾಸರಗೋಡು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ಬರ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರು ಪೂರೈಕೆ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಅಗತ್ಯದ ಸೂಚನೆ ನೀಡಿದರು. ತೀವ್ರ ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವ ಪ್ರದೇಶಗಳಲ್ಲಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಒದಗಿಸಲು ಅವಶ್ಯಕ ಕ್ರಮ ಕೈಗೊಳ್ಳಲು ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕರಿಗೆ ಜಿಲ್ಲಾಧಿಕಾರಿ ತಿಳಿಸಿದರು.

ಮುಳಿಯಾರು ಬಾವಿಕ್ಕೆರೆ ಕುಡಿಯುವ ನೀರು ಯೋಜನೆಗೆ ಸಂಬಂಧಿಸಿ ನೂತನ ಪಂಪ್ ಹೌಸ್‌ಗೆ ವಿದ್ಯುತ್ ಸಂಪರ್ಕ ಸಮಸ್ಯೆ ಪರಿಹರಿಸಲು ಮತ್ತು ಕುಡಿಯುವ ನೀರಿನ ಪೂರೈಕೆ ತಕ್ಷಣವೇ ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲು ಸಭೆಯಲ್ಲಿ ಮಹತ್ವದ ನಿರ್ಣಯ ಆಂಗೀಕರಿಸಲಾಯಿತು. ಈ ಯೋಜನೆ ಬಗ್ಗೆ ಕೇರಳ ಜಲ ಪ್ರಾಧಿಕಾರದ ಕಾರ್ಯನಿರ್ವಾಹಕ ಇಂಜಿನಿಯರ್‌ಗೆ ಸೂಚನೆ ನೀಡಲಾಯಿತು. ಗುಡ್ಡ ಗಾಡು ಪ್ರದೇಶಗಳ ನಿವಾಸಿಗಳಿಗೆ ಕುಡಿಯುವ ನೀರು ಪೂರೈಸುವ ಆಂಗವಾಗಿ ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ನಿರ್ದೇಶಿಸಲಾಯಿತು.

ಎಲ್ಲಾ ಶಾಲೆಗಳಲ್ಲಿ ಫಿಟ್‌ನೆಸ್ ಪರಿಶೀಲನೆ
2026–27ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಶಾಲಾ ಕಟ್ಟಡಗಳ ಫಿಟ್‌ನೆಸ್ ಪರಿಶೀಲನೆ ಮತ್ತು ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಬೇಕೆಂದು ಜಿಲ್ಲಾಧಿಕಾರಿ ಆದೇಶಿಸಿದರು. ಈ ನಿಟ್ಟಿನಲ್ಲಿ ವಿವಿಧ ಇಲಾಖೆ ಸಂಘಟಿಸಲು ಅವರು ಸಲಹೆ ನೀಡಿದರು. ಈ ಬಗ್ಗೆ ಕಾರ್ಯಚರಣೆ ಮೇಲೆ ವಿಧಾನಸಭಾ ಚುನಾವಣೆ ನೀತಿ ಸಂಹಿತೆಗಳು ಪರಿಣಾಮ ಬೀರದು ಎಂದರು. ಪ್ರತೀ ಸರಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಫಿಟ್‌ನೆಸ್ ಪರಿಶೀಲನೆ ಕಡ್ಡಾಯ ಕೈಗೊಳ್ಳಬೇಕೆಂದು

> **ಕುಸಿಯುತ್ತಿದೆ ಅಂತರ್ಜಲ ಮಟ್ಟ**
> **ಜಿಲ್ಲಾವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ಗಣನೀಯ ಕುಸಿದಿರುವ ಹಿನ್ನೆಲೆ ಜಲಸಂಪ ನ್ಮೂಲಗಳ ಸಂರಕ್ಷಣೆಗೆ ವಿಶೇಷ ಗಮನ ಹರಿಸಬೇಕು. ವಿದ್ಯಾನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಪಂಪಿಂಗ್ (ಮೋಟಾರು) ಅಡಚಣೆ ಪರಿಹರಿ ಸಲು ಕೆಎಸ್‌ಇಬಿ ಮತ್ತು ಜಲ ಪ್ರಾಧಿಕಾರದ ಅಧಿ ಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ಹಾನಿಗೊಳಗಾದ ಕೇಬಲ್‌ಗಳು ಮತ್ತು ಸಂಬಂಧಿತ ಉಪಕರಣ ತುರ್ತಾಗಿ ಬದಲಾಯಿಸಬೇಕು.**
> ● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ

ಶಿಕ್ಷಣ ಇಲಾಖೆಗೆ ಹೊಣೆಗಾರಿಕೆ ನೀಡಲಾಯಿತು.
ಸಾರ್ವಜನಿಕರ ಆರೋಗ್ಯಕ್ಕೂ ವಿಶೇಷ ಗಮನ
ಜಿಲ್ಲೆಯ ಹೆಚ್ಚಿನ ಪಂ.ಗಳಲ್ಲಿ ಈಗಾಗಲೇ ಕುಡಿಯುವ ನೀರು ಸರಬರಾಜು ಆರಂಭವಾಗಿದ್ದರೂ ತಾಂತ್ರಿಕ ದೋಷಗಳಿಂದ ಪೂರೈಕೆಯಲ್ಲಿ ಅಡಚಣೆ ತಲೆದೋರುತ್ತಿದೆ. ಎಂತಹ ಪ್ರದೇಶಗಳಲ್ಲಿ ತಕ್ಷಣ ಪರಿಹಾರ ಕಂಡುಕೊಳ್ಳುವಂತೆ ಡೀಸಿ ಸೂಚಿಸಿದರು.
ಕಾರ್ಮಿಕರಿಗೆ ಜಾಗೃತಿ ಮೂಡಿಸುವ ಕ್ರಮ
ಆರೋಗ್ಯ ಕ್ಷೇತ್ರದಲ್ಲಿ ವಿಶೇಷ ಜಾಗರೂಕತೆ ಕಾಯ್ದುಕೊಳ್ಳಲು ಸಭೆ ನಿರ್ದೇಶನ ನೀಡಿತು. ಬಿಸಿಲಿನ ಹೊಡೆತದ ಸಾಧ್ಯತೆ ಪರಿಗಣಿಸಿ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲಾಗುವುದು. ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿ ಲಭ್ಯತೆ ಖಚಿತಪಡಿಸಿಕೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.
ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗಿ
ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್ (ಎಡಿಎಂ) ಕೆ.ವಿ.ಶೃತಿ, ಉಪ ಡಿಎಂಒ ಆಜಯ್ ಕೆ.ರಾಜ್, ಸ್ಥಳೀಯಾಡಳಿತ ಇಲಾಖೆಜಂಟಿನಿರ್ದೇಶಕಜೇಸನ್ ಮ್ಯಾಥ್ಯೂ,ಪ್ರಧಾನ ಕೃಷಿ ಅಧಿಕಾರಿ ಪಿ.ರಾಘವೇಂದ್ರ, ಕಾರ್ಮಿಕ ಇಲಾಖೆ ಅಧಿಕಾರಿ ಕೆ.ಮೂಸಾ, ವಿಶೇಷ ಶಾಖೆಯ ಡಿವೈಎಸ್‌ಪಿ ಎಂ.ಸುನೀಲ್ ಕುಮಾರ್, ವಿಭಾಗ ಅರಣ್ಯ ಅಧಿಕಾರಿ ಜೋಸ್ ಮ್ಯಾಥ್ಯೂ, ಬುಡಕಟ್ಟು ಅಭಿವೃದ್ಧಿ ಇಲಾಖೆ ಅಧಿಕಾರಿ ಕೆ.ಎ.ರಾಘವನ್ ಮಾತನಾಡಿದರು.

ಕಟೀಲಿನಲ್ಲಿ ಸಮಸ್ತ ಹಿಂದು ಬಾಂಧವರಿಗೆ ಹಿಂದೂ ಧಾರ್ಮಿಕ ಶಿಬಿರ: ಉದ್ಘಾಟನೆ

ಕಟೀಲು: ಭಜನೆ, ಭಗವದ್ಗೀತೆ ಪಠಣ, ಶ್ಲೋಕಗಳನ್ನು ಹೇಳುತ್ತ, ನಮ್ಮ ಹಿಂದು ಧರ್ಮ,ಸಂಸ್ಕಾರ,ಆಚರಣೆಗಳಮಹತ್ವವನ್ನು ಅರಿತುಕೊಂಡು ಸುಜ್ಞಾನಿಗಳಾಗಿ ಬೆಳೆಸುವ ನಿಟ್ಟಿನಲ್ಲಿ ಮಕ್ಕಳಿಗೆ ಹಿಂದೂ ಧಾರ್ಮಿಕ ಶಿಬಿರ ಆಯೋಜಿಸಲಾಗಿದೆ ಎಂದು ಕಟೀಲು ದೇವಳ ಅರ್ಚಕ ಶ್ರೀ ಹರಿನಾರಾಯಣದಾಸ ಆಸ್ರಣ್ಣ ಹೇಳಿದ್ದಾರೆ.
ಆವರು ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಶ್ರಯದಲ್ಲಿ ಉಡುಪಿ ಪೇಜಾವರ ಮಠದ ಸಹಯೋಗದಲ್ಲಿ ಸಮಸ್ತ ಹಿಂದೂ ಬಾಂಧವರಿಗೆ ಒಂದು ವಾರಗಳ ಕಾಲ ಆಯೋಜಿಸಲಾದ ಹಿಂದೂ ಧಾರ್ಮಿಕ ಶಿಬಿರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು.
ಖ್ಯಾತ ಪ್ರವಚನಕಾರ ಕುತ್ಪಾಡಿ ಕೃಷ್ಣರಾಜ ಭಟ್, ಮಕ್ಕಳಲ್ಲಿ ದೇಶ, ಧರ್ಮ, ಸಂಸ್ಕಾರ ಗಳ ಬಗ್ಗೆ ಅಭಿಮಾನ ಬೆಳೆಸುವ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಈ ಶಿಬಿರ ಎಂದರು.

> **ಏ.30ರವರೆಗೆ ನಡೆಯಲಿದೆ ಶಿಬಿರ**
> **ಹಿಂದೂ ಧಾರ್ಮಿಕ ಶಿಬಿರ ಏ.30ರವರೆಗೆ ಕಟೀಲು ಪ್ರೌಢಶಾಲೆಯಲ್ಲಿ ದಿನಂಪ್ರತಿ ಮಧ್ಯಾಹ್ನದವರೆಗೆ ನಡೆಯಲಿದೆ.**

ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಸುಬ್ರಹ್ಮಣ್ಯ ಪ್ರಸಾದ್ ಕೋರ್ಯಾರ್, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಸದಸ್ಯ ಲೋಕಯ್ಯ ಸಾಲ್ಯಾನ್, ವೈ. ಎನ್. ಸಾಲ್ಯಾನ್ ಮೂಲ್ಕಿ ಪಾರ್ಥಸಾರಥಿ ಮೊದಲಾದವರು ಸಂದರ್ಭದಲ್ಲಿ ಉಪಸ್ಥಿತರಿದ್ದರು.
ಋತ್ವಿಕ್ ಪ್ರಾರ್ಥಿಸಿ, ಶಿಕ್ಷಕ ಶ್ರೀವತ್ಸ ಸ್ವಾಗತಿಸಿದರು. ಉಪನ್ಯಾಸಕ ಶೈಲಜಾ ಕಾರ್ಯಕ್ರಮ ನಿರೂಪಿಸಿದರು. ಕೇಶವ ಎಚ್. ವಂದಿಸಿದರು.

ಖರ್ಗೆಯಿಂದ ಪ್ರಧಾನಿಗೆ ಅವಮಾನ: ಸಂಸದ ಕ್ಯಾ. ಬ್ರಿಜೇಶ್ ಚೌಟ ಖಂಡನೆ

ಮಂಗಳೂರು: ದೇಶದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯಡಿ ಜನರಿಂದ ಆಯ್ಕೆಯಾದ ನಾಯಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಆವರನ್ನು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಆವಹೇಳನಕಾರಿಯಾಗಿ ನಿಂದಿಸಿರು ವುದು ಖಂಡನೀಯ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.
ಆವರು 'ಮೋದಿ ಭಯೋತ್ಪಾದಕ' ಎಂಬ ಖರ್ಗೆ ಹೇಳಿಕೆ ಕುರಿತು ಪ್ರತಿಕ್ರಿಯಿಸಿದರು.
ವಿಕೃತ ಮನಸ್ಥಿತಿಯನ್ನು ಪ್ರದರ್ಶಿಸುತ್ತಿದ್ದಾರೆ
ಕಳೆದ ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷವು ಹೆಣೆದಿದ್ದ ಸುಳ್ಳಿನ ಜಾಲವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ ಜನಪರ ಆಡಳಿತದ ಮೂಲಕ ಬಯಲಿಗೆಳೆದಿದ್ದಾರೆ. ಈ ಸತ್ಯವನ್ನು ಸಹಿಸಲಾಗದೆ ಹಾಗೂ ರಾಜಕೀಯ ನೆಲೆ ಕಳೆದುಕೊಳ್ಳುವ ಭೀತಿಯಲ್ಲಿರುವ ಹತಾಶೆಯ ತುತ್ತತುದಿಗೆ ತಲುಪಿರುವ ಕಾಂಗ್ರೆಸ್ ಈಗ ಪ್ರಧಾನಿಯವರ ಮೇಲೆ ವೈಯಕ್ತಿಕ ದಾಳಿ ನಡೆಸುವ ಮೂಲಕ ತಮ್ಮ ವಿಕೃತ ಮನಸ್ಥಿತಿಯನ್ನು ಪ್ರದರ್ಶಿಸುತ್ತಿದ್ದಾರೆ ಎಂದವರು ಹೇಳಿದರು.
ಜನರ ದಿಕ್ಕು ತಪ್ಪಿಸಲು ಯತ್ನಿಸುತ್ತಿದೆ
ಅಭಿವೃದ್ಧಿ ರಾಜಕಾರಣದ ಮುಂದೆ ಸೋಲೊಪ್ಪಿಕೊಂಡಿರುವ ಕಾಂಗ್ರೆಸ್, ಇಂತಹ ಕೀಳುಮಟ್ಟದ ಶಬ್ದ ಬಳಕೆಯ ಮೂಲಕ ದೇಶದ ಜನರ ದಿಕ್ಕು ತಪ್ಪಿಸಲು ಯತ್ನಿಸುತ್ತಿದೆ ಎಂದು ಸಂಸದ ಕ್ಯಾ. ಚೌಟ ಅಭಿಪ್ರಾಯಪಟ್ಟಿದ್ದಾರೆ.

> **ದೇಶದ ಜನಾದೇಶಕ್ಕೆ ಮಾಡಿದ ಅಪಚಾರ**
> **'ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ದೇಶದ ನಾಯಕ, ಆದರಲ್ಲಿಯೂ ದೇಶದ ಪ್ರಧಾನಮಂತ್ರಿಯನ್ನು ಇಂತಹ ಕೀಳುಮಟ್ಟದ ಶಬ್ದಗಳಿಂದ ನಿಂದಿಸು ವುದು ದೇಶದ ಜನಾದೇ ಶಕ್ಕೆ ಮಾಡಿದ ಅಪಚಾರ ವಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಆವರ ಇಂತಹ ಕೀಳು ಮಟ್ಟದ ಹೇಳಿಕೆ ಕಾಂಗ್ರೆಸ್ ಪಕ್ಷವು ತಲುಪಿರುವ ಬೌದ್ಧಿಕ ಅಧಃಪತನ ಹಾಗೂ ಪಕ್ಷದ ಸಂಕುಚಿತ ಮನಸ್ಥಿತಿಯನ್ನು ತೋರಿಸುತ್ತದೆ'.**
> ● ಕ್ಯಾ.ಬ್ರಿಜೇಶ್ ಚೌಟ, ದ.ಕ. ಸಂಸದ

ಬದಿಯಡ್ಕ ಬಳಿಯ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ದಿನವಾದ ಗುರುವಾರ ಪಲ್ಲಪೂಜೆ ನಡೆಯಿತು.

ಪೆರಡಾಲ ಶ್ರೀ ಉದನೇಶ್ವರ ದೇವರ ಪ್ರತಿಷ್ಠಾ ದಿನ ಗುರುವಾರ ಪ್ರಾತಃಕಾಲ 108 ತೆಂಗಿನಕಾಯಿಗಳ ಶ್ರೀ ಮಹಾಗಣಪತಿ ಹೋಮ ಜರಗಿತು. ತಂತ್ರಿ ವರ್ಯ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ನೇತೃತ್ವವಹಿಸಿದ್ದರು. ಆಡಳಿತ ಮೊಕ್ತೇಸರ, ವಕೀಲ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಮೊಕ್ತೇಸರ ಸೀತಾರಾಮ ವಿ., ಬ್ರಹ್ಮಕಲಶ ಸಮಿತಿ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಮಾಜಿ ಮೊಕ್ತೇಸರ ಚಂದ್ರಹಾಸ ರೈ ಪೆರಡಾಲಗುತ್ತು, ಪ್ರಧಾನ ಅರ್ಚಕ ಶಿವರಾಮ ಭಟ್ ಪೆರಡಾಲ, ಆಹಾರ ಸಮಿತಿ ಪ್ರಧಾನ ಸಂಚಾಲಕ ಗಣೇಶಕೃಷ್ಣ ಆಳಕ್ಕೆ, ಮಾತೃ ಸಮಿತಿಯ ವಿನಯಾ ರೈ, ಭಜನಾ ಸಮಿತಿಯ ಗೀತಾ ಎಂ.ಭಟ್ ಮತ್ತಿತರರಿದ್ದರು.

ಹೆಬ್ರಿ ಸರಕಾರಿ ಪ್ರಥಮ ದರ್ಜೆ ಕಾಲೇಜು: ಉದ್ಯೋಗ ನೇಮಕಾತಿಯ

ಹೊಸದಿಗಂತ
4 ಸಂಗಮ ನಿಮ್ಮೂರಿನ ಸುದ್ದಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ಪ್ರ ಟ ಸಂ ಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಶುಕ್ರವಾರ 24, ಏಪ್ರಿಲ್ 2026

ಸುತ್ತಮುತ್ತ

ಶ್ರೀ ವ್ಯಾಸಮಹರ್ಷಿ ಶಾಲೆ

ಮುಲ್ಕಿ: ಶ್ರೀ ವ್ಯಾಸಮಹರ್ಷಿ ಶಾಲೆ ಶೇ.100 ಫಲಿತಾಂಶ ಹಾಗೂ ರಾಜ್ಯಮಟ್ಟದಲ್ಲಿ 4ರ್‍ಯಾಂಕ್ ಗಳಿಸಿದೆ. ಮುಲ್ಕಿ ಶ್ರೀ ವ್ಯಾಸಮಹರ್ಷಿ ಶಾಲೆ ಶೇ. 100 ಫಲಿತಾಂಶ ಗಳಿಸಿದೆ. 115 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 69 ವಿಶಿಷ್ಟ ಶ್ರೇಣಿ,40 ಪ್ರಥಮದರ್ಜೆ ಫಲಿತಾಂಶ ಬಂದಿದೆ. ದಿಗಂತ್ ಎಸ್. ಶೆಟ್ಟಿ 620 ಅಂಕಗಳೊಂದಿಗೆ 6ನೇ ರ್‍ಯಾಂಕ್ ಶಾಲೆಗೆ ಪ್ರಥಮ, ಕುಶಿ ಕೆ.ಸಾಲ್ಯಾನ್ 619 ಅಂಕದಿಂದಿಗೆ 7ನೇ ರ್‍ಯಾಂಕ್, ದಿಶಾ ಜಿ.ದೇವಾಡಿಗ 618 ಅಂಕದೊಂದಿಗೆ 8ನೇ ರ್‍ಯಾಂಕ್ ಎಂ. ವಿನಯಾ.ಎ ಕುಡ್ವಾ 616 ಅಂಕದೊಂದಿಗೆ 10ನೇ ರ್‍ಯಾಂಕ್ ಗಳಿಸಿದ್ದಾರೆ.

ಮುಲ್ಕಿ ಕಾರ್ನಾಡು ಸಿಎಸ್‌ಐ ಶಾಲೆಗೆ ಶೇ.100 ಫಲಿತಾಂಶ

ಮುಲ್ಕಿ: ಕಾರ್ನಾಡು ಸಿಎಸ್‌ಐ ಶಾಲೆ ಶೇ. 100 ಫಲಿತಾಂಶ ಗಳಿಸಿದೆ. 32 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 9 ವಿಶಿಷ್ಟ ಶ್ರೇಣಿ,12 ಪ್ರಥಮ ದರ್ಜೆ, ರೋಷ್ನಿ ಅಯೋನಾ 593 ಅಂಕ ಗಳೊಂದಿಗೆ ಪ್ರಥಮ ಸ್ಥಾನಿ ಯಾಗಿದ್ದಾರೆ.

ತುಂಬೆ ಬಿ.ಎ. ವಿದ್ಯಾ ಸಂಸ್ಥೆಗೆ ಶೇ. 100 ಫಲಿತಾಂಶ

ಬಂಟ್ವಾಳ: ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತುಂಬೆ ಬಿ.ಎ. ವಿದ್ಯಾ ಸಂಸ್ಥೆಗೆ 100% ಫಲಿತಾಂಶ ಬಂದಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ. ತುಂಬೆ ವಿದ್ಯಾ ಸಂಸ್ಥೆಯಿಂದ 102 ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದು ಇದರಲ್ಲಿ 102 ಮಂದಿ ಉತ್ತೀರ್ಣರಾಗಿ 100% ಫಲಿತಾಂಶ ಸಾಧಿಸಲಾಗಿದೆ. 29 ಮಂದಿ ಡಿಸ್ಟಿಂಕ್ಷನ್, 59 ಮಂದಿ ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆಯಲ್ಲಿ 13 ಮಂದಿ ಉತ್ತೀರ್ಣರಾಗಿದ್ದಾರೆ. ಆಂಗ್ಲ ಮಾಧ್ಯಮ ವಿಭಾಗದಲ್ಲಿ 610 ಅಂಕ ಗಳಿಸಿದ ದರ್ಶಿತ್ ಕೆ ಕುಲಾಲ್ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದು ಕನ್ನಡ ಮಾಧ್ಯಮ ವಿಭಾಗದಲ್ಲಿ 559 ಅಂಕ ಗಳಿಸಿದ ಸುಜನ್ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ.

ವಿಶ್ವಮಂಗಳ ಶಾಲೆಗೆ ಶೇ.100 ಫಲಿತಾಂಶ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಬಳಿ ಇರುವ ವಿಶ್ವಮಂಗಳ ಆಂಗ್ಲ ಮಾಧ್ಯಮ ಶಾಲೆಯು ಪರೀಕ್ಷೆ ಬರೆದಿದ್ದ ಒಟ್ಟು 55 ವಿದ್ಯಾರ್ಥಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗುವುದರೊಂದಿಗೆ ಶೇ.100 ಫಲಿತಾಂಶ ದಾಖಲಿಸಿದೆ. ಮಾನ್ವಿ ಎಸ್. 619(99%), ಅನನ್ಯ ಟಿ. 612(97%), ಸಾತ್ವಿಕ್ 612(97%), ಅಭಿನವ್ ಭಟ್ 605(96%) ಅಂಕಗಳನ್ನು ಪಡೆದಿದ್ದಾರೆ. 27ಮಂದಿ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ.

ದಿಗಂತ್ ಶೆಟ್ಟಿಗೆ 6ನೇ ರ್‍ಯಾಂಕ್

ಮುಲ್ಕಿ: 2025 –26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾ ಪೀಠದ ವಿದ್ಯಾರ್ಥಿ ದಿಗಂತ್ ಎಸ್. ಶೆಟ್ಟಿ ಶೇ.99.2 ಅಂಕ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ 6 ನೇ ರ್‍ಯಾಂಕ್ ಪಡೆದು ತೋಕೂರು ಎಂಬ ಸಣ್ಣ ಗ್ರಾಮದ ಹೆಸರನ್ನು ರಾಜ್ಯಕ್ಕೆ ಪಸರಿಸಿದ್ದಾರೆ. ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷರು ಮತ್ತು ಮಹಿಳಾ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಮಾಗಂದಡಿ ಮನೆತನದ ಸುರೇಶ್ ಶೆಟ್ಟಿ ಮತ್ತು ಉಷಾ.ಎಸ್ ಶೆಟ್ಟಿ ದಂಪತಿಯ ಪುತ್ರ.

ರಾಜ್ಯದಲ್ಲಿ 8ನೇ ಸ್ಥಾನ | 5948 ವಿದ್ಯಾರ್ಥಿಗಳ ಪೈಕಿ 5842 ವಿದ್ಯಾರ್ಥಿಗಳು ಉತ್ತೀರ್ಣ

ಎಸ್ಸೆಸ್ಸೆಲ್ಸಿ:96.70 ಶೇ. ಫಲಿತಾಂಶ ದಾಖಲಿಸಿದ ಕೊಡಗು

ಮಡಿಕೇರಿ: ಎಸೆಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಕೊಡಗು ಜಿಲ್ಲೆ ಶೇ.96.70 ಫಲಿತಾಂಶ ಪಡೆಯುವುದರ ಮೂಲಕ ರಾಜ್ಯಕ್ಕೆ 8ನೇ ಸ್ಥಾನ ಪಡೆದಿದೆ. ಕಳೆದ ಸಾಲಿನಲ್ಲಿ ಜಿಲ್ಲೆಯು ಶೇ.87.53 ಫಲಿತಾಂಶದೊಂದಿಗೆ ರಾಜ್ಯದಲ್ಲಿ ಏಳನೇ ಸ್ಥಾನದಲ್ಲಿತ್ತು.

ಪ್ರಸಕ್ತ ಸಾಲಿನಲ್ಲಿ ಪರೀಕ್ಷೆಗೆ ಹಾಜರಾದ 5948 ವಿದ್ಯಾರ್ಥಿಗಳ ಪೈಕಿ 5842 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಹಾಜರಾದ 2904 ವಿದ್ಯಾರ್ಥಿಗಳ ಪೈಕಿ 2776 ಬಾಲಕರು ಉತ್ತೀರ್ಣರಾಗಿ ಶೇ.95.59ರಷ್ಟು ಫಲಿತಾಂಶ ದಾಖಲಿಸಿದ್ದರೆ, 3044 ವಿದ್ಯಾರ್ಥಿನಿಯರ ಪೈಕಿ 2966 ಬಾಲಕಿಯರು ತೇರ್ಗಡೆಯಾಗಿ ಶೇ.97.44 ಫಲಿತಾಂಶ ಪಡೆದಿದ್ದಾರೆ.

ಜಿಲ್ಲೆಗೆ ಮೊದಲಿಗರು

ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಡಿಕೇರಿ ಸಂತ ಜೋಸೆಫರ ಕಾನ್ವೆಂಟ್ ವಿದ್ಯಾರ್ಥಿನಿ ಟಿ.ಟಿ.ಲಿನ್ಸಿ ದೇಚಮ್ಮ ಹಾಗೂ ಕೊಡಗರಹಳ್ಳಿ ಶಾಂತಿ ನಿಕೇತನ ಪ್ರೌಢ ಶಾಲೆಯ ಕೆ.ಐ. ಸಿಂಚನಾ ತಲಾ 621 ಅಂಕ ಪಡೆಯುವ ಮೂಲಕ ಜಿಲ್ಲೆಗೆ ಮೊದಲಿಗರಾಗಿ ಹೊರ ಹೊಮ್ಮಿದ್ದು, ವೀರಾಜಪೇಟೆ ಸೈಂಟ್ ಆನ್ಸ್ ಪ್ರೌಢ ಶಾಲೆಯ ಡೀನ್ ಸಾಲ್ವೋ ಡಿಸೋಜಾ 620 ಅಂಕ ಪಡೆದು ದ್ವಿತೀಯ ಸ್ಥಾನದಲ್ಲಿದ್ದಾರೆ. ಸೋಮವಾರಪೇಟೆಯ ವಿಶ್ವ ಮಾನವ ಕುವೆಂಪು ಪ್ರೌಢಶಾಲೆಯ ಶಿವಾನಿ ಶಾರದಾಮಣಿ, ವೀರಾಜಪೇಟೆ ಕಾವೇರಿ ಪ್ರೌಢಶಾಲೆಯ ಯು.ಎಸ್. ಶ್ರೀವತ್ಸ ಗೋಣಿಕೊಪ್ಪ ಕಳತ್ಮಾಡುಮನ ಲಯನ್ಸ್ ಪ್ರೌಢಶಾಲೆಯ ಎನ್.ಟಿ.ಸಿದ್ದಾಂತ್ ಕಾವೇರಪ್ಪ ತಲಾ 619 ಅಂಕ ಪಡೆದು ತೃತೀಯ ಸ್ಥಾನ ಹಂಚಿಕೊಂಡಿದ್ದರೆ, ಮಡಿಕೇರಿ ಸಂತ ಜೋಸೆಫರ ಕಾನ್ವೆಂಟ್‌ನ ಕೆ.ಈ ಸೋನಾಶ್ರೀ, ಗೋಣಿಕೊಪ್ಪ ಸಂತ ಥೋಮಸರ ಪ್ರೌಢಶಾಲೆಯ ಸಿ.ಎಂ.ನಮನಾ ತಲಾ 618 ಅಂಕ ಪಡೆದು ನಾಲ್ಕನೇ ಸ್ಥಾನ ಮತ್ತು ಸೋಮವಾರಪೇಟೆಯ ಆವರ್ ಲೇಡಿ ಆಫ್ ವಿಕ್ಟೋರೀಸ್ ಪ್ರೌಢ ಶಾಲೆಯ ಹೆಚ್.ವಿ ಥಾನ್ವಿ ವೀರಾಜಪೇಟೆ ಕಾವೇರಿ ಪ್ರೌಢಶಾಲೆಯ ಕೆ.ಸಿ.ಮುಹಮ್ಮದ್ ಶಿಫಾನ್, ಹಾಗೂ ಕೊಡಗರಹಳ್ಳಿ ಶಾಂತಿಕೇತನ ಪ್ರೌಢಶಾಲೆಯ ಎಂ.ರೆನಿತ್ ತಲಾ 617 ಅಂಕ ಪಡೆದು 5ನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಶೇ.100 ಫಲಿತಾಂಶ ಪಡೆದ ಶಾಲೆಗಳು

ಮಡಿಕೇರಿ ತಾಲೂಕಿನ ಪೆರಾಜೆ ಜ್ಯೋತಿ ಪ್ರೌಢಶಾಲೆ, ಪಾರಾಣೆಯ ಪಾರಾಣೆ ಹೈಸ್ಕೂಲ್, ಭಾಗಮಂಡಲದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ನಾಪೋಕ್ಲುವಿನ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಗಾಳಿಬೀಡು ಸರಕಾರಿ ಪ್ರೌಢಶಾಲೆ,ಕಡಗದಾಳು ಸರಕಾರಿ ಸಂಯುಕ್ತ ಪ್ರೌಢಶಾಲೆ, ಮಕ್ಕಂದೂರು ಸರಕಾರಿ ಸಂಯುಕ್ತ ಪ್ರೌಢಶಾಲೆ, ಮೂರ್ನಾಡುವಿನ ಸರಕಾರಿ ಸಂಯುಕ್ತ ಪ್ರೌಢಶಾಲೆ, ಚೆಂಬು ಸರ್ಕಾರಿ ಪ್ರೌಢಶಾಲೆ, ಹಾಕತ್ತೂರು ಸರಕಾರಿ ಪ್ರೌಢಶಾಲೆ, ಕರಿಕೆ ಸರ್ಕಾರಿ ಪ್ರೌಢಶಾಲೆ, ಮದೆನಾಡು ಹಾಗೂ ಸಿದ್ದಾಪುರದ ಬಿಜಿಎಸ್ ಪಬ್ಲಿಕ್ ಸ್ಕೂಲ್, ಮಡಿಕೇರಿಯ ಬ್ಲಾಸಂ ಹೈಸ್ಕೂಲ್, ನಾಪೋಕ್ಲುವಿನ ಬೇತು ಎಕ್ಸೆಲ್ ಸ್ಕೂಲ್ ಆಫ್ ಎಜುಕೇಷನ್, ಸಿದ್ದಾಪುರದ ಇಕ್ರಾ ಪಬ್ಲಿಕ್ ಸ್ಕೂಲ್,ಮೂರ್ನಾಡು ಜ್ಞಾನಜ್ಯೋತಿ ಪ್ರೌಢಶಾಲೆ,ಕೋರಂಗಾಲದ ಜ್ಞಾನೋದಯ ಆಂಗ್ಲ ಮಾಧ್ಯಮ ಪ್ರೌಢಶಾಲೆ,ಕೊಟ್ಟಮುಡಿಯ ಮರ್ಕಝ್ ಪಬ್ಲಿಕ್ ಸ್ಕೂಲ್,ಕುಂಜಿಲ ಆಕ್ಸ್ ಫರ್ಡ್ ಸ್ಕೂಲ್, ನಾಪೋಕ್ಲುವಿನ ಸೇಕ್ರೆಡ್ ಹಾರ್ಟ್ ಹೈಸ್ಕೂಲ್, ಸಿದ್ದಾಪುರದ ಶ್ರೀಕೃಷ್ಣ ವಿದ್ಯಾಮಂದಿರ, ಮೂರ್ನಾಡುವಿನ ಮಾರುತಿ ಹೈಸ್ಕೂಲ್, ಚೇರಂಬಾಣೆಯ ರಾಜೇಶ್ವರಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್ ಹಾಗೂ ನಾಪೋಕ್ಲುವಿನ ಶ್ರೀ ರಾಮ ಟ್ರಸ್ಟ್ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್ ಶೇ.100 ಫಲಿತಾಂಶ ದಾಖಲಿಸಿವೆ.

ಸೋಮವಾರಪೇಟೆ ತಾಲೂಕಿನಲ್ಲಿ ಕೊಡ್ಲಿಪೇಟೆ ಜೂನಿಯರ್ ಕಾಲೇಜು, ನಂಜರಾಯಪಟ್ಟಣದ ನಂಜರಾಯಪಟ್ಟಣ ಹೈಸ್ಕೂಲ್, ಮಾದಾಪುರ ಡಿ.ಚೆನ್ನಮ್ಮ ಜೂನಿಯರ್ ಕಾಲೇಜು, ಸೋಮವಾರಪೇಟೆ ಸೈಂಟ್ ಜೋಸೆಫ್ ಹೈಸ್ಕೂಲ್, ಚೌಡ್ಲು ಡಾ.ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆ,ಬಸವನಹಳ್ಳಿ ಸರಕಾರಿ ಪ್ರೌಢಶಾಲೆ, ಕಿರಗಂದೂರು ಸರಕಾರಿ ಪ್ರೌಢಶಾಲೆ, ಏಳನೇ ಹೊಸಕೋಟೆಯ ಸರಕಾರಿ ಸಂಯುಕ್ತ ಪ್ರೌಢಶಾಲೆ, ನೇರುಗಳಲೆ ಸರಕಾರಿ ಸಂಯುಕ್ತ ಪ್ರೌಢಶಾಲೆ, ಬೆಸೂರು ಸರಕಾರಿ ಪ್ರೌಢಶಾಲೆ, ಗೋಣಿಮರೂರು ಸರಕಾರಿ ಪ್ರೌಢಶಾಲೆ, ಹಂಡ್ಲಿ ಸರಕಾರಿ ಪ್ರೌಢಶಾಲೆ, ಕಾನ್‌ಬೈಲು ಸರಕಾರಿ ಪ್ರೌಢಶಾಲೆ, ಕೂಡುಮಂಗಳೂರುಸರ್ಕಾರಿಪ್ರೌಢಶಾಲೆ,ಸೂರ್ಲಬ್ಬಿ ಸರ್ಕಾರಿ ಪ್ರೌಢಶಾಲೆ, ಸೋಮವಾರಪೇಟೆ ಸರಕಾರಿ ಜೂನಿಯರ್ ಕಾಲೇಜು, ಐಗೂರು ಸರಕಾರಿ ಜೂನಿಯರ್ ಕಾಲೇಜು, ಸುಂಟಿಕೊಪ್ಪ ಸರಕಾರಿ ಜೂನಿಯರ್ ಕಾಲೇಜು,ನೆಲ್ಲಿಹುದಿಕೇರಿ ಕರ್ನಾಟಕ ಪಬ್ಲಿಕ್ ಸ್ಕೂಲ್, ಆಲೂರು ಸಿದ್ದಾಪುರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕುಶಾಲನಗರ ಮೌಲಾನ ಆಜಾದ್ ಮಾದರಿ ಶಾಲೆ, ಕೂಡಿಗೆ ಅಂಜೆಲಾ ವಿದ್ಯಾನಿಕೇತನ ಪ್ರೌಢಶಾಲೆ, ಗೌಡಳ್ಳಿ ಬಿಜಿಎಸ್ ಪಬ್ಲಿಕ್ ಸ್ಕೂಲ್, ಶನಿವಾರಸಂತೆ ಬಿದರೂರು ಕಾವೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕುಶಾಲನಗರ ಫಾತಿಮಾ ಕಾನ್ವೆಂಟ್,ಆಲೂರು ಸಿದ್ದಾಪುರ ಜಾನಕಿ ಕಾಳಪ್ಪ ಪ್ರೌಢಶಾಲೆ, ಕೂಡಿಗೆ ಜ್ಞಾನೋದಯ ಪ್ರೌಢಶಾಲೆ ಶೇ.100 ಫಲಿತಾಂಶ ಪಡೆದುಕೊಂಡಿವೆ. ವೀರಾಜಪೇಟೆ ತಾಲೂಕಿನಲ್ಲಿ ಅಮ್ಮತ್ತಿಯ ಅಮ್ಮತ್ತಿ ಪ್ರೌಢಶಾಲೆ, ಬಿಕ್ಕೆಸೊಡ್ಲೂರು ಶ್ರೀ ಶಾರದಾ ಹೈಸ್ಕೂಲ್, ವೀರಾಜಪೇಟೆ ಸೈಂಟ್ ಆ್ಯನ್ಸ್ ಹೈಸ್ಕೂಲ್, ಪೊನ್ನಪ್ಪಸಂತೆಯದ ಎಂ.ಸಿ.ಎಸ್ ಹೈಸ್ಕೂಲ್, ಚೆನ್ನಯ್ಯನಕೋಟೆ ಸರಕಾರಿ ಸಂಯುಕ್ತ ಪ್ರೌಢಶಾಲೆ, ಹೆಗ್ಗಳ ಸರಕಾರಿ ಸಂಯುಕ್ತ ಪ್ರೌಢಶಾಲೆ, ಬಿಳಗುಂದ ಸರಕಾರಿ ಪ್ರೌಢಶಾಲೆ, ಮಾಲ್ದಾರೆ ಸರಕಾರಿ ಪ್ರೌಢಶಾಲೆ, ಮಾಯಮುಡಿ ಸರಕಾರಿ ಪ್ರೌಢಶಾಲೆ, ಪಾಲಿಬೆಟ್ಟ ಸರಕಾರಿ ಪ್ರೌಢಶಾಲೆ, ವೀರಾಜಪೇಟೆ ಸರಕಾರಿ ಜೂನಿಯರ್ ಕಾಲೇಜು, ಶೆಟ್ಟಿಗೇರಿ ಸ್ಮಾರಕ ಸರಕಾರಿ ಪ್ರೌಢಶಾಲೆ, ಬಾಳುಗೋಡು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ತಿತಿಮತಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಲ್ಲುಬಾಣೆಯ ಬದ್ರಿಯಾ ಹೈಸ್ಕೂಲ್, ವೀರಾಜಪೇಟೆ ಕೂರ್ಗ್ ವ್ಯಾಲಿ ಸ್ಕೂಲ್, ಶ್ರೀಮಂಗಲ ಜೆಸಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ನೊಕ್ಯದ ಲ್ಯಾಂಪ್ಸ್ ಅಕಾಡೆಮಿ, ಕಳತ್ಮಾಡು ಲಯನ್ಸ್ ಹೈಸ್ಕೂಲ್, ಪಾಲಿಬೆಟ್ಟ ಲೂರ್ಡ್ಸ್ ಹಿಲ್ ಹೈಸ್ಕೂಲ್, ಆಮ್ಮತ್ತಿ ನೇತಾಜಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ವೀರಾಜಪೇಟೆ ಪ್ರಗತಿ ಹೈಸ್ಕೂಲ್, ಟಿ ಶೆಟ್ಟಿಗೇರಿ ರೂಟ್ಸ್ ಇಂಗ್ಲೀಷ್ ಹೈಸ್ಕೂಲ್, ಬಿಟ್ಟಂಗಾಲ ರೋಟರಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ಪೊನ್ನಂಪೇಟೆ ಮತ್ತೂರು ಸಾಯಿಶಂಕರ ಹೈಸ್ಕೂಲ್, ಅರುವತ್ತೊಕ್ಲು ಸರ್ವದೈವತಾ ಇಂಗ್ಲೀಷ್ ಮೀಡಿಯಂ ಸ್ಕೂಲ್ , ವೀರಾಜಪೇಟೆ ಕಾವೇರಿ ಹೈಸ್ಕೂಲ್, ದೇವರಪುರ ಶ್ರೀ ರಾಜೇಶ್ವರಿ ವಿದ್ಯಾನಿಕೇತನ ಪ್ರೌಢಶಾಲೆ, ಶ್ರೀಮಂಗಲ ಹೈಸ್ಕೂಲ್, ಗೋಣಿಕೊಪ್ಪ ಸೈಂಟ್ ಥೋಮಸ್ ಹೈಸ್ಕೂಲ್, ವೀರಾಜಪೇಟೆ ತ್ರಿವೇಣಿ ಹೈಸ್ಕೂಲ್ ಶೇ.100 ಫಲಿತಾಂಶ ಪಡೆದಿವೆ.

ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿ ಅಶ್ವಿತಾ ಎಂ.ಡಿ. ರಾಜ್ಯಕ್ಕೆ 7ನೇ ರ್‍ಯಾಂಕ್

ಸುಳ್ಯ ತಾಲೂಕಿಗೆ ದ.ಕ. ಜಿಲ್ಲೆಯಲ್ಲಿ 2ನೇ ಸ್ಥಾನ

ಸುಳ್ಯ: ರಾಜ್ಯ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ದ.ಕ. ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದರೆ ಜಿಲ್ಲೆಯಲ್ಲಿ ಸುಳ್ಯ ತಾಲೂಕು 2ನೇ ಸ್ಥಾನಕ್ಕೆ ಜಿಗಿದು ಅತ್ಯುತ್ತಮ ಸಾಧನೆ ಮಾಡಿದೆ.

2024–25ರಲ್ಲಿ ಸುಳ್ಯ ತಾಲೂಕು ಫಲಿತಾಂಶದಲ್ಲಿ ಜಿಲ್ಲೆಯಲ್ಲಿ 4ನೇ ಸ್ಥಾನ ಪಡೆದಿದ್ದು 2025–26ರ ಫಲಿತಾಂಶದಲ್ಲಿ 2ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಜಿಲ್ಲೆಯಲ್ಲಿ ಪ್ರಥಮ ಸ್ಥಾನವನ್ನು ಮೂಡಬಿದಿರೆಯ ಪಡೆದುಕೊಂಡಿದೆ.

ಸುಳ್ಯ ತಾಲೂಕಿನಲ್ಲಿ ಒಟ್ಟು 1981 ವಿದ್ಯಾರ್ಥಿಗಳು ನೋಂದಣಿ ಮಾಡಲಾಗಿದ್ದು ಇದರಲ್ಲಿ ಶೇ.99.10 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಜಿಲ್ಲೆಯಲ್ಲಿ 2ನೇ ಸ್ಥಾನವನ್ನು ಗಳಿಸುವಲ್ಲಿ ಸಫಲವಾಯಿತು.

ರಾಜ್ಯಕ್ಕೆ 7ನೇ ರ್‍ಯಾಂಕ್

ಸುಳ್ಯ ಸರಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಆಶ್ವಿತಾ ಎಂ.ಡಿ. 619 ಅಂಕಗಳನ್ನು ಪಡೆದು ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದಿದ್ದು ವಿದ್ಯಾರ್ಥಿನಿಯನ್ನು ಶಾಲಾ ಎಸ್‌ಡಿಎಂಸಿ ಹಾಗೂ ಶಿಕ್ಷಕ ವೃಂದದ ವತಿಯಿಂದ ಕಾಲೇಜಿನಲ್ಲಿ ಸನ್ಮಾನಿಸಲಾಯಿತು. ಆವರು ಜಾಲ್ಸೂರು ಗ್ರಾಮದ ಮಹಾಬಲಡ್ಕ ದಾಮೋದರ ಹಾಗೂ ಶೀಲಾವತಿ ದಂಪತಿಯ ಪುತ್ರಿ.

ಶೇ.100 ಉತ್ತೀರ್ಣತೆ

ಸುಳ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಗೊಂಡ ಬಹುತೇಕ ಸರಕಾರಿ ಶಾಲೆಗಳಲ್ಲಿ ಶೇ.100 ಉತ್ತೀರ್ಣತೆ ದಾಖಲಿಸಿದೆ. ಈ ಪೈಕಿ ಅಜ್ಜಾವರ ಸರಕಾರಿ ಪ್ರೌಢಶಾಲೆ, ಏನೋ ಭನಗರ ವಿವೇಕಾನಂದ ವಿದ್ಯಾಸಂಸ್ಥೆ ಕೊಡಿಯಾಳಬೈಲು ಎಂ.ಜಿ.ಎಂ., ಸುಳ್ಯ ರೋಟರಿ ವಿದ್ಯಾ ಸಂಸ್ಥೆಯೇನೆಕಲ್ಲು ಸರಕಾರಿ ಪ್ರೌಢ ಶಾಲೆ, ಸ್ನೇಹ ವಿದ್ಯಾ ಸಂಸ್ಥೆ ಸೈಂಟ್ ಜೋಸೆಫ್ ಆಂಗ್ಲ ಮಾಧ್ಯಮ, ಸವೇರಪುರ ಆಂಗ್ಲ ಮಾಧ್ಯಮ, ಶ್ರೀ ಶಾರದ ಪ್ರೌಢ ಶಾಲೆ, ಪೆರಾಜೆ ಜ್ಯೋತಿ ಪ್ರೌಢ ಶಾಲೆ, ಗ್ರೀನ್ ವ್ಯೂ ಆಂಗ್ಲ ಮಾಧ್ಯಮ, ಜಾಲ್ಸೂರು ಪಯಸ್ವಿನಿ ಪ್ರೌಢ ಶಾಲೆ, ಗುತ್ತಿಗಾರು ಬೆಸ್ಟ್ ಕುರಿಯಕೋಸ್, ಗುತ್ತಿಗಾರು ಸರಕಾರಿ ಕಾಲೇಜ್ ಪ್ರೌಢ ಶಾಲೆ, ಬೊಕ್ಕಾಡಿ ಕುಕ್ಕುಜಡ್ಕ ಪ್ರೌಢ ಶಾಲೆ, ಭಗವಾನ್ ಶ್ರೀ ಸತ್ಯಸಾಯಿ ವಿದ್ಯಾಕೇಂದ್ರ ಕುಕ್ಕುಜಡ್ಕ ಕೆಪಿಎಸ್ಸಿ ಬೆಳ್ಳಾರೆ, ಆಲೆಟ್ಟಿ ಸರಕಾರಿ ಪ್ರೌಢ ಶಾಲೆ, ಐವರ್ನಾಡು ಪದವಿ ಪೂರ್ವ ಕಾಲೇಜ್ ಪ್ರೌಢ ಶಾಲೆ, ಗಾಂಧಿ ನಗರ ಕೆಪಿಎಸ್ಸಿ ಶಾಲೆ ಹೀಗೆ ಖಾಸಗಿ ಮತ್ತು ಸರಕಾರಿ ಶಾಲೆಗಳ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಗೊಂಡಿದ್ದಾರೆ.

ದಾರುಲ್ ಇರ್ಫಾ ಶಾಲೆ

ಬಂಟ್ವಾಳ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಂಟ್ವಾಳದ ದಾರುಲ್ ಇರ್ಫಾ ಶಾಲೆಯಿಂದ ಹಾಜರಾದ ಎಲ್ಲಾ ವಿದ್ಯಾರ್ಥಿಗಳೂ ಉತ್ತೀರ್ಣರಾಗುವ ಮೂಲಕ ಈ ವರ್ಷವೂ ಶೇ.100 ಫಲಿತಾಂಶ ದಾಖಲಿಸಿದೆ. 5 ವಿದ್ಯಾರ್ಥಿಗಳು ಉನ್ನತ ಶ್ರೇಣಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸ ದಿಗಂತ ಸಂಗಮ 5

ಶುಕ್ರವಾರ 24, ಏಪ್ರಿಲ್ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪು ಟ ಸಂ ಖ್ಯೆ

ಸುತ್ತಮುತ್ತ

ಕೋಟೇಶ್ವರ ಕೆಪಿಎಸ್‌ಗೆ ಶೇ. 99.15 ಫಲಿತಾಂಶ

ಕುಂದಾಪುರ: ಕೋಟೇಶ್ವರದ ಕರ್ನಾಟಕ ಪಬ್ಲಿಕ್ ಸ್ಕೂಲ್ ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶೇ. 99.15 ಫಲಿತಾಂಶ ದಾಖಲಿಸಿದ್ದು, ಆಂಗ್ಲ ಮಾಧ್ಯಮ ವಿಭಾಗದಲ್ಲಿ ಶೇ.100 ಫಲಿತಾಂಶ ದಾಖಲಾಗಿದೆ. ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ 87 ವಿದ್ಯಾರ್ಥಿಗಳು ಉತ್ತೀರ್ಣರಾಗುವುದರ ಮೂಲಕ ಶೇ. 100 ಫಲಿತಾಂಶದ ಸಾಧನೆ ಮಾಡಿದ್ದು, ಕನ್ನಡ ಮಾಧ್ಯಮದಲ್ಲಿ 35 ವಿದ್ಯಾರ್ಥಿಗಳಲ್ಲಿ 34 ವಿದ್ಯಾರ್ಥಿಗಳು ಉತ್ತೀರ್ಣರಾಗುವುದರ ಮೂಲಕ ಶಾಲೆಯ ಒಟ್ಟಾರೆ ಫಲಿತಾಂಶ ಶೇ.99.15 ದಾಖಲಿಸಿದೆ. ಆಂಗ್ಲ ಮಾಧ್ಯಮದಲ್ಲಿ 615 ಅಂಕ ಪಡೆದ ವಿಶ್ರುತ ಶಾಲೆಗೆ ಪ್ರಥಮ ಸ್ಥಾನಿಯಾದರೆ, 614 ಅಂಕ ಪಡೆದ ಜನ್ವಿತ ಶಾಲೆಗೆ ದ್ವಿತೀಯ, 596 ಅಂಕ ಪಡೆದ ಆಶ್ರೀತಾ ಎ. ತೊಳ ತೃತೀಯ ಸ್ಥಾನ ಪಡೆದಿದ್ದಾರೆ. ಕನ್ನಡ ಮಾಧ್ಯಮದಲ್ಲಿ 540 ಅಂಕ ಪಡೆದ ಸಾನಿತ ಶಾಲೆಗೆ ಪ್ರಥಮ, 534 ಅಂಕ ಪಡೆದ ಕಿಶನ್ ದ್ವಿತೀಯ ಮತ್ತು 533 ಅಂಕ ಪಡೆದ ಪ್ರೀತಮ್ ಜಿ. ತೃತೀಯ ಸ್ಥಾನ ಪಡೆದಿದ್ದಾರೆ.

ಸರಸ್ವತಿ ಪಿಯು ಕಾಲೇಜು ಕನ್ನಡ ಮಾಧ್ಯಮ ಪ್ರೌಢಶಾಲೆಗೆ ಶೇ.98.28

ಗಂಗೊಳ್ಳಿ: ಗಂಗೊಳ್ಳಿಯ ಸರಸ್ವತಿ ಪದವಿ ಪೂರ್ವ ಕಾಲೇಜಿನ ಕನ್ನಡ ಮಾಧ್ಯಮ ಪ್ರೌಢಶಾಲೆ ಶೇ. 98.28 ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾದ 58 ವಿದ್ಯಾರ್ಥಿಗಳಲ್ಲಿ 57 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದು 13 ಮಂದಿ ವಿದ್ಯಾರ್ಥಿಗಳು ವಿಶಿಷ್ಠ ದರ್ಜೆಯಲ್ಲಿ 32 ಮಂದಿ ಪ್ರಥಮ ಶ್ರೇಣಿಯಲ್ಲಿ 7 ಮಂದಿ ದ್ವಿತೀಯ ಶ್ರೇಣಿಯಲ್ಲಿ ಹಾಗೂ ಐವರು ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶ್ರೇಜಸ್ 594 ಅಂಕಗಳನ್ನು ಪಡೆದು ಶಾಲೆಗೆ ಅಗ್ರಸ್ಥಾನಿಯಾಗಿ ಮೂಡಿ ಬಂದಿದ್ದಾನೆ. ಶ್ರೀಯಾ ಖಾರ್ವಿ (588) ಮತ್ತು ಸೌಮ್ಯ (577) ಅಂಕ ಪಡೆದಿದ್ದಾರೆ.

ಅದಮಾರು ಪೂರ್ಣಪ್ರಜ್ಞ ಕನ್ನಡ ಪ್ರೌಢಶಾಲೆಗೆ ಶೇ. 96.15 ಫಲಿತಾಂಶ

ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಕನ್ನಡ ಮಾಧ್ಯಮ ಪ್ರೌಢಶಾಲೆಯ ಎಸ್ .ಎಸ್ ಎಲ್. ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾ 96.15 ಫಲಿತಾಂಶ ದಾಖಲಿಸಿದ್ದು ಪರೀಕ್ಷೆಗೆ ಹಾಜರಾದ 52 ವಿದ್ಯಾರ್ಥಿಗಳಲ್ಲಿ50 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 06 ಡಿಸ್ಟಿಂಕ್ಷನ್ 28 ಪ್ರಥಮ ದರ್ಜೆಯಲ್ಲಿ ಮತ್ತು 9ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಓಂಕಾರ್ ಜೋಗಿ 587 ಧೃತಿ 579 ಸೃಜನ್ 574 ಸಿಂಚನ ಜಿ 556 ಹರ್ಷಿತ 555 ಸಿಂಚನ ಸಿ. 533 ಅಂಕ ಪಡೆದಿದ್ದಾರೆ . ಸಂಸ್ಥೆಯ ಅಧ್ಯಕ್ಷ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಗೌರವ ಕಾರ್ಯದರ್ಶಿ ಶ್ರೀ ಶ್ರೀಧರ್ ಕೆ ರಾವ್, ಗೌರವ ಕೋಶಾಧಿಕಾರಿ ಶ್ರೀ ಗಣೇಶ ಹೆಬ್ಬಾರ್ , ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯಕ್ , ಮುಖ್ಯ ಶಿಕ್ಷಕ ಶ್ರೀಕಾಂತ್ ರಾವ್ ಅಭಿನಂದಿಸಿದ್ದಾರೆ.

ಜ್ಞಾನಸರಸ್ವತಿ ಶಾಲೆಗೆ ರ್‍ಯಾಂಕ್

ಬೈಂದೂರು: ಜ್ಞಾನಸರಸ್ವತಿ ಆಂಗ್ಲ ಶಾಲೆಯ ಶಿವಾನಿ ಶೆಟ್ಟಿ (617) 9ನೇ ರ್‍ಯಾಂಕ್, ಆಯುಷಾ ತನಾಜ್ (616) 10ನೇ ರ್‍ಯಾಂಕ್ ಪಡೆದಿದ್ದಾರೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇ. 100 ಫಲಿತಾಂಶ ದಾಖಲಿಸಿ ಸಾಧನೆ ಮಾಡಿದ ಎರಡು ವಲಯಗಳ 52 ಶಾಲೆಗಳು

ಕುಂದಾಪುರ ವಲಯಕ್ಕೆ ಶೇ.99.58, ಬೈಂದೂರಿಗೆ ಶೇ.97.93

ಕುಂದಾಪುರ/ಬೈಂದೂರು: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ ಕುಂದಾಪರ ವಲಯ ಶೇ. 99.58 ಫಲಿತಾಂಶ ದಾಖಲಿಸಿದ್ದು 28 ಶಾಲೆಗಳು ಶೇ. 100 ಫಲಿತಾಂಶ ದಾಖಲಿಸಿ ಉತ್ತಮ ಸಾಧನೆ ಮಾಡಿದೆ.

1450 ಹುಡುಗರು ಮತ್ತು 1297 ಹುಡುಗಿಯರು ಸಹಿತ ಒಟ್ಟು 2747 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಈ ಪೈಕಿ 1421 ಹುಡುಗರು ಮತ್ತು 1287 ಹುಡುಗಿಯರು ಸೇರಿದಂತೆ ಒಟ್ಟು 2708 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಶೇ.100 ಫಲಿತಾಂಶ ಪಡೆದ ಶಾಲೆಗಳು

ಸರಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಕುಂದಾಪುರ, ಸರಕಾರಿ ಪ್ರೌಢಶಾಲೆ ಅಲ್ಬಾಡಿ, ಕೆ.ಪಿ.ಎಸ್ ಬಿದ್ಕಲ್‌ಕಟ್ಟೆ ಸರಕಾರಿ ಪ್ರೌಢಶಾಲೆ ಕೆದೂರು, ಸರಕಾರಿ ಪ್ರೌಢಶಾಲೆ ಕಂಡ್ಲೂರು, ಸರಕಾರಿ ಪ್ರೌಢ ಶಾಲೆ ವಕ್ವಾಡಿ, ಸರಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಹಾಲಾಡಿ, ಸರಕಾರಿ ಪ್ರೌಢಶಾಲೆ ಕಾಳಾವರ, ಸರಕಾರಿ ಪ್ರೌಢಶಾಲೆ ಕೋಣಿ, ಮೊರಾರ್ಜಿ ದೇಸಾಯಿ ವಸತಿ

ಶಾಲೆ ಕೋಟೇಶ್ವರ, ಶ್ರೀಮತಿ ಇಂದಿರಾ ಗಾಂ ವಸತಿ ಶಾಲೆ ಸಿದ್ಧಾಪುರ, ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಶಂಕರನಾರಾಯಣ, ಸಂತ ಜೋಸಫರ ಪ್ರೌಢ ಶಾಲೆ ಕುಂದಾಪುರ, ಸ್ಟೆಲ್ಲಾ ಮಾರೀಸ್ ಪ್ರೌಢಶಾಲೆ ಗಂಗೊಳ್ಳಿ, ಸಂತ ಮೇರಿ ಪ್ರೌಢಶಾಲೆ ಕುಂದಾಪುರ, ಅಂಜುಮಾನ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಗಂಗೊಳ್ಳಿ, ಸೈಂಟ್ ಪಿಯುಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಂಗಳೂರು, ಹೋಲಿ ರೋಜರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಕುಂದಾಪುರ ಎಸ್. ವಿ. ಆಂಗ್ಲ ಮಾಧ್ಯಮ ಪ್ರೌಢಶಾಲೆ ಗಂಗೊಳ್ಳಿ, ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢಶಾಲೆ ಕುಂದಾಪುರ, ಮದರ್ ಥೆರೆಸಾ ಆಂಗ್ಲ, ಮಾಧ್ಯಮ ಪ್ರೌಢಶಾಲೆ ಶಂಕರನಾರಾಯಣ, ಸ್ಟೆಲ್ಲಾ ಮಾರೀಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಗಂಗೊಳ್ಳಿ, ಸರಸ್ವತಿ

ಕಳೆದ ಬಾರಿಗಿಂತ ಶೇ. 10 ಅಧಿಕ

ಬೈಂದೂರು ವಲಯದ ಒಟ್ಟು 34 ಪ್ರೌಢಶಾಲೆಗಳಲ್ಲಿ 24 ಶಾಲೆ ಶೇ.100 ಫಲಿತಾಂಶಗಳಿಸಿದೆ. ಶಿರೂರು ಪ್ರೌಢಶಾಲೆ 94% ಫಲಿತಾಂಶ ಗಳಿಸಿರುವುದು ತಾಲೂಕು ಫಲಿತಾಂಶ ಹೆಚ್ಚಳಕ್ಕೆ ಕಾರಣವಾಗಿದೆ ಮತ್ತು ಅತ್ಯುತ್ತಮ ಸಾಧನೆಯಾಗಿದೆ. ಕಳೆದ ಬಾರಿಗಿಂತ ಶೇ.10 ಫಲಿತಾಂಶ ಅಧಿಕವಾಗಿದೆ.

ಆಂಗ್ಲಮಾಧ್ಯಮ ಪ್ರೌಢಶಾಲೆ ಸಿದ್ಧಾಪುರ, ಎಕ್ಸಲೆಂಟ್ ಆಂಗ್ಲಮಾಧ್ಯಮ ಪ್ರೌಢಶಾಲೆ ಸುಣ್ಣಾರಿ, ಶ್ರೀ ಶಾರದಾ ಅಂಗ ಮಾಧ್ಯಮ ಪ್ರೌಢಶಾಲೆ ಬಸ್ರೂರು, ಡ್ಯುಯೆಲ್ ಸ್ಟಾರ್ ಆಂಗ್ಲಮಾಧ್ಯಮ ಪ್ರೌಢಶಾಲೆ ಆಮಾಸೆಬೈಲು, ಶ್ರೀ ರಾಮ ವಿದ್ಯಾ ಕೇಂದ್ರ ಕೋಡಿ, ವಿದ್ಯಾರಣ್ಯ ಆಂಗ್ಲ ಮಾಧ್ಯಮ ಪ್ರೌಢಶಾಲೆ ಯಡಾಡಿ-ಮತ್ಯಾಡಿ ವಿ.ಕೆ.ಆರ್. ಆಚಾರ್ಯ ಆಂಗಮಾಧ್ಯಮ ಪ್ರೌಢಶಾಲೆ ಕುಂದಾಪುರ ಶೇ. 99.32, ಕೆ.ಪಿ.ಎಸ್ ಕೋಟೇಶ್ವರ ಶೇ. 99.15, ಎಸ್.ವಿ. ಪದವಿಪೂರ್ವ ಕಾಲೇಜು ಗಂಗೊಳ್ಳಿ (ಪ್ರೌಢಶಾಲಾ ವಿಭಾಗ) ಶೇ.98.28, ಸ.ಪ.ಪೂ.ಕಾಲೇಜು ಶಂಕರನಾರಾಯಣ ಶೇ. 97.96, ಸರಕಾರಿ ಪ್ರೌಢಶಾಲೆ ಬಸ್ರೂರು ಶೇ. 97.30, ನಿವೇದಿತಾ ಪ್ರೌಢಶಾಲೆ ಬಸ್ರೂರು ಶೇ. 97.22, ಹಾಜಿ ಮೊಹಿದ್ದೀನ್ ಬ್ಯಾರಿ ಸ್ಮಾರಕ ಪ್ರೌಢಶಾಲೆ ಕೋಡಿ ಶೇ. 97.06, ಝೀಯಾ ಪಬ್ಲಿಕ್ ಸ್ಕೂಲ್ ಕಂಡ್ಲೂರು ಶೇ. 96.67, ಸರಕಾರಿ ಪ್ರೌಢಶಾಲೆ ಆಮಾಸೆಬೈಲು ಶೇ.96.43, ಸರಕಾರಿ ಪ್ರೌಢಶಾಲೆ ಬೇಳೂರು ಶೇ. 96.43, ತೌಹಿದ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಗಂಗೊಳ್ಳಿ ಶೇ. 96.43, ಸರಕಾರಿ ಪ್ರೌಢಶಾಲೆ ವಡೇರ ಹೋಬಳಿ ಶೇ. 96.10, ಸರಕಾರಿ ಪ್ರೌಢಶಾಲೆ ಹೆಸ್ಕತ್ತೂರು ಶೇ. 95.92, ಸರಕಾರಿ ಪ್ರೌಢಶಾಲೆ ಸಿದ್ಧಾಪುರ ಶೇ. 95.18, ಸ.ಪ.ಪೂ.ಕಾಲೇಜು ತೆಕ್ಕಟ್ಟೆ ಶೇ. 95.12, ಸರಕಾರಿ ಪ್ರೌಢಶಾಲೆ ಬೀಜಾಡಿ ಶೇ. 93.10, ಸ.ಪ.ಪೂ.ಕಾಲೇಜು ಹೊಸಂಗಡಿ ಶೇ. 93.02, ಸಂಜಯಗಾಂ ಪ್ರೌಢಶಾಲೆ ಅಂಪಾರು ಶೇ. 90.91 ಫಲಿತಾಂಶ ದಾಖಲಿಸಿದೆ.

ಬೈಂದೂರು ವಲಯದ ಸಾಧನೆ

ಬೈಂದೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.97.93% ಫಲಿತಾಂಶ ಗಳಿಸಿದೆ. ಒಟ್ಟು 34 ಪ್ರೌಢಶಾಲೆಗಳಲ್ಲಿ 24 ಶಾಲೆ ಶೇ.100 ಫಲಿತಾಂಶ ಗಳಿಸಿದೆ.

ಕನಿಷ್ಠ ಫಲಿತಾಂಶ ದಾಖಲಿಸಿದ ಶಾಲೆಗಳು

ನಾವುಂದ ಶೇ. 87.5 ಹಾಗೂ ಗ್ರೇಗರಿ ಪ್ರೌಢಶಾಲೆ 90.90 ಕ್ಷೇತ್ರದ ಕನಿಷ್ಠ ಫಲಿತಾಂಶವಾಗಿದೆ.

ಒಟ್ಟು 2036 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅವರಲ್ಲಿ 1994 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. 42 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಉಪ್ಪುಂದ ಸರ್ಕಾರಿ ಪದವಿ ಪೂರ್ವ ಕಾಲೇಜು ಪೌಢಶಾಲಾ ವಿಭಾಗದ 10ನೇ ತರಗತಿ ವಿದ್ಯಾರ್ಥಿನಿ ಸಾನಿಧ್ಯ ಮಯ್ಯ ಹಾಗೂ ನಂದೀಪನ್ ಆಂಗ್ಲಮಾಧ್ಯಮ ಶಾಲೆಯ ಲತಿಕಾ ಎಲ್. ಪೂಜಾರಿ 621 ಅಂಕ ಗಳಿಸಿದ್ದಾರೆ.

ಮರವಂತೆ ಸರ್ಕಾರಿ ಪ್ರೌಢಶಾಲೆಯ ಸಮನ್ವಿ ಎಸ್. ಮೊಗವೀರ, ನಂದೀಪನ್ ಆಂಗ್ಲ ಮಾಧ್ಯಮ ಶಾಲೆಯ ದೀಪ್ತಿ ರಾಜೇಶ ಪೂಜಾರಿ ಮತ್ತು ಸಾಗರಿ ಶೆಟ್ಟಿ ತಲಾ 618 ಅಂಕಗಳಿಸುವ ಮೂಲಕ ಕೃಷ್ಣಶಿಕ ಸಾಧನೆ ಮಾಡಿದ್ದಾರೆ.

ವಿವೇಕ ಆಂಗ್ಲಮಾಧ್ಯಮ ಪ್ರೌಢಶಾಲೆಗೆ ಶೇ.100, ಚೈತನ್ಯಶ್ರೀಗೆ ದ್ವಿತೀಯ ರ್‍ಯಾಂಕ್



■ 18 ಮಂದಿಗೆ 600ಕ್ಕೂ ಅಧಿಕ ಅಂಕ

ಕೋಟ: ಕೋಟ ವಿವೇಕ ಆಂಗ್ಲಮಾಧ್ಯಮ ಪ್ರೌಢಶಾಲಯ ವಿದ್ಯಾರ್ಥಿನಿ ಚೈತನ್ಯಶ್ರೀ ಆರ್. ಉಡುಪ 624 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ, ಶಾಲೆಯಲ್ಲಿ ಪ್ರಥಮಸ್ಥಾನವನ್ನು ಪಡೆದಿದ್ದಾಳೆ.

2025-26 ಪ್ರಸಕ್ತ ವರ್ಷದಲ್ಲಿ 136 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಅವರಲ್ಲಿ 18 ವಿದ್ಯಾರ್ಥಿಗಳು 600ಕ್ಕೂ ಅಧಿಕ ಅಂಕಗಳನ್ನು ಪಡೆದಿದ್ದಾರೆ. ಸಂಕಲ್ಪ್ ಕುಮಾರ್ 622 ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನಿಯಾಗಿ, ಪಿ. ಅಭಯ ಸೋಮಯಾಜಿ, ಸಮೃದ್ಧಿ ಎಸ್ ಪೈ, ಸೃಜನಿ ಜೆ ಪೂಜಾರಿ 616 ಅಂಕಗಳನ್ನು ಪಡೆದು ಶಾಲೆಗೆ ತೃತೀಯ ಸ್ಥಾನಿಗಳಾಗಿ ಮೂಡಿಬಂದಿದ್ದಾರೆ. 87 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಎ ಗ್ರೇಡ್ ಪಡೆದವರ ವಿವರ

ಪಲ್ಲವಿ ರಾವ್ 615, ಪ್ರಕೃತಿ, ಎಂ ಕೋಟ್ಯಾನ್ 612, ಸುವಿತ್ ಪಿ ಶೆಟ್ಟಿ 608, ತೇಜಸ್ 608, ಚಿನ್ಮಯ್ ಕೆ. 606, ವೈಭವಿ ಅಡಿಗ ಎಸ್. 606, ನೀಲ್ ಜಾಕೋಬ್ ಅಂಬ್ಲೆರ್ 605, ಸಾನ್ವಿ ಎಸ್ 604, ಸಿಂಚನಾ ಎಸ್. ಪೂಜಾರಿ 604, ಮನೀಶ್ ಬಿ. 603, ಯು ಆದಿತಿ ಕಾಮತ್ 602, ಪ್ರಸೀದಾ 601, ಸಾನ್ವಿ ವಿ.ಎನ್. 601, ಆರ್ಯ ಹೆಗ್ಡೆ 599, ಸಿಂಚನಾ 599, ಅಭಿಜ್ಞ ಎಚ್ 598, ಚೈತ್ರಾ 597, ಎಚ್. ಸುಮಂತ ಐತಾಳ್ 597, ಸ್ಪಂದನ್ ಎಸ್ ಶೆಟ್ಟಿ 597, ತೃಪ್ತಿ ಕೆ.ಬಿ. 596, ವೈಷ್ಣವಿ ಅಡಿಗ ಎಸ್. 595, ಸಾನ್ವಿ ವಿಜಯ್ ಪೂಜಾರಿ 593, ಅಭಿಷೇಕ್ ಆರ್. 591, ಅವನಿ ದೇವಾಡಿಗ 591, ಪಾವನಿ ಸುರೇಶ್ ಖಾರ್ವಿ 591,

ರಮ್ಯ ಆರ್ 591, ಆಕಿತಾ 590, ಪ್ರೇರಣಾ ಜಿ 590, ಶಾಹಿಮಾ 589, ಶ್ರದ್ಧಾ ಪಿ 589, ಜಿಷ್ಣು ಆರ್ ಹೆಬ್ಬಾರ್ 588, ಕಾರ್ತಿಕ್ 588, ಶ್ರೀರಕ್ಷಾ ಎಸ್ ಜೋಯಿಸ್, 588, ನಿಯತಿ ಪ್ರಭು 586, ಸಚ್ಚಿದಾನಂದ ವೈ ಪುರಾಣಿಕ್ 586, ದೀಪ್ತಿ ಆಚಾರ್ಯ ಕೆ, 585, ರುತ್ವಿಕ್ ಕೆ ಆರ್ 585, ಸಾನ್ವಿ 584, ಚೈತನ್ಯಾ 583, ನಿಶಾಂತ್ 582, ಸಂಹಿತಾ ಕೆ ಎಸ್ 582, ಅನ್ವಿತ್ ಅನಿಲ್ ಶೆಟ್ಟಿ 581, ಬೃಂದಾ ಆರ್ 581.

ಸುಜ್ಞಾನ ಟ್ರಸ್ಟ್‌ನ ವಿದ್ಯಾರಣ್ಯ ಶಾಲೆಗೆ ನೂರಕ್ಕೆ ನೂರು ಫಲಿತಾಂಶ

ಕುಂದಾಪುರ: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಪ್ರಕಟಿಸಿದ 2025-26ನೇ ಸಾಲಿನ ಎಸ್. ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದಲ್ಲಿ ಕುಂದಾಪುರದ ಯಡಾಡಿ-ಮತ್ಯಾಡಿಯ ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ವಿದ್ಯಾರಣ್ಯ ಆಂಗ್ಲ ಮಾಧ್ಯಮ ಶಾಲೆಯು ಅಭೂತಪೂರ್ವ ಸಾಧನೆ ಮಾಡಿದೆ.

ಸಮೀಕ್ಷಾ 621 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಮಟ್ಟದಲ್ಲಿ 5ನೇ ರ್‍ಯಾಂಕ್ ಪಡೆದು ಶಾಲೆಗೆ ಮತ್ತು ಜಿಲ್ಲೆಗೆ ಕೀರ್ತಿ ತಂದಿದ್ದಾಳೆ. ಈ ಬಾರಿ ಪರೀಕ್ಷೆಗೆ ಹಾಜರಾದ ಶಾಲೆಯ ಒಟ್ಟು 129 ಉತ್ತೀರ್ಣರಾಗಿದ್ದು 11 ವಿದ್ಯಾರ್ಥಿಗಳು 600ಕ್ಕೂ ಅಧಿಕ ಅಂಕ, 17 ವಿದ್ಯಾರ್ಥಿಗಳು ಶೇ.95ಕ್ಕಿಂತ ಅಧಿಕ ಅಂಕ ಪಡೆದರೆ, 67 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಅಂಕ ಪಡೆದಿದ್ದಾರೆ.

ಶ್ರೇಯಸ್ ಎಸ್. ಚಿಕ್ಕಮಠ (615), ಆಯಿಷ ಆನಾಮ್ (611), ಮನ್ವಿತ್ ಬಿ. (611), ಅಭಿಕ್ಷಾ (610), ಸೂರ್ಯಪ್ರಕಾಶ್ ಬಿ.ಗಾಣಿಗ (610), ನಿವೇದಿತಾ ಚಂದ್ರ ಮೌಳೇಶ್ವರ ಬಾದಾಮಿ (609), ಶ್ರೀಹರಿ ಮನೀಷ್ (607), ಸನ್ವಿತ್ ಜಿ. ಪೂಜಾರಿ (607), ಚಾರ್ವಿ ಪಿ. ಶೆಟ್ಟಿ (605), ಕೌಶಿಕ್ ಶೆಣೈ (600), ಶ್ರೇಯಾ (599), ನಿಹಾರಿಕಾ ರೆಡ್ಡಿ (596), ಸಂಚಿತಾ ಆರ್. ಶೆಟ್ಟಿ (596), ಸಿ.ಎಂ. ಧೀರಜ್ ಗೌಡ (595), ದಶಮಿ (595), ಶ್ರೀಶಾ ಎಸ್. ಶೆಟ್ಟಿ (594), ಪ್ರಜ್ವಲ್ ಎನ್ .ಕುಲಾಲ್ (593), ಬ್ರಾಹ್ಮಿ ಆರ್. ಶೆಟ್ಟಿ (592), ಸಾಯಿನಿಧಿ ಸಿ. ಶೆಟ್ಟಿ (592), ಅನುಜ್ ಈಶ್ವರ್ ಅಂಬಲಿ (591), ಬಿ.ಎ. ಶಾಹಿಲ್ (588), ಎಚ್.ವಿಜಯಾ ಪೈ (588), ಪ್ರತೀಕ್ಷಾ ಮಡಿವಾಳ (588), ಪ್ರಕೃತಿ ಶೆಟ್ಟಿ (586), ಪೃಥ್ವಿ ರಮೇಶ್ ಶಿರೆಣ್ಣವರ್ (586), ಪ್ರಥಮ ಆಚಾರ್ (585), ಪ್ರೀತಮ್ ಕುಲಾಲ್ (585), ವೈಷ್ಣವಿ ಮಾಧವ ಪ್ರಭು (584), ನವ್ಯಶ್ರೀ (583), ಸಂಪತ್ ಶೆಟ್ಟಿ (580).

ಶೇ. 100 ಫಲಿತಾಂಶ ದಾಖಲಿಸಿದ ಶಿರ್ವ ಹಿಂದೂ ಪ್ರೌಢಶಾಲೆ, 7 ಮಂದಿಗೆ ವಿಶಿಷ್ಟ ಶ್ರೇಣಿ



ಶಿರ್ವ: ಹಿಂದೂ ಪ್ರೌಢಶಾಲೆಯ ಎಲ್ಲ 44 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಿಸಿದೆ. ವಿಶಿಷ್ಟ ಶ್ರೇಣಿಯಲ್ಲಿ 7, ಪ್ರಥಮ ಶ್ರೇಣಿಯಲ್ಲಿ 28, ದ್ವಿತೀಯ ಶ್ರೇಣಿಯಲ್ಲಿ 09 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶಾಲೆಯಲ್ಲಿ ಪ್ರಥಮ ಸ್ಥಾನಿಯಾಗಿ ದ್ದಾರೆ. ತ್ರಿಷಾ ತನಿಷಾ 586(93.76%) ಅಂಕ ಗಳಿಸಿ 585(93.6%), ಧನುಶ್ರೀ 570(92.7%).

ಸರಸ್ವತಿ ವಿದ್ಯಾಲಯಕ್ಕೆ ಶೇ. 100

ಗಂಗೊಳ್ಳಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆ ಶೇ. 100 ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾದ 44 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ.

18 ವಿದ್ಯಾರ್ಥಿಗಳು ವಿಶಿಷ್ಟ ದರ್ಜೆಯಲ್ಲಿ, 24 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 613 ಅಂಕಗಳನ್ನು ಪಡೆದಿರುವ ಶ್ರೀನಿವಾಸ ವಾಮನ ಪೈ ಶಾಲೆಗೆ ಪ್ರಥಮ ಸ್ಥಾನ ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಶ್

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ಪುಟ ಸಂಖ್ಯೆ website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಶುಕ್ರವಾರ 24, ಏಪ್ರಿಲ್ 2026

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲದಲ್ಲಿ ಪುನಃಪ್ರತಿಷ್ಠೆ, ಅಷ್ಟಬಂಧ ಬ್ರಹ್ಮಕಲಶಾಭಿಷೇಕ ಸಂಭ್ರಮ ಆರಂಭ

ಶೋಭಾಯಾತ್ರೆಯಲ್ಲಿ ದಿವ್ಯಾಭರಣ, ಇತರ ಪರಿಕರಗಳ ಆಗಮನ

ಪಡುಬಿದ್ರಿ: ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ನೂತನವಾಗಿ ನಿರ್ಮಿಸಲ್ಪಟ್ಟ ಶಿಲಾಮಯ ಗರ್ಭಗುಡಿಗಳಲ್ಲಿಏ.23ರಿಂದ ಮೇ 14ರವರೆಗೆ ಶ್ರೀ ಮಹಾಲಿಂಗೇಶ್ವರ ಹಾಗೂ ಶ್ರೀ ಮಹಾಗಣಪತಿ ದೇವರ ಪುನಃಪ್ರತಿಷ್ಠೆ ಅಷ್ಟಬಂಧಬ್ರಹ್ಮಕಲಶಾಭಿಷೇಕವುಶ್ರೀಕ್ಷೇತ್ರದತಂತ್ರಿ ಉಡುಪಿ ಕೊಡವೂರಿನ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಜರಗಲಿದೆ.ಗುರುವಾರ ಬೆಳಿಗ್ಗೆ ದಾನಿಗಳಿಂದ ಶ್ರೀ ದೇವರಿಗೆ ಸಮರ್ಪಿಸಲ್ಪಡುವ ದಿವ್ಯಾಭರಣಗಳು ಹಾಗೂ ಇತರ ಪರಿಕರಗಳ ಶೋಭಾಯಾತ್ರೆಯು ಪಡುಬಿದ್ರಿ ಗುಂಡ್ಲಾಡಿ ಕಟ್ಟೆಯಿಂದ ಶ್ರೀದೇವಳಕ್ಕೆ ಆಗಮಿಸಿತು.

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ. ಕೆ. ಪ್ರಕಾಶ್ ಶೆಟ್ಟಿಇವರಿಂದ ಶ್ರೀ ಮಹಾಲಿಂಗೇಶ್ವರ ದೇವರಿಗೆ ರಜತಪಾಣಿಪೀಠ ಸಹಿತ ಸ್ವರ್ಣಕವಚ, ಶ್ರೀ ಮಹಾಗಣಪತಿ ದೇವರಿಗೆ ಪಾಣಿಪೀಠ ಸಹಿತ ರಜತಕವಚ, ಪಿ. ರಾಘವೇಂದ್ರ ನಾವಡ ಕುಟುಂಬಸ್ಥರಿಂದ ಶ್ರೀ ಮಹಾಲಿಂಗೇಶ್ವರ ದೇವರ ಗರ್ಭಗುಡಿಗೆ ಸ್ವರ್ಣಶಿಖರ, ಪಡುಬಿದ್ರಿ ಆಶಾ ಸದನದ ದಿ. ಆಶಾ ಸುಬ್ಬಯ್ಯ ಹೆಗ್ಡೆ ಇವರ ಸ್ಮರಣಾರ್ಥ ಮಕ್ಕಳಿಂದ ಶ್ರೀ ಗಣಪತಿ ದೇವರ ಗರ್ಭಗುಡಿಗೆ ಸ್ವರ್ಣಶಿಖರ, ಕಂಕಣಗುತ್ತು ಹಿತಾವತಿ ಮಹಾಬಲ ಭಂಡಾರಿ ಇವರಿಂದ ಶ್ರೀ ಮಹಾಲಿಂಗೇಶ್ವರ ದೇವರ ಗರ್ಭಗುಡಿಗೆ ರಜತದ್ವಾರ, ಪಡುಬಿದ್ರಿ ಗುಡ್ಡೆಚ್ಚಿ ದಿ. ಸೀತಾರಾಮ ಭಟ್ ಹಾಗೂ ದಿ. ನಾರಾಯಣ ಭಟ್ ಇವರ ಕುಟುಂಬಸ್ಥರಿಂದ ಶ್ರೀ ಮಹಾಲಿಂಗೇಶ್ವರ ದೇವರ ಗರ್ಭಗುಡಿಯ ಪಶ್ಚಿಮದಿಕ್ಕಿನಲ್ಲಿ ರಜತಮಯ ದ್ವಾರ, ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ಮಾತೃಮಂಡಳಿಯವರಿಂದ ನಂದಿವಿಗ್ರಹಕ್ಕೆ ರಜತಮುಖಿ ಹಾಗೂ ದೇವಾಡಿಗ ಸಮಾಜದವರಿಂದ ನೂತನ ಪಂಚವಾದ್ಯಗಳು ಹಾಗೂ ಇತರ ಪರಿಕರಗಳ ಸಮರ್ಪಣೆಗಾಗಿ ಭವ್ಯ ಶೋಭಾಯಾತ್ರೆಯಲ್ಲಿ ಆಗಮಿಸಿತ್ತು.

ಕಲಶಧಾರಿ ಮಹಿಳೆಯರು, ನಾಸಿಕ್ ಬ್ಯಾಂಡ್, ಕುಣಿತ ಭಜನೆ ತಂಡ, ಟ್ಯಾಬ್ಲೋ, ತಟ್ಟಿರಾಯ, ಸಮವಸ್ತ್ರಧಾರೀ ಭಕ್ತ ಜನ ಸಮೂಹದೊಂದಿಗೆ ಕೊಂಬು, ಕಹಳೆ, ವಾದ್ಯ ಸಹಿತ ಇತರೇ ವೇಷ ಭೂಷಣಗಳೊಂದಿಗೆ ಶೋಭಾಯಾತ್ರೆಯು ಶ್ರೀ ದೇವಳಕ್ಕೆ ಆಗಮಿಸಿತು. ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷರು ಹಾಗೂ ಬೆಂಗಳೂರು ಉದ್ಯಮಿಗಳಾದ ಡಾ.ಕೆ.ಪ್ರಕಾಶ್ ಶೆಟ್ಟಿ ಅವರು ಶೋಭಾ ಯಾತ್ರೆಗೆ ಚಾಲನೆಯನ್ನು ನೀಡಿದರು.ಈ ಸಂದರ್ಭ ಗೌರವಾಧ್ಯಕ್ಷ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ ದೇಗುಲದ ಆನುವಂಶಿಕ ಮೊಕ್ತೇಸರರಾದ ರತ್ನಾಕರ ರಾಜ್ ಅರಸ್ ಕನ್ಯಕ್ಕೆ ಬಲ್ಲಾಳರು ಮತ್ತು ಪಡುಬಿದ್ರಿ ಪೇಟೆಮನೆ ಪಿ. ಭವಾನಿ ಶಂಕರ ಹೆಗ್ಡೆ ಕೊರ್ನಾಯ ಶ್ರೀಪತಿ ರಾವ್, ಉಪಾಧ್ಯಕ್ಷರಾದ ಪಿ. ರವೀಂದ್ರನಾಥ ಜಿ. ಹೆಗ್ಡೆ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಅರ್ಚಕ ಎಚ್. ಪದ್ಮನಾಭ ಭಟ್, ವೈ ಗುರುರಾಜ ಭಟ್, ನವೀನ್ ಚಂದ್ರ ಜೆ. ಶೆಟ್ಟಿ ಸಂತೋಷ್ ಶೆಟ್ಟಿ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ದೇವಸ್ಥಾನ ಕಾಷ್ಠ, ಶಿಲ್ಪಕಲಾ ವೈಭವದ ಮೆರುಗು ಪಡೆದಿದೆ: ಆನೆಗುಂದಿಶ್ರೀ

ಪಡುಬಿದ್ರಿ: ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲ ಕಾಷ್ಠ ಶಿಲ್ಪಕಲಾ ವೈಭವದ ಮೆರುಗು ಪಡೆದಿದೆ. ಡಾ.ಕೆ. ಪ್ರಕಾಶ್ ಶೆಟ್ಟಿ ನಾಯಕತ್ವದಲ್ಲಿ ಭಕ್ತಾಧಿಗಳು ವಿಶ್ವಾಸ ಇರಿಸಿದ್ದರಿಂದ 11 ತಿಂಗಳಲ್ಲಿಯೇ ಅದ್ಭುತ ದೇಗುಲ ಮೂಡಿಬಂದಿದೆ ಎಂದು ಕಟಪಾಡಿ ಪಡುಕುತ್ಯಾರು ಆನೆಗುಂದಿ ಸಂಸ್ಥಾನದ ಶ್ರೀ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿ ಹೇಳಿದರು.

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವ ಸ್ಥಾನದ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವದ ಸಂದರ್ಭ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಮಂಗಳೂರು ಗುರುಪುರ ಶ್ರೀ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಎಲ್ಲರೂ ಒಗ್ಗಟ್ಟಿನಿಂದ ಮಹಾಕ್ಷೇತ್ರವನ್ನು ನಿರ್ಮಿಸಿದ್ದು,, ಸಂಸ್ಕಾರ – ಸಂಸ್ಕೃತಿಯು ಮಹಾ ಪ್ರವಾಹವಾಗಿ ಹರಿಯಲಿ ಎಂದರು.

ಮಹಾಮಹೋಪಾಧ್ಯಾಯ ಡಾ. ಶತಾವಧಾನಿ ಉಡುಪಿ ರಾಮನಾಥ ಆಚಾರ್ಯ ಉಪನ್ಯಾಸ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ.ಕೆ. ಪ್ರಕಾಶ್ ಶೆಟ್ಟಿ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾಜಿ ಸಚಿವ ವಿನಯಕುಮಾರ್ ಸೊರಕೆ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕರಾವಳಿ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಎ. ಗಫೂರ್, ಶ್ರೀ ಕ್ಷೇತ್ರದ ತಂತ್ರಿ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ, ಆನುವಂಶಿಕ ಮೊಕ್ತೇಸರ ರತ್ನಾಕರರಾಜ ಅರಸು ಕನ್ಯಕ್ಕ ಬಲ್ಲಾಳ್ತಿ, ಪೇಟೆಮನೆ ಭವಾನಿಶಂಕರ್ ಹೆಗ್ಡೆ ಕೊರ್ನಾಯ ಶ್ರೀಪತಿ ರಾವ್, ಜೀರ್ಣೋದ್ಧಾರ ಸಮಿತಿಯ

ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾವಡ, ವನದುರ್ಗಾ ಟ್ರಸ್ಟ್ ಕಾರ್ಯದರ್ಶಿ ವೈ.ಎನ್. ರಾಮಚಂದ್ರ ರಾವ್, ಪಡುಬಿದ್ರಿ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನವಾರ್ವತಿ ದೇವಸ್ಥಾನದ ಮೊಕ್ತೇಸರ ಜಗದಾಭಿರಾಮಸ್ವಾಮಿ, ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದ ಮೊಕ್ತೇಸರರಾದ ಪ್ರಶಾಂತ ಶೆಣೈ, ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮೊಕ್ತೇಸರ ಚಿತೇಂದ್ರ ಶೆಟ್ಟಿ ಆಡಳಿತ ಮೊಕ್ತೇಸರ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯಶಶಿಧರ್ ಶೆಟ್ಟಿ ಎಲ್ಲೂರು, ಪಡುಬಿದ್ರಿ ಬಂಟರ ಸಂಘದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಪಡುಬಿದ್ರಿ ಗಣಪತಿ ಪ್ರೌಢಶಾಲಾ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ನವೀನಚಂದ್ರ ಶೆಟ್ಟಿ ದುರ್ಗಾದೇವಿ ಭಜನಾ ಮಂದಿರದ ಅಧ್ಯಕ್ಷ ಸಂಪತ್ ಆಚಾರ್ಯ, ಬಿಲ್ಲವ ಸೇವಾ ಸಂಘದ ಅಧ್ಯಕ್ಷ ವೈ. ಸುಧೀರ್ ಕುಮಾರ್, ನಡಿಪಟ್ಣ ಮೊಗವೀರ ಸಭಾ ಅಧ್ಯಕ್ಷ ಹರೀಶ್ ಪುತ್ರನ್, ಪಡುಬಿದ್ರಿ ಕಾಡಿಪಟ್ಟ ಮಹಾನಭಾದ ಅಧ್ಯಕ್ಷ ಅಶೋಕ್ ಸಾಲ್ಯಾನ್, ದೇವಾಡಿಗ ಸಂಘದ ಅಧ್ಯಕ್ಷರಾದ ಭರತ್ ದೇವಾಡಿಗ, ಭಂಡಾರಿ ಸಮಾಜ ಅಧ್ಯಕ್ಷ ವಿನಯ ಡಿ. ಭಂಡಾರಿ, ಶ್ರೀ ವೀರಭದ್ರ ದೇವಸ್ಥಾನದ ಮೊಕ್ತೇಸರ ಸುಂದರ ಶೆಟ್ಟಿಗಾರ್, ಕೊರಗ ಸಮಾಜ ಅಧ್ಯಕ್ಷ ಸೋಮಶೇಖರ, ದೈವರಾಜ ಕೋರ್ದಬ್ಬು ಏಳುಮಾಗಣೆ ಮುಂಡಾಲ ಸಮಾಜದ ಅಧ್ಯಕ್ಷ ಸದಾನಂದ ಬೊಗ್ಗೊರಿ ಲಚ್ಚಿಲ್, ಬ್ರಹ್ಮಮುಗೆರ್ಕಳ ಸಮಾಜದ ಅಧ್ಯಕ್ಷ ವಿಠಲ ಕೋಟ್ಯಾನ್, ಮೂಲ್ಯ ಸಮಾಜದ ಅಧ್ಯಕ್ಷ ಅಣ್ಣು ಮೂಲ್ಯ, ಪಾಣರ ಸಮಾಜದ ಮುಖಂಡ ರಮೇಶ್, ಉಡುಪಿ ಜಿಲ್ಲೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಪಡುಬಿದ್ರಿ ಸುಜ್ಲಾನ್, ಸೆಜ್ ಆರ್ಥಿಕ ವಲಯದ ಹಿರಿಯ ಮಹಾಪ್ರಬಂಧಕ ಅಶೋಕ ಕುಮಾರ ಶೆಟ್ಟಿ ಆರ್ಥಿಕ ಸಮಿತಿಯ ಇನ್ನಾ ಕುರ್ಕಿಲ್ ಬೆಟ್ಟು ಸಂತೋಷ್ ಶೆಟ್ಟಿ ಪೂನಾ, ಧಾರ್ಮಿಕ ಚಿಂತಕ ದಾಮೋದರ ಶರ್ಮಾ ಬಾರ್ಕೂರು ವೇದಿಕೆಯಲ್ಲಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ ವಂದಿಸಿದರು. ಡಾ.ರಾಘವೇಂದ್ರ ರಾವ್, ಶ್ರೀಧರ್ ಆಚಾರ್ ಕಾರ್ಯಕ್ರಮ ನಿರೂಪಿಸಿದರು.

23ನೇ ಬಾರಿ ಪ್ರಥಮ ಶ್ರೇಣಿಯೊಂದಿಗೆ 100% ಫಲಿತಾಂಶ

ವಿಠಲ್ ಜೇಸೀಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ವಿಟ್ಲ

ಬಸವನಗುಡಿ, ವಿಟ್ಲ, ದ.ಕ. ಮೊ: 9449448977

Topper-1

DAYAL K 619

Topper-2

SHAMA S P 616

ಫಲಿತಾಂಶ ವೈಶಿಷ್ಟ್ಯಗಳು

ಒಟ್ಟು ಹಾಜರಾದವರು- 105

600 ಮೇಲ್ಪಟ್ಟವರು 21 | A+ 51 | A 37 | B+ 16 | B 1

23ನೇ ಬಾರಿ 10ನೇ ತರಗತಿಯಲ್ಲಿ ಸತತವಾಗಿ 100 ಶೇ. ಫಲಿತಾಂಶ

ವಿಶೇಷತೆ ಈ ಬಾರಿ ಶೇ. 100 ಪ್ರಥಮ ದರ್ಜೆ ಫಲಿತಾಂಶ

Quality Weightage Percentage 95.34%

SSLC TOPPERS-2026

ಅಭಿನಂದನೆಗಳು

2025-26ನೇ ಸಾಲಿನಲ್ಲಿ ವಿಶಿಷ್ಟ ಶ್ರೇಣಿ ಮತ್ತು ಗರಿಷ್ಠ ಪ್ರಥಮ ಶ್ರೇಣಿಯ ಅಂಕಗಳೊಂದಿಗೆ ತೇರ್ಗಡೆ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ಪೋಷಕರಿಗೆ ಅಭಿನಂದನೆಗಳು. ಶ್ರಮಿಸಿದ ಎಲ್ಲಾ ಶಿಕ್ಷಕರಿಗೂ, ಪ್ರೋತ್ಸಾಹಿಸಿದ ಎಲ್ಲರಿಗೂ ಅಭಿನಂದನೆಗಳು.

C PRATHAM KAMATH 614 | JYESHTA RAI 614 | SHEK ABDUL RAHEEL 614 | ANUJNA P 613 | N NAVYA BHAT 611 | YAANVI 610 | ADYA D SHASTRY 608 | SATHRAJITH S DHANGAR 608 | SHAMANTH SHARATH SHARMA D N 608 | MONISH L 607 | SHIDHA FATHIMA 607 | SANJANA M 606

AATHMIKA PAI N 605 | AKSHAY M 604 | DWISHA B 604 | VIBHAV B K 604 | ANKITHA B R 603 | INCHARA K 601 | KANCHAN YASH RAJ DEVADAS 601 | FATHIMATUL ZAKYA 598 | NIHAL S RAI 598 | SHRIHARI 598 | KASH SHANKAR 597 | SANJITHA SHETTY 594

VAIBHAVI 594 | DHANWITH M H 593 | ABHINAV KRISHNA G K 591 | NIHA HALEEMA Y H 590 | DHRITHI NAYAK K 588 | PRANJALI P BHANDARY 588 | SAMANVI G RAI 586 | DHRITHI Y N 584 | PRATHEEKSHA M 583 | SHAMEELA AHMAD 583 | HITHESH 579 | ADITHYA S 578

MANYA P S 578 | VRIDHI B R 578 | SUHANA PARVIN 577 | NAMRUTHA S 575 | P SUBRAMANYA SHASTRY 575 | SHAHBAN RAZMIYA 575 | NEHA N D 572 | K M SATHVIK BHAT 571 | MOHAMMAD RAAZI 570 | DAKSHANYA K 569 | HIMA G 564 | SHASHWATH RAI 564 | APARNA ROUL 563

2026-27ರ ದಾಖಲಾತಿ ಆರಂಭಗೊಂಡಿದೆ

ಶಿಶುವಿಹಾರ, LKG, UKG, ಪ್ರಾಥಮಿಕ ಮತ್ತು ಪ್ರೌಢ ವಿಭಾಗಗಳಿಗೆ ವಿಚಾರಿಸಿರಿ: 9449448977

Admission Open 2026-27

Pre- Nursery, Nursery, Primary & High School

ನಮ್ಮ ವಿಶೇಷತೆಗಳು: ❖ ಗುಣಾತ್ಮಕ ಶಿಕ್ಷಣ ❖ ಸೃಜನಾತ್ಮಕ, ಕ್ರಿಯಾಶೀಲ ಕಲಿಕೆ ❖ ಆರೋಗ್ಯಕರ ವಾತಾವರಣ ❖ ಸುಸಜ್ಜಿತ ಸಭಾಭವನ ❖ಕ್ರೀಡಾ ಚಟುವಟಿಕೆಗಳು (ಹೊರ & ಒಳ) ❖ ಸುಸಜ್ಜಿತ ವಿಜ್ಞಾನ ಮತ್ತು ಗಣಕಶಾಸ್ತ್ರ ಪ್ರಯೋಗಾಲಯ ❖ ಪೌಷ್ಟಿಕಾಂಶಯುಕ್ತ ಮಧ್ಯಾಹ್ನ ಊಟ ❖ಸ್ಥಳೀಯ ಪ್ರದೇಶಗಳಿಗೆ ಶಾಲಾ ವಾಹನ ಸೌಲಭ್ಯ

ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಪ್ರಾಂಶುಪಾಲರು, ಉಪ ಪ್ರಾಂಶುಪಾಲರು, ಮತ್ತು ಶಿಕ್ಷಕ ಸಿಬ್ಬಂದಿಗಳು

ವಿಠಲ್ ಜೇಸೀಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ವಿಟ್ಲ